ಸಂಪುಟ: 04 ಸಂಚಿಕೆ: 282 ಪುಟಗಳು: 08 ಬುಧವಾರ 25 ಡಿಸೆಂಬರ್ 2024 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಹಿಂದಿರುಗಿ ನೋಡುವ ಅವಶ್ಯಕತೆ ಇಲ್ಲ ಮುಂದೆ ನೋಡಿ ನಮಗೆ ಅನಂತ ಶಕ್ತಿ ಅನಂತ ಉತ್ಸಾಹ ಅನಂತ ತಾಳ್ಮೆ ಬೇಕು, ಆಗ ಮಾತ್ರ ಮಹತ್ವಾರ್ಯಗಳನ್ನು ನಾವು ಸಾಧಿಸಬಹುದು

## ಶೀಘ್ರವೇ ರಾಜ್ಯದ ರೈತರ ಮೇಲಿನ ಕೇಸ್ ವಾಪಾಸ್

• ಉದಯವಾಹಿನಿ, ಹುಬ್ಬಳ್ಳಿ

**ಗೃಹ ಸಚಿವ ಡಾ.ಜಿ ಪರಮೇಶ್ವರ್ ಘೋಷಣೆ**

ರಾಜ್ಯದ ವಿವಿಧ ಠಾಣೆಯಲ್ಲಿ ರೈತರ ಮೇಲೆ ದಾಖಲಾಗಿರುವಂತ ಕೇಸ್ ಹಿಂಪಡೆಯುವ ಬಗ್ಗೆ ಸಂಪುಟ ಸಭೆಯಲ್ಲಿ ಇರಿಸಿ, ನಿರ್ಧಾರ ಕೈಗೊಳ್ಳಲಾಗುತ್ತದೆ.

ಈ ಬಗ್ಗೆ ಶೀಘ್ರವೇ ನಿರ್ಧಾರವನ್ನು ಪ್ರಕಟಿಸುವುದಾಗಿ ಗೃಹ ಸಚಿವ ಡಾ.ಜಿ ಪರಮೇಶ್ವರ್ ತಿಳಿಸಿದ್ದಾರೆ. ಈ ಮೂಲಕ ರಾಜ್ಯದ ರೈತರಿಗೆ ಗುಡ್ ನ್ಯೂಸ್ ನೀಡಿದ್ದಾರೆ. ಹುಬ್ಬಳ್ಳಿಯ ವಿದ್ಯಾನಗರದಲ್ಲಿನ ನೂತನ ಪೊಲೀಸ್ ಠಾಣೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದಂತ ಅವರು, ಹಳೇ ಹುಬ್ಬಳ್ಳಿ ಗಲಭೆ ಪ್ರಕರಣದ ರೀತಿಯಲ್ಲೇ ರೈತರ ಮೇಲಿನ ಕೇಸ್ ಹಿಂಪಡೆಯುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತಿದೆ ಎಂದರು. 2 ವರ್ಷಗಳ ಕಾಲ ಅವರು ಜೈಲಿನಲ್ಲಿದ್ದರು. ಪ್ರಕರಣ ರದ್ದು ಮಾಡುವಂತೆ ಸತತವಾಗಿ ಮನವಿಗಳು ಬಂದಿದ್ದವು. ಅದಾದ ನಂತ್ರ ಸಂಪುಟದಲ್ಲಿ ಪ್ರಕರಣ ವಾಪಾಸ್ ಪಡೆದಿದ್ದೇವೆ. ಅದೇ ರೀತಿ ರೈತರ ಮೇಲೆ ಹಾಕಿರುವ ಕೇಸ್ ಹಿಂಪಡೆಯಲು ಆಗ್ರಹಗಳು ಬರುತ್ತಿವೆ. ಈ ವಿಚಾರವನ್ನು ಸಂಪುಟದಲ್ಲಿ ಇರಿಸಿ, ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂಬುದಾಗಿ ತಿಳಿಸಿದರು.



## ಈ ಕೆಲಸ ಮಾಡಿದ್ರೆ ಬೆಂಗಳೂರಲ್ಲಿ ಟ್ರಾಫಿಕ್ ಇರಲ್ಲ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ವಾಹನ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ರಾಜ್ಯ ಸರ್ಕಾರವು ಬರೋಬ್ಬರಿ 54,000 ರೂಪಾಯಿ ಮೊತ್ತದ ವಿವಿಧ ಯೋಜನೆಗಳಿಗೆ ಕೈಹಾಕುತ್ತಿದೆ. ಇದರಲ್ಲಿ ಹೊಸ ರಸ್ತೆಗಳ ನಿರ್ಮಾಣ ಸೇರಿದಂತೆ ಹಲವು ಕಾಮಗಾರಿಗಳನ್ನು ಒಳಗೊಂಡಿದೆ.



ಆದರೆ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಹೊಸ ರಸ್ತೆಗಳಿಂದ ಬೆಂಗಳೂರಿನ ಟ್ರಾಫಿಕ್ ಕಡಿಮೆಯಾಗುವುದಿಲ್ಲ ಎಂದು ತಿರುಗೇಟು ನೀಡಿದ್ದಾರೆ.

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ನಿವಾರಿಸಲು ಕರ್ನಾಟಕ ಸರ್ಕಾರವು 54,000 ಕೋಟಿ ರೂಪಾಯಿ ವೆಚ್ಚದಲ್ಲಿ ರಸ್ತೆಗಳನ್ನು ನಿರ್ಮಿಸಲು ಮುಂದಾಗಿದೆ. ಇದೊಂದು ಹುಚ್ಚತನ, ಬೆಂಗಳೂರಿನಲ್ಲಿ ಹೆಚ್ಚಿನ ರಸ್ತೆಗಳನ್ನು ನಿರ್ಮಿಸುವುದರಿಂದ ಟ್ರಾಫಿಕ್ ಜಾಮ್ ಎಂದಿಗೂ ಕಡಿಮೆಯಾಗೋದಿಲ್ಲ. ಇದರಿಂದ ಇನ್ನೂ ಹೆಚ್ಚು ಖಾಸಗಿ ವಾಹನಗಳು ರಸ್ತೆಗಿಳಿಯುತ್ತವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರವು ಈ 54,000 ಕೋಟಿ ರೂಪಾಯಿ ಖರ್ಚು ಮಾಡಿ ಈ ಹುಚ್ಚುತನದ ಕೆಲಸ ಮಾಡುವ ಬದಲು ಅದೇ ಹಣವನ್ನು ಸಾರ್ವಜನಿಕ ಸಾರಿಗೆಯಲ್ಲಿ ಹೂಡಿಕೆ ಮಾಡಿ ಎಂದು ಸಂಸದ ತೇಜಸ್ವಿಸೂರ್ಯ ಮಹತ್ವದ ಸಲಹೆ ನೀಡಿದ್ದಾರೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವುದೇ ಟ್ರಾಫಿಕ್ ನಿಯಂತ್ರಣಕ್ಕೆ ಉತ್ತಮ ಮಾರ್ಗ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

## ಜ.16 ರಿಂದ ಪ್ರತಿ ಹಳ್ಳಿ ಹಳ್ಳಿಯಲ್ಲೂ ಪಂಚಮಸಾಲಿ ಜಾಗೃತಿ ಸಭೆ

• ಉದಯವಾಹಿನಿ, ಬಳ್ಳಾರಿ

**ಕಾಂಗ್ರೆಸ್ ಸರ್ಕಾರದ ವಿರುದ್ಧ ಮತ್ತೆ ಕಿಡಿ**

ಕೂಡಲಸಂಗಮದ ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಮತ್ತೆ ಕಿಡಿಕಾರಿದ್ದಾರೆ.

ವಿಜಯನಗರದ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವಟ್ಟಮ್ಮನಹಳ್ಳಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ನಮ್ಮನ್ನು ಕೇವಲವಾಗಿ ನಡೆಸಿಕೊಂಡಿದ್ದು, ಬಹಳ ಅಪಮಾನ ಮಾಡಿದ ಎಂದು ಆರೋಪಿಸಿದ್ದಾರೆ.

ಹೀಗಾಗಿ ಜನವರಿ 16 ರಿಂದ ಪ್ರತಿ ಹಳ್ಳಿ ಹಳ್ಳಿಗೂ ತೆರಳಿ ಪಂಚಮಸಾಲಿ ಜಾಗೃತಿ ಸಭೆ ನಡೆಸಲಾಗುವುದು. ಮುಂದಿನ 3 ವರ್ಷ ಹೋರಾಟದ ಮೂಲಕ ಜಾಗೃತಿ ಮೂಡಿಸುತ್ತೇವೆ ಎಂದು ಹೇಳಿದರು. 2ಎ ಮೀಸಲಾತಿಗಾಗಿ ಆಗ್ರಹಿಸಿ ಹೋರಾಟ ಮಾಡಿದರೆ ಸಿಎಂ ಸಿದ್ದರಾಮಯ್ಯ ಸರ್ಕಾರ ನಮ್ಮ ಮೇಲೆ ಲಾಠಿಚಾರ್ಜ್ ಮಾಡಿದೆ. ಕಾಂಗ್ರೆಸ್ ಪಕ್ಷ ಪಂಚಮಸಾಲಿ ಸಮಾಜಕ್ಕೆ ಬಹಳ ಅಪಮಾನ ಮಾಡಿದೆ. ಲಾಠಿಚಾರ್ಜ್ ಮಾಡಿರುವ ಪೊಲೀಸರ ವಿರುದ್ಧ ಕ್ರಮ ಕೈಗೊಂಡಿಲ್ಲ. ಅಲ್ಲದೇ ಸಿದ್ದರಾಮಯ್ಯ ಸರ್ಕಾರ ಈವರೆಗೆ ಪಂಚಮಸಾಲಿಗಳ ಕ್ಷಮೆ ಕೇಳಿಲ್ಲ. ಮೀಸಲಾತಿ ಕೊಡಲು ಆಗಲ್ಲ ಎಂದು ಸಿಎಂ ನೇರವಾಗಿ ಹೇಳಿದ್ದಾರೆ.

ನಮ್ಮನ್ನು ಅಪ್ಪಿಕೊಳ್ಳುವ ಸರ್ಕಾರ ತಂದು ಮೀಸಲಾತಿ ಪಡೆಯುತ್ತೇವೆ ಎಂದು ಮತ್ತೆ ಸ್ವಾಮೀಜಿ ಪುನರುಚ್ಚರಿಸಿದ್ದಾರೆ. ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಪಂಚಮಸಾಲಿ 2ಎ ಮೀಸಲಾತಿಗಾಗಿ ಆಗ್ರಹಿಸಿ ವ್ಯಾಪಕ ಪ್ರತಿಭಟನೆ ನಡೆದಿತ್ತು. ಆ ಸಂದರ್ಭದಲ್ಲಿ ಪ್ರತಿಭಟನಾನಿರತರ ಮೇಲೆ ಲಾಠಿಚಾರ್ಜ್ ಮಾಡಲಾಗಿತ್ತು. ನಂತರ ಸರ್ಕಾರ ಆ ಬಗ್ಗೆ ಸಮರ್ಥನೆ ಮಾಡಿಕೊಂಡಿತ್ತು.



## ಮಳೆ ಅನಾಹುತ ತಡೆಗೆ ಟಾಟಾನಗರದಲ್ಲಿ ಕಾಮಗಾರಿ ಕೈಗೆತ್ತಿಗೊಳ್ಳಿ

• ಉದಯವಾಹಿನಿ, ಬೆಂಗಳೂರು

ಮಳೆ ಅನಾಹುತ ತಪ್ಪಿಸುವ ನಿಟ್ಟಿನಲ್ಲಿ ಯಲಹಂಕ ವಲಯದ ಟಾಟಾನಗರದಲ್ಲಿ 2 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಯಲಹಂಕ ವಲಯದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ನಡೆದ ಸಭೆಯಲ್ಲಿ ಟಾಟಾ ನಗರದಲ್ಲಿ ಮಳೆಯಿಂದಾಗುವ ಅನಾಹುತ ತಪ್ಪಿಸಲು ಸಾರ್ವಜನಿಕರೊಬ್ಬರು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ಆಯುಕ್ತರು, ಟಾಟಾನಗರಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿ ನಿರ್ಮಾಣಕ್ಕೆ ಟೆಂಡರ್ ಕರೆದು ಕಾಮಗಾರಿ ನಡೆಸಬೇಕೆಂದು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ತಾಕೀತು ಮಾಡಿದರು. ಕೆನರಾ ಬ್ಯಾಂಕ್ ಕಾಲನಿಯ ರಾಜಾರಾಂ ಮೋಹನರಾಯ್ ರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ರಸ್ತೆ ಉಬ್ಬು ತೆರವುಗೊಳಿಸಲು ಕೋರಿದ್ದ ಬಗ್ಗೆ ಪ್ರತಿಕ್ರಿಯಿಸಿ, ರಸ್ತೆ ಉಬ್ಬು ಮಾಡುವಾಗ ಪೊಲೀಸ್ ಅನುಮತಿ ಪಡೆಯಲಾಗಿರುತ್ತದೆ. ಆದರೂ, ಈ ಬಗ್ಗೆ ಸ್ಥಳ ಪರಿಶೀಲಿಸಿ ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿದ್ದರೆ ತೆರವುಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತುಷಾರ್ ಗಿರಿನಾಥ್, ಅಧಿಕಾರಿಗಳಿಗೆ ಸೂಚಿಸಿದರು. ನರಸೀಪುರ ಕೆರೆಯ ಬಫರ್ ಜೋನ್ನಲ್ಲಿ ಅನಧಿಕೃತವಾಗಿ 4 ಅಂತಸ್ತಿನ ಕಟ್ಟಡ ನಿರ್ಮಾಣ ಕುರಿತು ಪರಿಶೀಲಿಸಬೇಕು ಎಂದರು.

## ಸರ್ಕಾರದ ವಿರುದ್ಧ ಬಿಜೆಪಿ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಬಳ್ಳಾರಿ, ಬೆಳಗಾವಿ ಬಳಿಕ ಇದೀಗ ಬೆಂಗಳೂರಿನಲ್ಲಿ ಬಾಣಂತಿಯರ ಸಾವು ಪ್ರಕರಣ ಮುಂದುವರೆದಿದ್ದು, ನಿನ್ನೆ ಇಬ್ಬರು ಬಣಂತಿಯರು ಮೃತಪಟ್ಟಿರುವ ಬಗ್ಗೆ ವರದಿಯಾಗಿತ್ತು. ಈ ಘಟನೆಗಳ ಬೆನ್ನಲ್ಲೇ ಸರ್ಕಾರದ ವಿರುದ್ಧ ವಿಪಕ್ಷ ಬಿಜೆಪಿ ಕಿಡಿಕಾರಿದೆ. ನ ಕರ್ನಾಟಕದಲ್ಲಿ ಬಾಣಂತಿಯರ ಮರಣ ಮೃದಂಗ ಮುಂದುವರೆಯುತ್ತಲೇ ಇದೆ ಅ ಆರೋಗ್ಯ ಬಾಣಂತಿಯರ ಕೊಲೆಗಾರ ಕಾಂಗ್ರೆಸ್ ಸರ್ಕಾರ ಮಾತ್ರ ಇನ್ನೂ ಸಹ ನಿದ್ರೆಯಿಂದ ಎಚ್ಚರವಾಗಿಲ್ಲ ಎಂದು ರಾಜ್ಯ ಬಿಜೆಪಿ ಘಟಕ ವಾಗ್ದಾಳಿ ನಡೆಸಿದೆ. ಸಿಎಂ ಸಿದ್ದರಾಮಯ್ಯ ಅವರೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೆ, ತಾಯಿ ಪ್ರೀತಿಯಿಂದ ವಂಚಿತವಾಗುವ ಅದೆಷ್ಟೋ ಕಂದಮ್ಮಗಳ ಶಾಪ ನಿಮ್ಮ ಸರ್ಕಾರಕ್ಕೆ ತಟ್ಟದೆ ಇರದು ಎಂದು ಆಕ್ರೋಶ ವ್ಯಕ್ತಪಡಿಸಿದೆ.

## ಜ. 17 ರಿಂದ 23ರ ವರೆಗೆ ಕರ್ನಾಟಕ ಕ್ರೀಡಾಕೂಟ : ಸಿಎಂ ಮಾಹಿತಿ

• ಉದಯವಾಹಿನಿ, ಬೆಂಗಳೂರು

ಜ. 17ರಿಂದ 23ರ ವರೆಗೆ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕರ್ನಾಟಕ ಕ್ರೀಡಾಕೂಟವನ್ನು ವ್ಯವಸ್ಥಿತವಾಗಿ ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ನಿನ್ನೆ ಲಾಂಛನವನ್ನು ಬಿಡುಗಡೆಗೊಳಿಸಿ, ಕ್ರೀಡಾಕೂಟದ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಕ್ರೀಡಾಕೂಟದ ಲೋಗೋದಲ್ಲಿನ ಯಕ್ಷಗಾನ ಕಿರೀಟವು ಕ್ರೀಡಾಕೂಟ ನಡೆಯುವ ಕರಾವಳಿ ಭಾಗದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ತಿಳಿನೀಲಿ ಬಣ್ಣವು ಕಡ ಲಿನ ಅಗಾಧತೆಯನ್ನು ಜತೆಗೆ ಸೋಲು- ಗೆಲುವುಗಳಲ್ಲಿ ಕ್ರೀಡಾಪಟು ಗಳ ಶಾಂತತೆ ಮತ್ತು ಶ್ರಮವನ್ನು ಪ್ರತಿನಿಧಿಸುವ ಈ ಲೋಗೋ ಅರ್ಥಪೂರ್ಣವಾಗಿದೆ. ಕರ್ನಾಟಕ ಕ್ರೀಡಾಕೂಟ-2025 ಅನ್ನು ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ಆಯೋಜಿಸುತ್ತಿದ್ದು, ಮಂಗಳೂರು ಉಡುಪಿ ಜಿಲ್ಲಾಡಳಿತವು ಕ್ರೀಡಾಕೂಟದ ವ್ಯವಸ್ಥಿತ ಆಯೋಜನೆ ಸಂಬಂಧ ಅಗತ್ಯ ಕ್ರಮಕೈಗೊಳ್ಳಬೇಕು.





- ಕಲಬುರಗಿ ಬಂದ್ ಬಸ್‌ಗಳಿಲ್ಲದೆ ನಿಲ್ದಾಣ ಖಾಲಿ
- ನಗರದ ಶಾಲೆಗಳಿಗೆ ರಜೆ ಘೋಷಣೆ
- ಮಂಗಳವಾರ ಬೆಳ್ಳಂ ಬೆಳಿಗ್ಗೆಯೇ ಪ್ರತಿಭಟನೆ
- ಮದುವೆ ಕಾರ್ಯಕ್ರಮಕ್ಕೆ ಅಡಚಣೆ
- ಬೈಕ್ ಜಖಂ, ವ್ಯಾಪಾರಸ್ಥರ ಮೇಲೆ ದರ್ಪ
- ಬಿಕೋ ಎನ್ನುತ್ತಿರುವ ಅಂಗಡಿ ಮುಗ್ಗಟ್ಟುಗಳು

# ಕಲಬುರಗಿ ಬಣಬಣ ಜನ ಸಂಚಾರ ಕ್ಷೀಣ

### ಜಿಮ್ಸ್ ಒಪಿಡಿ ಖಾಲಿಖಾಲಿ

ಕಲಬುರಗಿ ಬಂದ್ ಹಿನ್ನೆಲೆ ನಗರದ ಜಿಮ್ಸ್ ಆಸ್ಪತ್ರೆಯ ಒಪಿಡಿ ಕೌಂಟರ್ ಮತ್ತು ಹೊರರೋಗಿ ವಿಭಾಗಗಳು ರೋಗಿಗಳಿಲ್ಲದೆ ಮೌನ ಧರಿಸಿದ್ದವು. ಆದರೆ, ಕರ್ತವ್ಯನಿರತ ವೈದ್ಯರು ಮಾತ್ರ ತಮಗೆ ಮೀಸಲಿರುವ ವಿಭಾಗಗಳಲ್ಲಿ ಕೆಲಸಕ್ಕೆ ಹಾಜರಾಗಿದ್ದರು. ಇನ್ನು ಬಂದ್ ಪ್ರಯುಕ್ತ ಆಟೋರಿಕ್ಷಾ ಮತ್ತು ನೃಪತುಂಗ ನಗರ ಸಾರಿಗೆ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ರೋಗಿಗಳು ಜಿಮ್ಸ್, ಇಎಸ್ ಐ ಹಾಗೂ ಖಾಸಗಿ ಆಸ್ಪತ್ರೆಗಳನ್ನು ತಲುಪಲಾಗದೆ ಪರದಾಡಿದರು.

### ಬೈಕ್, ಟಯರ್‌ಗೆ ಬೆಂಕಿ

ಕೇಂದ್ರ ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ಪ್ರತಿಭಟನಾಕಾರರು ಟೈರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು. ವ್ಯಾಪಾರ-ವಹಿವಾಟು ಸ್ಥಗಿತಗೊಂಡಿದೆ. ಬಸ್, ಆಟೋ ಸಂಚಾರ ಕೂಡಾ ಸ್ಥಗಿತಗೊಂಡಿದ್ದು, ಪ್ರಯಾಣಿಕರು ತೊಂದರೆ ಅನುಭವಿಸಿದರು. ವೃದ್ಧರು, ಮಹಿಳೆಯರು ನಡೆದುಕೊಂಡೇ ಸಾಗುತ್ತಿದ್ದುದು ಕಂಡುಬಂತು. ರಸ್ತೆಗಳನ್ನೂ ಬಂದ್ ಮಾಡಿದ ಕಾರಣ ವಾಹನ ಸವಾರರಿಗೆ ಅಡಚಣೆಯಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ, ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.

• ಉದಯವಾಹಿನಿ, ಬೆಂಗಳೂರು

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಸಂವಿಧಾನ ರಕ್ಷಣಾ ಸಮಿತಿ, ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ನೀಡಿರುವ ಕಲಬುರಗಿ ಬಂದ್ ಹಿನ್ನೆಲೆಯಲ್ಲಿ ಸಂಪೂರ್ಣ ನಗರ ಮಂಗಳವಾರ ಸ್ತಬ್ಧಗೊಂಡಿದೆ. ಮುಂಜಾನೆ 7 ಗಂಟೆಗೂ ಮುಂಚೆಯೇ ರಸ್ತೆಗಿಳಿದ ಪ್ರತಿಭಟನಾಕಾರರು ಮುಖ್ಯವಾಗಿ ನಗರ ಪ್ರವೇಶಿಸುವ, ನಗರದಿಂದ ನಿರ್ಗಮಿಸುವ ವಾಹನಗಳ ಸಂಚಾರಕ್ಕೆ ತಡೆಯೊಡ್ಡಲು ಹೊರವಲಯದ ವರ್ತುಲ ರಸ್ತೆಗಳಲ್ಲಿ ಟೈರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಈ ಕಾರಣಕ್ಕಾಗಿ ವಾಹನಗಳ ಸಂಚಾರಕ್ಕೆ ಭಾಗಶಃ





ಕಡಿವಾಣ ಬಿದ್ದಿದ್ದು, ಆಟೋರಿಕ್ಷಾಗಳು ರಸ್ತೆಗಿಳಿಯದೆ ಬಂದ್ ಗೆ ಸಹಕರಿಸಿವೆ. ಪ್ರಯಾಣಿಕರನ್ನು ಕೇಂದ್ರ ಬಸ್ ನಿಲ್ದಾಣಕ್ಕೆ ತಲುಪಿಸಲು ಬಂದಿದ್ದ ಆಟೋ ರಿಕ್ಷಾ ಗೋಚರಿಸುತ್ತಿದ್ದಂತೆಯೇ ದಿಢೀರನೆ ಸ್ಥಳಕ್ಕೆ ಆಗಮಿಸಿದ ಪ್ರತಿಭಟನಾಕಾರರು ಆಟೋ ಚಾಲಕನಿಗೆ ಸಣ್ಣದಾಗಿ ಗೂಸ ನೀಡಿ ರಸ್ತೆಗಿಳಿಯದಂತೆ ಎಚ್ಚರಿಕೆ ನೀಡಿ ಕಳುಹಿಸಿದರು. ಮತ್ತೊಂದೆಡೆ, ಕಲಬುರಗಿ ಹೊರವಲಯದ ಬೇಲೂರು ಕ್ರಾಸ್ ಬಳಿ ಲಾರಿಯೊಂದನ್ನು ಅಡ್ಡಗಟ್ಟಿದ ಯುವಕರು ಲಾರಿಯ ಗಾಜುಗಳನ್ನು ಒಡೆದು ಹಾಕಿದ್ದಲ್ಲದೆ ಚಾಲಕನಿಗೆ ಎಚ್ಚರಿಕೆ ನೀಡಿ ಕಳಿಸಿದರು.ನಗರದ ಹೈಕೋರ್ಟ್ ಸಮೀಪದ ಅಫಜಲಪುರ ಕ್ರಾಸ್ ಬಳಿ ಟೈರಿಗೆ ಬೆಂಕಿ ಹಚ್ಚಿ ಪ್ರತಿಭಟನಾಕಾರರು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ರೋಶ ಹೊರಹಾಕಿದರು.

ನಗರದ ಪ್ರಮುಖ ವಾಣಿಜ್ಯ ಕೇಂದ್ರ ಸೂಪರ್ ಮಾರ್ಕೆಟ್ , ನೆಹರೂ ಗಂಜ್, ಸಂಗತ್ರಾಸವಾಡಿ, ಪುಟಾಣಿ ಗಲ್ಲಿ, ಸ್ಟೇಷನ್ ಬಜಾರ್ ಒಳಗೊಂಡಂತೆ ಬಹುತೇಕ ಪ್ರಮುಖ ಬಡಾವಣೆಗಳಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿದ್ದು, ರಸ್ತೆಗಳು ವಾಹನ ಸಂಚಾರವಿಲ್ಲದೆ ಬಣಗುಡುತ್ತಿವೆ. ಮತ್ತೊಂದೆಡೆ, ಸೂಪರ್ ಮಾರ್ಕೆಟ್ ಪ್ರದೇಶದ ಸರಾಫ್ ಬಜಾರಿನಲ್ಲಿ ಚಿನ್ನಾಭರಣ ಅಂಗಡಿಗಳು ವ್ಯಾಪಾರ-ವಹಿವಾಟು ನಡೆಸುವ ಗೋಜಿಗೆ ಹೋಗದೆ ರಸ್ತೆಗಳ ಬದಿಯ ಹೋಟೆಲ್ ಗಳು ಮುಚ್ಚಿದ್ದು, ತಳ್ಳು ಬಂಡಿಗಳ ಮೇಲೆ ಹೋಟೆಲ್ ನಡೆಸುವ ವ್ಯಕ್ತಿಗಳು ದಂಧೆ ನಡೆಸಲು ಮುಂದಾಗದೆ ಬಂದ್‌ಗೆ ನೈತಿಕ ಬೆಂಬಲಕ್ಕೆ ಸಾಥ್ ನೀಡಿವೆ.

**ಬಸ್ ನಿಲ್ದಾಣ, ಆಸ್ಪತ್ರೆಗಳು ಬಣಬಣ:** ದಿನಪೂರ್ತಿ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ಕಲಬುರಗಿ ನಗರದ ಕೇಂದ್ರ ಬಸ್ ನಿಲ್ದಾಣ, ಸೂಪರ್ ಮಾರ್ಕೆಟ್ ಬಸ್ ನಿಲ್ದಾಣ ಬಂದ್ ಪ್ರಯುಕ್ತ ಪ್ರಯಾಣಿಕರಿಲ್ಲದೆ ಬಣಗುಡುತ್ತಿವೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಂದ್ ಅವಧಿ ಮುಕ್ತಾಯ ದವರೆಗೆ ಬಸ್ ಸಂಚಾರ ಸ್ಥಗಿತಗೊಳಿಸಿ ದೂರದ ಊರುಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಕೇಂದ್ರ ಬಸ್ ನಿಲ್ದಾಣದಲ್ಲಿ ದಿಕ್ಕು ತೋಚದೆ ನಿಂತಿದ್ದು, ಸ್ಟೇಷನ್ ಬಜಾರ್ ಸಮೀಪದ ರೈಲ್ವೆ ನಿಲ್ದಾಣಕ್ಕೆ ಪ್ರತಿಭಟನೆಯ ಕಾವು ತಾಕದಂತೆ ರೈಲ್ವೆ ಪೊಲೀಸ್ ರು ವ್ಯಾಪಕ ಬಂದೋಬಸ್ತ್ ಏರ್ಪಡಿಸಿದ್ದರು. ಇದೇವೇಳೆ ನಿಗದಿತ ಸಮಯಕ್ಕೆ ರೈಲ್ವೆ ನಿಲ್ದಾಣಕ್ಕೆ ಆಗಮಿಸಲಾಗದೆ ಬಹುತೇಕ ಪ್ರಯಾಣಿಕರು ಪರದಾಡಿದರು.

**ಪೊಲೀಸ್ ಪಹರೆ:** ಕಲಬುರಗಿ ಬಂದ್ ಪ್ರಯುಕ್ತ ಯಾವುದೇ ರೀತಿಯ ಅಹಿತಕಾರಿ ಘಟನೆ ಸಂಭವಿಸದಂತೆ ಮುಂಜಾಗ್ರತೆವಹಿಸಿ ನಗರದಲ್ಲಿ ವ್ಯಾಪಕ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿತ್ತು.

1. ಕಲಬುರಗಿಬಂದ್‌ಗೆಉತ್ತಮ ಪ್ರತಿಕ್ರಿಯೆ
2. ಕೇಂದ್ರ ಗೃಹ ಸಚಿವ ಶಾ ಅವರ ಹೇಳಿಕೆ ಖಂಡಿಸಿ ಸಂವಿಧಾನಉಳಿಸಿಸಂಘಟನೆ ಕರೆ ನೀಡಿ ಬಂದ್
3. ಮಂಗಳವಾರ ದಿನವಿಡೀ ಬೃಹತ್ ಜಾಥಾ, ಪ್ರತಿಭಟನಾ ಮೆರವಣಿಗೆ

### ಕಿಡಿಗೇಡಿಗಳಿಂದ ಗೂಂಡಾ ವರ್ತನೆ

ಡಾ. ಬಿ.ಆರ್ ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾ ಅವರು ನೀಡಿರುವ ಹೇಳಿಕೆ ಖಂಡಿಸಿ, ಪ್ರತಿಭಟನೆ ಹೆಸರಿನಲ್ಲಿ ಕೆಲವು ಕಡೆ ಕಿಡಗೇಡಿಗಳು ಗುಂಡಾ ವರ್ತನೆ ತೋರಿದ್ದಾರೆ. ಬೈಕ್‌ನಲ್ಲಿ ಬರ್ತಿದ್ದ ವ್ಯಕ್ತಿಯನ್ನ ತಡೆದು ದೊಣ್ಣೆಯಿಂದ ಬೈಕ್‌ಗೆ ಹೊಡೆದಿದ್ದಾರೆ. ಕಲಬುರಗಿ ನಗರದ ಶಹಬಜಾರ್ ಬಳಿ ಬರುತ್ತಿದ್ದ ವ್ಯಕ್ತಿಯ ಬೈಕ್‌ಗೆ ಕಿಡಿಗೇಡಿಗಳು ದೊಣ್ಣೆಯಿಂದ ಹೊಡೆದಿದ್ದಾರೆ. ಅಲ್ಲದೇ, ಆಗಿದ್ದ ಅಂಗಡಿಯನ್ನು ಬಲವಂತವಾಗಿ ಮುಚ್ಚಿಸಿ ಕುರ್ಚಿ ಹೊರಗೆ ಬಿಸಾಕಿದ್ದಾರೆ. ಕೈಯಲ್ಲಿ ದೊಣ್ಣೆಗಳನ್ನು ಹಿಡಿದು ನಗರದಾದ್ಯಂತ ಬೈಕ್‌ನಲ್ಲಿ ಕಿಡಿಗೇಡಿಗಳು ಸುತ್ತಾಡಿದ್ದಾರೆ.

### ಶಾ ಅವರ ಅಣಕು ಶವಯಾತ್ರೆ

ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿದ ಹೇಳಿಕೆಯನ್ನು ಖಂಡಿಸಿ ಸಂವಿಧಾನ ರಕ್ಷಣಾ ಸಮಿತಿ ಹಾಗೂ ವಿವಿಧ ಸಂಘಟನೆಗಳು ಮಂಗಳವಾರ ಕರೆ ನೀಡಿದ್ದ ಕಲಬುರಗಿ ಬಂದ್ ಅಂಗವಾಗಿ ನಗರದ ನಗರೇಶ್ವರ ಶಾಲೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಅಮಿತ್ ಶಾ ಅವರ ಅಣಕು ಶವಯಾತ್ರೆ ನಡೆಸಲಾಯಿತು. ಬೆಳಿಗ್ಗೆಯಿಂದಲೇ ನೀಲಿ ಬಾವುಟಗಳು ಹಿಡಿದು ರಸ್ತೆಗೆ ಇಳಿದ ಪ್ರತಿಭಟನಾಕಾರರು ಶಾ ಮತ್ತು ಮೋದಿ ವಿರುದ್ಧ ಘೋಷಣೆ ಕೂಗಿದರು. ನಗರದ ಪ್ರಮುಖ ವೃತ್ತಗಳು, ರಿಂಗ್ ರೋಡ್ ಸರ್ಕಲ್‌ಗಳಲ್ಲಿ ಶಾ ಅವರ ಭಾವಚಿತ್ರ, ಪ್ರತಿಕೃತಿಗಳಿಗೆ ಬೆಂಕಿ ಹಚ್ಚಿದರು. ಗಂಜ್ ಪ್ರದೇಶದ ನಗರೇಶ್ವರ ಶಾಲೆಯ ಮುಂಭಾಗದಲ್ಲಿ ಪ್ರತಿಭಟನಾಕಾರರು ಜಮಾಯಿಸಿದರು. ಶಾ ಅವರ ಪ್ರತಿಕೃತಿಯ ಅಣಕು ಶವ ಯಾತ್ರೆ ನಡೆಸಿದರು.

ಪೊಲೀಸ್ ಕಮಿಷನರ್ ಶರಣಪ್ಪ ಸ್ವತಃ ರಸ್ತೆಗಿಳಿದು ಪರಿಸ್ಥಿತಿ ಹತೋಟಿ ಮೀರದಂತೆ ಜಾಗ್ರತೆವಹಿಸಿದರು.

## ಸಿ.ಟಿ.ರವಿ ಪ್ರಕರಣ ಮುಗಿದ ಅಧ್ಯಾಯ, ತನಿಖೆ ಬೇಕಿಲ್ಲ: ಸಭಾಪತಿ ಸ್ಪಷ್ಟನೆ

**ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಸಿ.ಟಿ. ರವಿ ಇಬ್ಬರೂ ನೀಡಿದ ಲಿಖಿತ ದೂರು ಆಧರಿಸಿ ಪರಿಶೀಲನೆ ನಡೆಸಿದ ಬಳಿಕವೇ ನಾನು ತೀರ್ಪು ನೀಡಿದ್ದು**

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ತಿನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಗ್ಗೆ ಬಿಜೆಪಿ ಸದಸ್ಯ ಸಿ.ಟಿ. ರವಿ ಪದ ಬಳಕೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೌನ ಮುರಿದಿರುವ ಸಭಾಪತಿ ಬಸವರಾಜ ಹೊರಟ್ಟಿ, ''ಇದು ಮುಗಿದ ಅಧ್ಯಾಯ. ಅವಾಚ್ಯ ಪದ ಪ್ರಯೋಗದ ಬಗ್ಗೆ ನಮ್ಮಲ್ಲಿ ಯಾವುದೇ ವೀಡಿಯೋ ದಾಖಲೆಗಳಿಲ್ಲ. ಅಲ್ಲದೆ, ಸದನಕ್ಕೆ ಬಂದು ಪೊಲೀಸರು ಮಹಜರು ಮಾಡಲು ನಾನು ಬಿಟ್ಟಿಲ್ಲ. ಒಂದು ವೇಳೆ ಮಾಡಿದರೆ ಅವರೇ ಜೈಲು ಸೇರಬೇಕು' ಎಂದು ಎಚ್ಚರಿಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ಸಿ.ಟಿ. ರವಿ ಇಬ್ಬರೂ ನೀಡಿದ ಲಿಖಿತ ದೂರು ಆಧರಿಸಿ ಪರಿಶೀಲನೆ ನಡೆಸಿದ ಬಳಿಕವೇ ನಾನು ತೀರ್ಪು ನೀಡಿದ್ದ. ಈ ಪ್ರಕರಣ ಡಿ. 19ಕ್ಕೆ ಮುಕ್ತಾಯಗೊಂಡಿದೆ. ಮತ್ತೆ ತನಿಖೆ ನಡೆಸುವುದಕ್ಕೆ ಯಾವುದೇ ಸಮಿತಿ ರಚನೆ ಮಾಡುವ ಅಗತ್ಯವಿಲ್ಲ. ನಾನು ಸದನದ ಕಸ್ಟೋಡಿಯನ್ ಆಗಿದ್ದು ಸದನದಲ್ಲಿ ನಡೆದ ಘಟನೆ ಬಗ್ಗೆ ತೀರ್ಪು ನೀಡಿದ್ದೇನೆ. ಮಹಿಳಾ ಆಯೋಗ ಸಹಿತ ಯಾರ ಪತ್ರಕ್ಕೂ ಉತ್ತರ ನೀಡಬೇಕಾದ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಈ ಹೇಳಿಕೆಗೆ ಸಂಬಂಧಪಟ್ಟಂತೆ ಯಾವುದೇ ವೀಡಿಯೋ ದಾಖಲೆಗಳು ಇಲ್ಲ. ಯಾರಾದರೂ ನಮಗೆ ಲಿಖೀತವಾಗಿ ದೂರು ನೀಡಿ ವಿಡಿಯೋ, ಆಡಿಯೋ ದಾಖಲೆ ಕೊಟ್ಟರೆ ನಾನು ಪರಿಶೀಲನೆ ನಡೆಸುತ್ತೇನೆ. ಈ ಬಗ್ಗೆ ಎಫ್ ಎಸ್‌ಎಲ್ ವರದಿ ಬೇಕಾಗುತ್ತದೆ. ಯಾವುದೋ ವಿಡಿಯೋ ಇದೆ ಎಂದ ಮಾತ್ರಕ್ಕೆ ನಂಬುವುದಕ್ಕೆ ಆಗುವುದಿಲ್ಲ. ಅದನ್ನು ಆಮೇಲೆ ಯಾರಾದರೂ ನಕಲಿ ಮಾಡಿಕೊಂಡಿದ್ದರೂ ಇರಬಹುದು ಎಂದು ಅಭಿಪ್ರಾಯಪಟ್ಟರು. ನನ್ನ ಪ್ರಕಾರ ಇದು ಮುಗಿದ ಅಧ್ಯಾಯ.

ಕೂಲಂಕಷವಾಗಿ ತನಿಖೆ ಮಾಡಿಯೇ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ತೀರ್ಮಾನದ ಬಳಿಕ ಸದನ ಮುಂದೂಡಿದ್ದೇನೆ. ಈ ಬಗ್ಗೆ ಸಭಾಪತಿಗಳು ಚರ್ಚೆಗೆ ಅವಕಾಶ ನೀಡಬೇಕಿತ್ತು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿರುವುದು ಅವರ ವೈಯಕ್ತಿಕ ಅಭಿಪ್ರಾಯ. ನನ್ನ ಮೇಲೆ ಪ್ರಭಾವ ಬೀರುವುದಕ್ಕೆ ಹರಿಹರ- ಬ್ರಹ್ಮರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟ ನಿಲುವು ಪ್ರಕಟಿಸಿದ್ದಾರೆ.

ಈ ಘಟನೆಯ ಅನಂತರ ಸಿ.ಟಿ. ರವಿ ಬಂಧನವಾಗಿದೆ. ಇದು ಸರಕಾರ ಹಾಗೂ ಪೊಲೀಸ್ ಇಲಾಖೆಯ ವಿಷಯ ಹೊರಗಡೆ ದಾಖಲಾದ ದೂರಿಗೂ ನಮಗೂ ಸಂಬಂಧವಿಲ್ಲ ಪರಿಷತ್ತಿನಲ್ಲಿ ನಡೆದ ಘಟನೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ. ಇದನ್ನು ಉಲ್ಲೇಖಿಸಿ ತಪ್ಪು ಮಾಡಿದ್ದಾರೆ. ನಮ್ಮ ಸದನಕ್ಕೆ ಬಂದು ಮಹಜರು ನಡೆಸುತ್ತೇವೆ ಎಂದು ಕೇಳಿದಾಗ ನಾನು ಸ್ಪಷ್ಟವಾದ ಎಚ್ಚರಿಕೆ ನೀಡಿದ್ದೇನೆ.

ಸಿ.ಟಿ. ರವಿ ಅವರನ್ನು ಬಂಧಿಸಿ ಕರೆದೊಯ್ಯುವ ವಿಚಾರದಲ್ಲಿ ಪೊಲೀಸರು ದಾರಿ ತಪ್ಪಿದ್ದಾರೆ. ಅವರಿಗೆ ಏನಾದರೂ ತೊಂದರೆಯಾದರೆ ನಾನು ನಿಮ್ಮನ್ನು ಬಿಡುವುದಿಲ್ಲ ಎಂದು ಎಸ್‌ಪಿ, ಪೊಲೀಸ್ ಕಮಿಷನರ್‌ಗೆ ಎಚ್ಚರಿಕೆ ನೀಡಿದ್ದೆ. ನಮ್ಮ ಸದನದ ಸದಸ್ಯರು ಯಾವುದೇ ಪಕ್ಷಕ್ಕೆ ಸೇರಿದ್ದರೂ ಅವರಿಗೆ ರಕ್ಷಣೆ ನೀಡುವುದು ನನ್ನ ಕರ್ತವ್ಯ. ಪರಿಷತ್ ಸದಸ್ಯನನ್ನು ಬಂಧಿಸುವುದಕ್ಕೆ ಮುನ್ನ ಪೊಲೀಸರು ನಮಗೆ ಮಾಹಿತಿ ನೀಡಬೇಕಾಗುತ್ತದೆ ಎನ್ನುವ ಮೂಲಕ ಈ ಪ್ರಕ್ರಿಯೆಯಲ್ಲಿ ಆದ ಲೋಪದ ಬಗ್ಗೆ ಸಭಾಪತಿ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



### ಎಫ್‌ಐಆರ್‌ನಲ್ಲಿ ಅಪರಿಚಿತ 10 ಜನರ ವಿರುದ್ಧ ಮಾತ್ರ ದೂರು ದಾಖಲೆ

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿದ್ದಾರೆಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮೇಲೆ ಹಲ್ಲೆಗೆ ಯತ್ನಿಸಿದ್ದ 10 ಜನರ ವಿರುದ್ಧ ಹಿರೇಬಾಗೇವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿ.ಟಿ. ರವಿ ಡಿ. 19ರಂದು ರಾತ್ರಿ 11 ಗಂಟೆ ಸುಮಾರಿಗೆ ನೀಡಿದ್ದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಾಗಿದೆ. ಒಟ್ಟು ಹತ್ತು ಜನ ಅಪರಿಚಿತರು ಎಂದು ದೂರು ದಾಖಲಾಗಿದೆ. ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಹಲ್ಲೆಕೋರರ ವಿರುದ್ಧ ಸಿ.ಟಿ. ರವಿ ದೂರು ನೀಡಿದ್ದರು. ಆದರೆ ಸದ್ಯದ ಎಫ್‌ಐಆರ್‌ನಲ್ಲಿ ಅಪರಿಚಿತ 10 ಜನರ ವಿರುದ್ಧ ಮಾತ್ರ ದೂರು ದಾಖಲಾಗಿದೆ.

ವಿಧಾನ ಪರಿಷತ್ ಸಭಾಂಗಣದಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಮತ್ತು ಸಿ.ಟಿ. ರವಿ ನಡುವೆ ನಡೆದ ವಾಗ್ವಾದ ಹಾಗೂ ಅನಂತರದ ಬೆಳವಣಿಗೆಗಳ ಬಗ್ಗೆ ರಾಜ್ಯಪಾಲರು ಸಭಾಪತಿ ಬಸವರಾಜ್ ಹೊರಟ್ಟಿ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಆಣತಿಯಂತೆ ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ದೂರವಾಣಿ ಕರೆ ಮಾಡಿದ್ದ ರಾಜಭವನದ ಅಧಿಕಾರಿಗಳು ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ವಿವರ ಕೇಳಿದ್ದಾರೆ. ಈ ಬಗ್ಗೆ ಸಿಎಂ ಸಿದ್ಧರಾಮಯ್ಯ ಅವರ ಗಮನಕ್ಕೆ ತಂದು ಸಭಾಪತಿ ಹೊರಟ್ಟಿ ಮಾಹಿತಿ ನೀಡಿದ್ದಾರೆ.

| ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹7,735/Gram24ct ₹7,090/Gram22ct | ಬೆಳ್ಳಿ: ₹91.40/Gram |
|---|---|---|---|---|



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ಅಭಿನವ ಗವಿಸಿದ್ಧೇಶ್ವರ ಶ್ರೀ ಚಿಂತನೆ

ನಿನ್ನೆ ಕೊಪ್ಪಳದ ಗವಿಮಠದ ಅಭಿನವ ಗವಿಸಿದ್ಧೇಶ್ವರ ಶ್ರೀಗಳ ಭೇಟಿಯಲ್ಲಿ ಹರಿದ ಚಿಂತನೆ: ಮಠವೊಂದು ಸಂಸಾರ. ಮಠಾಧಿಪತಿ ಮಠಕ್ಕೆ ಅಂಟಿಯೂ ಅಂಟದಂತಿರಬೇಕು. ನಾನು ನನ್ನಿಂದಲೇ ಎನ್ನುವುದು ಭ್ರಮೆ. ಭ್ರಮೆಗಿಳಿದರೆ ಅಧ್ಯಾರೋಪ. ಗೀತಾಭಾಷ್ಯದಲ್ಲಿ ಶಂಕರರು, ವಿಚಾರ ಚಂದ್ರೋದಯಕಾರ ಪಂಡಿತ ಪೀತಾಂಬರರು ಅಧ್ಯಾರೋಪ ಅಪವಾದಗಳಿಂದ ಪ್ರಪಂಚ ಸುಳ್ಳೆಂಬುದನ್ನು ನಿರೂಪಿಸಲಾಗುವುದೆನ್ನುವರು. ಇರುವುದರಲ್ಲಿ ಇಲ್ಲದ್ದನ್ನು ಆರೋಪಿಸುವುದು ಅಧ್ಯಾರೋಪ. ಇಲ್ಲದ ಆರೋಪವನ್ನು ದೂರೀಕರಿಸುವುದು ಅಪವಾದ. ಹಗ್ಗ ಹಾವೆನ್ನುವುದು ಅಧ್ಯಾರೋಪ. ಹಾವಲ್ಲ ಹಗ್ಗ ಎನ್ನುವುದು ಅಪವಾದ. ಈ ಅಪವಾದ ಸಂತಸ ನೀಡುವುದು. ಆದರೆ ಲೋಕದ ಅಪವಾದ ಹಾಗಲ್ಲ, ಎಲ್ಲಾ ನಾನೇ ನನ್ನಿಂದ ಎಂದಾಗ ಬರುವ ಅಪವಾದ ಮುಳುಗಿಸುವುದು ಎಂದರು. ಇದು ಕನ್ನಡದ ಅನುಮಾನದಂತೆ ಎಂದೆ. ಸ್ವಲ್ಪ ಸಮಯ ಅಂತರ್ಮುಖಿಯಾಗಿ ಹಾಗೆಂದರೇನು ಬಿಡಿಸಿ ಎಂದರು. ಕನ್ನಡದಲ್ಲಿ ಅನುಮಾನ ಎಂದರೆ ಸಂಶಯ.( ಸಂಶಯಾತ್ಮಾ ವಿನಶ್ಯತಿ = ಸಂಶಯವುಳ್ಳವನು ಹಿಂದುಳಿವನು.) ಆದರೆ ಸಂಸ್ಕೃತದ ಅನುಮಾನ ಎಂದರೆ ಕಾರ್ಯದಿಂದ ಕಾರಣವನ್ನು ಭಾವಿಸುವುದು. ದೂರದಲ್ಲಿನ ಹೊಗೆ ಕಂಡು ಅಲ್ಲಿ ಬೆಂಕಿ ಇದೆ ಎನ್ನುವುದು, ಕಾರ್ಯವು ಕಾರಣವಿಲ್ಲದಿರದೆಂಬ ಗಟ್ಟಿ ತಿಳುವಳಿಕೆ ಅನುಮಾನ ಎಂದೆ. ಶ್ರೀಗಳು ಸಂತಸಪಟ್ಟರು.

# ಸಿ.ಟಿ.ರವಿಗೆ ಸವಾಲು ಹಾಕಿದ ಲಕ್ಷ್ಮಿ ಹೆಬ್ಬಾಳ್ಕರ್

## ನಾನು ನನ್ನ ಕುಟುಂಬ ಸಮೇತವಾಗಿ ಬಂದು ಆಣೆ ಮಾಡುತ್ತೇನೆ ಎಂದು ಸವಾಲ್ ಹಾಕಿದ್ದಾರೆ

• **ಉದಯವಾಹಿನಿ, ಬೆಂಗಳೂರು**

ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಅವರು ಸದನದಲ್ಲಿ ಕಾಂಗ್ರೇಸ್ ಸಚಿವ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅಶ್ಲೀಲ ಪದ ಬಳಸಿದ್ದಾರೆ ಎನ್ನುವ ಪ್ರಕರಣವು ರಾಜಕೀಯ ಪಕ್ಷಗಳ ಯುದ್ಧಕ್ಕೆ ಕಾರಣ ವಾಗಿದೆ. ಸಿಟಿ ರವಿ ನಾನು ಆ ರೀತಿ ಹೇಳಿಲ್ಲ ಎಂದು ಸ್ಪಷ್ಟನೆ ನೀಡಿದರೆ, ರವಿ ಅವರ ಮಾತಿಗೆ ಸಾಕ್ಷಿ ಇದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಅವರು ವಿಡಿಯೋ ರಿಲೀಸ್ ಮಾಡಿದ್ದಾರೆ. ಇದರ ಬೆನ್ನಲ್ಲೇ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸಿಟಿ ರವಿಗೆ ಸವಾಲೊಂದನ್ನು ಹಾಕಿದ್ದಾರೆ.

ಸಿಟಿ ರವಿ ಅವರು ನಿಜವಾಗಿಯೂ ಆ ರೀತಿ ಪದ ಬಳಕೆ ಮಾಡಿಲ್ಲ ಎನ್ನುವುದಾದರೆ ಧರ್ಮಸ್ಥಳಕ್ಕೆ ಬಂದು ದೇವರ ಮುಂದೆ ಪ್ರಮಾಣ ಮಾಡಿ ಹೇಳಲಿ, ನಾನು ನನ್ನ ಕುಟುಂಬ ಸಮೇತವಾಗಿ ಬಂದು ಆಣೆ ಮಾಡುತ್ತೇನೆ ಎಂದು ಸವಾಲ್ ಹಾಕಿದ್ದಾರೆ. ಹೆಣ್ಣಿಗೆ ಅವಮಾನ ಮಾಡಿದ್ದರಿಂದಲೇ ಮಹಾಭಾರತ ಹಾಗೂ ರಾಮಾಯಣ ನಡೆದಿದೆ. ಆಗಿನಿಂದಲೂ ಹೆಣ್ಣಿಗೆ ಅವಮಾನ ಪ್ರತಿಯೊಬ್ಬರಿಗೂ ಶಿಕ್ಷೆ ಆಗಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಎಚ್ಚರಿಕೆ ಕೊಟ್ಟಿದ್ದಾರೆ.



☛ಉದಯವಾಹಿನಿ ಚಿತ್ರ

**ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧವೂ ಸಿ.ಟಿ.ರವಿ ದೂರು**

ಸಿ.ಟಿ.ರವಿ ಹೇಳಿಕೆಗೆ ಸಾಕ್ಷಿ ಇದೆ. ಇಲ್ಲದಿದ್ರೆ ಸುಮ್ಮನೆ ಅವರ ಬಗ್ಗೆ, ನಾನು ನಾಟಕ ಮಾಡಲು ಸಾಧ್ಯವೇ? ಇಡೀ ಸದನದಲ್ಲಿ ನಿಂತು ಅವರ ಮೇಲೆ ಆರೋಪ ಮಾಡಲು ಸಾಧ್ಯನಾ? ಅಥವಾ ಈ ವಿಚಾರದಲ್ಲಿ ಸುಳ್ಳು ಹೇಳೋದಕ್ಕೆ ನಂಗೇನು ಹುಚ್ಚ ಇದರಿಂದ ನಾನು ರಾಜಕಾರಣದಲ್ಲಿ ಪಡೆಯುವುದು ಏನಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಹರಿಹಾಯ್ದಿದ್ದಾರೆ. ರವಿ ಅವರು ಆ ಅಶ್ಲೀಲ ಪದದ ಬದಲಿಗೆ ಫಸ್ಟ್‌ಷನ್ ಎನ್ನುವ ಪದ ಹೇಳಿದ್ದಾಗಿ ಸ್ಪಷ್ಟನೆ ನೀಡುತ್ತಿದ್ದಾರೆ ಫಸ್ಟ್‌ಟ್ ಪದಕ್ಕೂ ಅವರು ಹೇಳಿದ ಪದಕ್ಕೂ ವ್ಯತ್ಯಾಸ ಇಲ್ಲವೇ ಅವರು ಏನು ಹೇಳಿದ್ದಾರೆ ಅನ್ನೋದಕ್ಕೆ ನನ್ನ ಬಳಿ ಆಡಿಯೋ, ವಿಡಿಯೋ ಇರುವ ಸಾಕ್ಷಿಗಳಿವೆ ಎಂದು ಹೇಳಿದ್ದಾರೆ.

ಈ ಹೆಬ್ಬಾಳ್ಕರ್‌ನ ನೋಡಿ ರಾಜಕಾರಣಕ್ಕೆ ಬರಬೇಕು ಅಂತ ಸಾವಿರಾರು ಜನ ಮುಂದಾಗಿದ್ದಾರೆ. ಹಾಗಿರುವಾಗ ನನಗೆ ಆದ ಅನ್ಯಾಯಕ್ಕೆ ನಾನೇ ಹೋರಾಟ ಮಾಡದಿದ್ದರೆ ಅದು ನನ್ನ ಆತ್ಮಸಾಕ್ಷಿಗೆ ಮಾಡಿಕೊಳ್ಳುವ ವಂಚನೆ. ನಾನು ಎಲ್ಲಾ ಸಂಘರ್ಷಗಳು ಹಾಗೂ ಅವಮಾನವನ್ನು ಮೆಟ್ಟಿನಿಂತು ಬೆಳೆದಿದ್ದೇವೆ. ಆದರೆ, ಸದನದಲ್ಲಿ ನನಗಾದ ನೋವಿನಿಂದ ಮನಸ್ಸಿಗೆ ತುಂಬಾ ನೋವಾಗಿದೆ ಎಂದು ಸಂಕಟ ಹೊರಹಾಕಿದ್ದಾರೆ.

> **ಸಿ.ಟಿ.ರವಿ ಅವರು ಈ ಹಿಂದೆ ಅಪಘಾತ ಮಾಡಿದ್ದ ವಿಡಿಯೋ ನನ್ನ ಬಳಿ ಇದೆ. ನಾನು ಅವರಂತೆ ಪ್ರತಿಯೊಂದಕ್ಕೂ ಎದ್ದು ನಿಂತು ಮಾತನಾಡುವವಳಲ್ಲ. ನಾನು ಗಾಂಧೀಜಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವವಳು, ಗೋಡೆ ಹಾದಿಯಲ್ಲಲ್ಲ ಎಂದು ಸಿ.ಟಿ.ರವಿಗೆ ತಿರುಗೇಟು ನೀಡಿದ್ದಾರೆ.**

> **ಸಿ.ಟಿ.ರವಿ ಅವರು ತಮ್ಮ ಮೇಲಿನ ಆರೋಪ ಸಂಬಂಧ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಜಿ ಪರಮೇಶ್ವರ್ ಹಾಗೂ ಪೊಲೀಸರಿಗೆ ದೂರು ನೀಡಿದ್ದಾರೆ. ಸುಮಾರು 7 ಪುಟಗಳ ದೂರಿನಲ್ಲಿ ಸಿ.ಟಿ.ರವಿ ಅವರು ಸದನದಲ್ಲಿ ಏನಾಯಿತು? ಪೊಲೀಸರು ತಮಗೆ ಏನೆಲ್ಲ ಮಾಡಿದರು? ಎಂಬುದರ ಬಗ್ಗೆ ತಿಳಿಸಿದ್ದಾರೆ ಎನ್ನಲಾಗಿದೆ. ಲಕ್ಷ್ಮಿ ಹೆಬ್ಬಾಳ್ಕರ್ ಅವರು ನೀಡಿದ ದೂರಿನ ಮೇರೆಗೆ ಬೆಳಗಾವಿ ಪೊಲೀಸರು ತಡರಾತ್ರಿ ಸಿ.ಟಿ.ರವಿ ಅವರನ್ನು ಬಂಧಿಸಿದ್ದರು. ಬಳಿಕ ಅವರನ್ನು ಕೋರ್ಟ್ ಆದೇಶದ ಮೇರೆಗೆ ಬಿಡುಗಡೆ ಮಾಡಲಾಗಿತ್ತು. ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧವೂ ಸಿ.ಟಿ.ರವಿ ದೂರು ನೀಡಿದ್ದಾರೆ.**

## ಬೇಗ ಗುಣಮುಖರಾಗಿ ಬರಲೆಂದು ರಾಜ್ಯಾದ್ಯಂತ ಅಭಿಮಾನಿಗಳ ಪ್ರಾರ್ಥನೆ

• **ಉದಯವಾಹಿನಿ, ಬೆಂಗಳೂರು**

ಕನ್ನಡ ಚಲನಚಿತ್ರದ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಅವರಿಗೆ ಅಮೆರಿಕಾದ ಮಿಯಾಮಿಯ ಆಸ್ಪತ್ರೆಯಲ್ಲಿ ಸರ್ಜರಿ ನಡೆಯುತ್ತಿದೆ. ಈ ಹಿನ್ನೆಲೆ ಶಿವಣ್ಣ ಬೇಗ ಗುಣಮುಖರಾಗಲೆಂದು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಅವರ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಮಲ್ಲೇಶ್ವರಂನ ಕರ್ನಾಟಕ ರತ್ನ ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದಿಂದ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಕರುನಾಡ ಚಕ್ರವರ್ತಿ ಶಿವಣ್ಣ ಅವರ ಆರೋಗ್ಯ ಸುಧಾರಣೆಯಾಗಲಿ ಎಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಅಖಿಲ ಕರ್ನಾಟಕ ಡಾ.ಶಿವರಾಜ್ ಕುಮಾರ್ ಸೇನಾ ಸಮಿತಿ ಅಧ್ಯಕ್ಷ ಟಿ.ನಾರಾಯಣ್ ಹಾಗೂ ಹಿರಿಯ ಅಭಿಮಾನಿಗಳಾದ ಬೀಡ ಜರ್ನಾರ್ಧನ, ಸೋಮಣ್ಣ, ಗೆದ್ದಲಹಳ್ಳಿ ರಾಜು, ಪ.ರಾ. ರಾಘವೇಂದ್ರ ಹಾಗೂ ಗಂಡುಗಲಿ ಡಾ.ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ ಗಾಂಧಿನಗರ ಅಧ್ಯಕ್ಷ ಎಂ. ಮಲ್ಲ ಇತರರಿದ್ದರು.

## ಡಿ.26: ಗ್ರಾ.ಪಂ ಡಾಟಾ ಆಪರೇಟರ್‌ಗಳ ದಿನ

• **ಉದಯವಾಹಿನಿ, ಬೆಂಗಳೂರು**



ಕಂಪ್ಯೂಟರ್ ಆವಿಷ್ಕಾರ ಮಾಡಿದ ವಿಜ್ಞಾನಿ ಚಾರ್ಲ್ಸ್ ಬ್ಯಾಬೇಜ್ ಅವರ ಹುಟ್ಟಿದ ದಿನವಾದ ಜನವರಿ 26 ರಂದು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ ಗಳಲ್ಲಿನ ಡಾಟಾ ಎಂಟ್ರಿ ಆಪರೇಟರುಗಳು ಇನ್ನು ಮುಂದೆ ಪ್ರತಿ ವರ್ಷ ಕಂಪ್ಯೂಟರ್ ಆಪರೇಟರುಗಳ ದಿನವನ್ನಾಗಿ ಆಚರಿಸುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ಸಂಬಂಧ ಸಮ್ಮತಿ ಸೂಚಿಸಿದ್ದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಗುಮಾಸ್ತರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಉದ್ಯೋಗಿಗಳ ಕಲ್ಯಾಣ ಸಂಘದ ಅಧ್ಯಕ್ಷ ಭೀಮರೆಡ್ಡಿ ಪಾಟೀಲ್ ಅವರು ಸಚಿವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಗ್ರಾಮೀಣ ಜನರ ಅನಕೂಲಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಕಾರ್ಯಕ್ರಮಗಳು ಹಾಗೂ ಗ್ರಾಮ ಪಂಚಾಯತಿ ಕಚೇರಿಗಳಲ್ಲಿ ಸಿಗುವ ಸೌಲಭ್ಯಗಳನ್ನು ಸಾರ್ವಜನಿಕರ ಸನಿಹಕ್ಕೆ ತೆಗೆದುಕೊಂಡು ಹೋಗುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಗುರುತಿಸಿ ಅವರ ಕಲ್ಯಾಣಕ್ಕಾಗಿ ದಿನಾಚರಣೆ ಘೋಷಣೆ ಮಾಡಿರುವುದು ಸಂತಸ ತಂದಿದೆ ಎಂದು ಸಂಘದ ಅಧ್ಯಕ್ಷರು ಸಚಿವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

## ಕಾಂಗ್ರೇಸ್ಸಿಗರಿಗೆ ಅಂಬೇಡ್ಕರ್ ಹೆಸರು ಹೇಳುವ ನೈತಿಕ ಹಕ್ಕೇ ಇಲ್ಲ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಕಾಂಗ್ರೇಸ್ ಸರಕಾರ ಸಂಪೂರ್ಣ ವಿಫಲವಾಗಿದೆ. ಪಂಚ ಗ್ಯಾರಂಟಿಗಳನ್ನು ಸರಿಯಾಗಿ ಜಾರಿಗೊಳಿಸಿಲ್ಲ. ಅಧಿಕೃತ, ಅನಧಿಕೃತ ತೆರಿಗೆ ಹೇರುತ್ತಿದ್ದಾರೆ. ಅಂಬೇಡ್ಕರರನ್ನು ನಿರಂತರವಾಗಿ ಅಪಮಾನ ಮಾಡಿದ್ದ ಕಾಂಗ್ರೇಸ್ಸಿಗರಿಗೆ ಅವರ ಹೆಸರು ಹೇಳುವ ನೈತಿಕ ಹಕ್ಕೇ ಇಲ್ಲ ಎಂದು ರಾಜ್ಯ ಬಿಜೆಪಿ ಸಹ ಉಸ್ತುವಾರಿ ಡಾ.ಪಿ.ಸುಧಾಕರ್ ರೆಡ್ಡಿ ಅವರು ಹೇಳಿದರು. ಈ ಕುರಿತು ಮಂಗಳವಾರ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಸೋಲಿನ ನಂತರ ಕಾಂಗ್ರೇಸ್ ಪಕ್ಷದವರು ಹತಾಶರಾಗಿದ್ದಾರೆ.

ಡಾ. ಅಂಬೇಡ್ಕರರನ್ನು ಲೋಕಸಭಾ ಚುನಾವಣೆಯಲ್ಲಿ 2 ಬಾರಿ ಸೋಲಿಸಿ ಅವಮಾನಿಸಿದ್ದ ಕಾಂಗ್ರೇಸ್ ಪಕ್ಷವು ಇದೀಗ ತಮ್ಮ ನಾಯಕರನ್ನು ಉಳಿಸಿಕೊಳ್ಳಲು ಅದೇ ಬಾಬಾಸಾಹೇಬರ ಹೆಸರನ್ನು ಬಳಸಿಕೊಳ್ಳುತ್ತಿದೆ ಎಂದು ತಿಳಿಸಿದರು. ದೇಶ ವಿಭಜಿಸುವುದನ್ನು ಸಂವಿಧಾನ ಶಿಲ್ಪಿ ಅಂಬೇಡ್ಕರರು ವಿರೋಧಿಸಿದ್ದರು. 370ನೇ ವಿಧಿ ಹೇರುವುದನ್ನೂ ಅವರು ವಿರೋಧಿಸಿದ್ದರು. ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೇಸ್ ಪಕ್ಷವು ದೇಶವನ್ನೇ ಜೈಲಾಗಿ ಪರಿವರ್ತಿಸಿತ್ತು ಎಂದು ಟೀಕಿಸಿದರು. ಈಗ ಕಾಂಗ್ರೇಸ್ ಮುಖಂಡರು ಮತಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದರು. ಅಮಿತ್ ಶಾ ಅವರ ಮೇಲೆ ಕೆಸರೆರಚುವ ಕಾರ್ಯವನ್ನು ಕಾಂಗ್ರೇಸ್ ಮಾಡುತ್ತಿದೆ. ಆದರೆ, ಜನರು ಮತ್ತು ದೇಶದ ಜನತೆ ಮೋದಿಜೀ ಮತ್ತು ಅಮಿತ್ ಶಾ ಜೀ ಅವರ ಬಗ್ಗೆ ವಿಶ್ವಾಸ ಹೊಂದಿದ್ದಾರೆ ಎಂದು ನುಡಿದರು.



> **ಡಾ. ಅಂಬೇಡ್ಕರರ ಹೆಸರಿನಿಂದ ಮತ್ತೆ ರಾಜಕಾರಣ ಮಾಡಲು ಕಾಂಗ್ರೇಸ್ ಮುಂದಾಗಿದೆ. ಆದರೆ, ಜನರಿಗೆ ಕಾಂಗ್ರೇಸ್ಸಿಗರ ನೈಜ ಬಣ್ಣ ತಿಳಿದಿದೆ. ಕಾಂಗ್ರೇಸ್ಸಿಗರ ತಪ್ಪು ನೀತಿಗಳನ್ನು ಅಮಿತ್ ಶಾ ಅವರು ಜನರ ಮುಂದೆ ಅನಾವರಣಗೊಳಿಸಿದ್ದಾರೆ. ಮೋದಿ ಜೀ ಅವರು ಸ್ವಾವಲಂಬಿ, ಆತ್ಮನಿರ್ಭರ ಭಾರತ ಮಾಡುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.**

## ಕಬ್ಬನ್ ಪಾರ್ಕ್‌ನಲ್ಲಿ ಕಾರ್ಯಕ್ರಮ ಆಯೋಜಿಸಲು ಅನುಮತಿ ಕಡ್ಡಾಯ

• **ಉದಯವಾಹಿನಿ, ಬೆಂಗಳೂರು**

ನಗರದ ಹೃದಯ ಭಾಗದಲ್ಲಿರುವಂತ ಕಬ್ಬನ್ ಪಾರ್ಕ್‌ನಲ್ಲಿ ಸಾರ್ವಜನಿಕರು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಆದರೇ ಇನ್ಮುಂದೆ ಹೀಗೆ ಕಾರ್ಯಕ್ರಮ ಆಯೋಜಿಸಲು ಅನುಮತಿ ಕಡ್ಡಾಯವಾಗಿದೆ. ಈ ಕುರಿತಂತೆ ತೋಟಗಾರಿಕಾ ಇಲಾಖೆ ಮಾಹಿತಿ ನೀಡಿದ್ದು, 20ಕ್ಕಿಂತ ಹೆಚ್ಚು ಜನರು ಕಬ್ಬನ್ ಪಾರ್ಕ್ ನಲ್ಲಿ ಕಾರ್ಯಕ್ರಮ ಆಯೋಜಿಸುವುದಿದ್ದರೇ ಇಲಾಖೆಯಿಂದ ಅನುಮತಿ ಪಡೆಯುವಂತೆ ತಿಳಿಸಿದೆ. ಒಟ್ಟಾರೆಯಾಗಿ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಕಾರ್ಯಕ್ರಮ ಆಯೋಜಿಸಲು ಅನುಮತಿ ಕಡ್ಡಾಯಗೊಳಿಸಲಾಗಿದೆ. 20ಕ್ಕಿಂತ ಹೆಚ್ಚು ಜನ ಸೇರುವುದಾದರೆ ಪೊಲೀಸ್, ತೋಟಗಾರಿಕೆ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಬೇಕು. ಇಲ್ಲವಾದಲೇ ನಿಮ್ಮ ಮೇಲೆ ಕಾನೂನು ಕ್ರಮವನ್ನು ಇಲಾಖೆ ಜರುಗಿಸಲಿದೆ.

## ನಟರಿಗೆ ಪ್ಯಾನ್ ಇಂಡಿಯಾ ಭೂತ ಹಿಡಿದಿದೆ: ರಾಜೇಂದ್ರಸಿಂಗ್ ಬಾಬು

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಇವತ್ತು ಪುಸ್ತಕ ಆಧಾರಿತ ಕತೆ ಹೇಳಲು ಹೋದರೆ ನಟರು ಮನೆಗೆ ಸೇರಿಸೊಲ್ಲ. ಅವರಿಗೆ ಪ್ಯಾನ್ ಇಂಡಿಯಾ, ಪ್ಯಾನ್ ಇಂಡಿಯಾ ಎಂಬ ಯಾವುದೋ ಭೂತ ಹಿಡಿದುಕೊಂಡು ಬಿಟ್ಟಿದೆ ಎಂದು ಖ್ಯಾತ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಬೇಸರ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ನಾಡೋಜ ಡಾ.ಬರಗೂರು ಪ್ರತಿಷ್ಠಾನ ಕೊಡ ಮಾಡುವ 2023ನೇ ಸಾಲಿನ ನಾಡೋಜ ಬರಗೂರು ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು. ಇಲ್ಲಿನ ಸಂಸ್ಕೃತಿ, ಇಲ್ಲಿನ ಮಣ್ಣಿನ ಸೊಗಡಿನ ಎಂತೆಂತಹ ಕಥೆಗಳು ನಮ್ಮಲ್ಲಿವೆ. ಆದರೆ, ಆ ಕಥೆಗಳನ್ನು ನಾವು ನಮ್ಮ ಜನರಿಗೆ ತಲುಪಿಸುತ್ತಿಲ್ಲ. ನಾವು ಯಾವು ದೋ ಬೇರೆ ಭಾಷೆಯ ಮೊರೆ ಹೋಗಿ ನಮ್ಮ ಜನರ ದಾರಿ ತಪ್ಪಿಸುತ್ತಿವೆಯೇನೋ ಅನಿಸುತ್ತಿದೆ ಎಂದು ಹೇಳಿದರು.



☛ಉದಯವಾಹಿನಿ ಚಿತ್ರ

ಕೊನೆಗೆ ಯಾವ ನಟನೂ ಗೆಲ್ಲಲ್ಲ, ಗೆಲ್ಲೊದು ಕತೆ ಎಂಬ ಅಂಶವನ್ನು ಉತ್ತರ ಕನ್ನಡ ಗಮನದಲ್ಲಿಟ್ಟುಕೊಳ್ಳಬೇಕು. ಕನ್ನಡದ ಕತೆಯನ್ನು ಕದ್ದು ಸಿನಿಮಾ ಮಾಡಲಾಗುತ್ತಿದೆ. ಬಾಹುಬಲಿ ಸಿನಿಮಾದ ಕತೆಯನ್ನು ರಾಜ್ ಕುಮಾರ್ ಅವರ ಸಿನಿಮಾದ ಕತೆಗಳಿಂದ ಕದ್ದು ಮಾಡಲಾಗಿದೆ. ಕನ್ನಡದ ಕತೆಗೆ, ಸಿನಿಮಾಗಳಿಗೆ ಬ್ರಷ್ ಹಿಡಿದು ಹೊಸ ಬಣ್ಣ ಬಳಿದು ಹೊಸ ಫೋಮಿನಲ್ಲಿ ಕೂರಿಸಿ ಸಿನಿಮಾ ಮಾಡುತ್ತಿದ್ದಾರೆ. ಜನ ಅದನ್ನೇ ಅದ್ಭುತ ಕತೆ ಎಂದು ಕೊಂಡಾಡುತ್ತಿದ್ದಾರೆ ಎಂದು ತಿಳಿಸಿದರು.ನಾವು ಎಲ್ಲಾ ನಟರು, ನಿರ್ಮಾಪಕರು, ನಿರ್ದೇಶಕರು ಕನ್ನಡದ ಕತೆಗಳನ್ನು ಕಾದಂಬರಿಗಳನ್ನು ಮತ್ತೆ ನಾವು ಜನರಿಗೆ ಒಪ್ಪಿಸಿದರೆ ಕನ್ನಡದ ಜನ ಖಂಡಿತ ಮೆಚ್ಚಿಕೊಳ್ಳುತ್ತಾರೆ.

> **ಕನ್ನಡದಲ್ಲಿ ಉತ್ತಮವಾದ ಸಾಹಿತಿಗಳು, ಬರಹಗಾರರು ಇದ್ದಾರೆ. ಸಾಹಿತ್ಯ ಮತ್ತು ಸಿನಿಮಾ ಪರಸ್ಪರ ಪೂರಕವಾಗಿರಬೇಕು. ಕನ್ನಡದಲ್ಲಿ ಒಳ್ಳೆಯ ಕತೆಗಳಿವೆ. ಕನ್ನಡ ಚಿತ್ರರಂಗದ ಇತಿಹಾಸ ನೋಡಿದರೆ ಪುಸ್ತಕಗಳು ಯಾವಾಗ ಸಿನಿಮಾ ಆಗಿದೆವೆಯೋ ಅಂತಹ ಚಿತ್ರಗಳು ಅತಿ ಹೆಚ್ಚು ಗಳಿಕೆ ಮಾಡಿರುವ ಸಿನಿಮಾಗಳಾಗಿದೆ ಎಂದು ಅವರು ಹೇಳಿದರು.**

## ಕರಾವಳಿಯ ಕಂಬಳಕ್ಕೆ ಸರ್ಕಾರದ ಬೆಂಬಲ ಅನುದಾನ ಘೋಷಣೆ

• **ಉದಯವಾಹಿನಿ, ಬೆಂಗಳೂರು**

ಕರಾವಳಿಯ ಸಾಂಪ್ರದಾಯಿಕ ಆಚರಣೆಯಾದ ಕಂಬಳಕ್ಕೆ ಸರ್ಕಾರ ಬೆಂಬಲ ನೀಡಲು ಮುಂದಾಗಿದ್ದು, ಪ್ರತಿ ಕಂಬಳಕ್ಕೂ 5 ಲಕ್ಷ ರೂಪಾಯಿ ನೀಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕಳೆದ ವರ್ಷ ಕಂಬಳಕ್ಕೆ ಅನುದಾನ ಬೇಡಿಕೆ ಇಟ್ಟಿದ್ದರೂ, ಸ್ಪಂದಿಸದಿದ್ದ ರಾಜ್ಯ ಸರ್ಕಾರ ಇದೀಗ ಅನುದಾನ ಘೋಷಿಸಿದೆ. ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲೂ ಕರಾವಳಿಯ ಶಾಸಕರು ಕಂಬಳಕ್ಕೆ ಅನುದಾನ ನೀಡುವಂತೆ ಬೇಡಿಕೆ ಸಲ್ಲಿಸಿದ್ದರು. ಸ್ವತಃ ಸ್ಪೀಕರ್ ಯು.ಟಿ ಖಾದರ್ ಕೂಡಾ ಕಂಬಳಕ್ಕೆ ಸರ್ಕಾರ ನೆರವು ನೀಡದಿದ್ದರೆ ನಾವೇ ಹಣ ಸಂಗ್ರಹಿಸಿ ಕಂಬಳ ಮಾಡಲು ಗೊತ್ತು ಎಂದು ಪ್ರತಿಕ್ರಿಯಿಸಿದ್ದರು. ಇವೆಲ್ಲದರ ನಂತರ ಕಂಬಳಕ್ಕೆ ಅನುದಾನ ಬಿಡುಗಡೆಗೆ ಸರ್ಕಾರ ಆದೇಶಿಸಿದೆ. ಸಿಎಂ ಸಿದ್ದರಾಮಯ್ಯ ಶಿಫಾರಸಿನ ಮೇರೆಗೆ ಪ್ರವಾಸೋದ್ಯಮ ಸಚಿವ ಹೆಚ್.ಕೆ ಪಾಟೀಲ್ ಈ ಬಗ್ಗೆ ಆದೇಶ ಹೊರಡಿಸಿದ್ದಾರೆ. 2024–25 ನೇ ಸಾಲಿನ 24 ಜೋಡು ಕರೆ ಕಂಬಳಗಳಿಗೆ ತಲಾ 5 ಲಕ್ಷ ರೂ. ನೀಡುವುದಾಗಿ ಸರ್ಕಾರ ಘೋಷಿಸಿದೆ.

## ಜೋಶಿ ಅವರಿಗೆ ನನ್ನ ಸಾಮರ್ಥ್ಯಗೊತ್ತಿಲ್ಲ

### ಅಸಮರ್ಥ ಹೇಳಿಕೆಗೆ ತಿರುಗೇಟು ನೀಡಿದ ಪರಮೇಶ್ವರ್

• **ಉದಯವಾಹಿನಿ, ಬೆಂಗಳೂರು**

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಅಸಮರ್ಥ ಕೇಂದ್ರ ಸಚಿವ ಎಂದರೆ ಒಪ್ಪಿಕೊಳ್ತಾರಾ..? ಜೋಶಿ ಅವರಿಗೆ ನನ್ನ ಸಾಮರ್ಥ್ಯ ಗೊತ್ತಿಲ್ಲ. ಅದಕ್ಕೆ ಅವರು ಹಾಗೆ ಹೇಳಿದ್ದಾರೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ತಿರುಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮನ್ನ ಅಸಮರ್ಥ ಸಚಿವ ಎಂಬ ಕೇಂದ್ರ ಸಚಿವ ಜೋಶಿ ಅವರ ಹೇಳಿಕೆಗೆ ತಿರುಗೇಟು ನೀಡಿದರು. ಸಿ.ಟಿ. ರವಿ ಪ್ರಕರಣವನ್ನು ಈಗಾಗಲೇ ಸಿಒಡಿ ತನಿಖೆಗೆ ಒಪ್ಪಿಸಲಾಗಿದೆ. ಹೀಗಾಗಿ ತನಿಖೆ ನಡೆಯುವ ಸಂದರ್ಭದಲ್ಲಿ ಅದ ಬಗ್ಗೆ ನಾನು ಹೆಚ್ಚು ಮಾತನಾಡುವುದು ಸರಿಯಲ್ಲ ಎಂದರು. ಸಿ.ಟಿ.ರವಿ ಪ್ರಕರಣ ಮುಗಿದ ಅಧ್ಯಾಯ ಎನ್ನುವ ಸಭಾಪತಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, ಅವರು ತಮ್ಮ ಕೆಲಸವನ್ನು ಮಾಡಿದ್ದಾರೆ. ಅಲ್ಲಿಯ ಸಾಧಕ ಬಾಧಕಗಳನ್ನ ನೋಡಿಕೊಂಡು ಹೇಳಿಕೆ ಕೊಟ್ಟಿರಬಹುದು. ಪೊಲೀಸರು ಅವರ ಕರ್ತವ್ಯ ನಿರ್ವಹಿಸುತ್ತಾರೆ. ಕಾನೂನು ಪ್ರಕ್ರಿಯೆ ನಡೆಯುವಾಗ ಕೆಲವು ವಿಳಂಬವಾಗಬಹುದು. ಆದರೆ ಪ್ರಕರಣದ ಸತ್ಯಾಸತ್ಯತೆ ನೋಡಿ ತನಿಖೆ ಸರಿಯಾಗಿ ಮಾಡಬೇಕಾಗುತ್ತದೆ ಎಂದರು.

ಸಿ.ಟಿ.ರವಿ ಆ ರೀತಿ ಹೇಳಿಲ್ಲ ಎನ್ನುತ್ತಿದ್ದಾರೆ. ಆದರೆ ಸಚಿವ ಹೆಬ್ಬಾಳಕರ್ ಪಕ್ಕದಲ್ಲಿದ್ದವರು ಆ ಮಾತು ಆಡಿದ್ದಾರೆ ಅಂತ ಹೇಳುತ್ತಿದ್ದಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ತನಿಖೆ ಆಗಲೆಂದೇ ಸಿಒಡಿಗೆ ಹಸ್ತಾಂತರ ಮಾಡಲಾಗಿದೆ. ಪೊಲೀಸ್ ಇಲಾಖೆ ಅತ್ಯಂತ ಜವಬ್ದಾರಿ ಇಲಾಖೆಯಾಗಿದೆ.




> **ಮುಖ್ಯಮಂತ್ರಿ ಅಥವಾ ಗೃಹ ಸಚಿವರ ಆದೇಶವನ್ನ ಮಾತ್ರ ಪೊಲೀಸರು ಪಾಲನೆ ಮಾಡುತ್ತಾರೆ. ಇತರರ ಹಸ್ತಕ್ಷೇಪ ಅಸಾಧ್ಯ. ಬೇರೆ ಯಾರೇ ಆದೇಶ ಮಾಡಿದರು ಅದನ್ನ ಪಾಲನೆ ಮಾಡುವುದಿಲ್ಲ. ಅವರಿವರು ಆರೋಪ ಮಾಡುತ್ತಾರೆ ಎಂದು ನಾವು ಇಲಾಖೆ ನಡೆಸುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ನಾವು ಕೆಲಸ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.**

## ಶ್ವೇತಗೌಡಗೂ ನನಗೂ ಸಂಬಂಧ ಇಲ್ಲ

• **ಉದಯವಾಹಿನಿ, ಬೆಂಗಳೂರು**

ತಮಗೂ ಹಾಗೂ ವಂಚಕಿ ಶ್ವೇತಗೌಡಗೂ ಯಾವುದೇ ಸಂಬಂಧ ಇಲ್ಲ. ತನ್ನ ಹೆಸರನ್ನ ಆಕೆ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಮಾಜಿ ಸಚಿವ ವರ್ತೂರು ಪ್ರಕಾಶ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಚಿನ್ನಾಭರಣ ವಂಚನೆ ಕೇಸ್ ಸಂಬಂಧ ಪೊಲೀಸರ ವಿಚಾರಣೆ ಎದುರಿಸಿ ಮಾಧ್ಯಮಗಾಳಿಗೆ ಅವರು ಪ್ರತಿಕ್ರಿಯೆ ಕೊಟ್ಟರು. ಶ್ವೇತಗೌಡ ತಮಗೆ 5–6 ತಿಂಗಳಿನಿಂದ ಪರಿಚಯ ಆಗಿದ್ದರು. ಅವರ ಜತೆ ಯಾವುದೇ ವ್ಯವಹಾರ ಇಲ್ಲ. ಪೊಲೀಸ್ ವಿಚಾರಣೆ ಆಕೆ ತಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ವರ್ತೂರು ಪ್ರಕಾಶ್ ಹೇಳಿದ್ದಾರೆ. ಎಲ್ಲಾ ಮಾಹಿತಿ ನೀಡಿದ್ದು, ಈ ವಂಚನೆಗೂ ತಮಗೂ ಸಂಬಂಧ ಇಲ್ಲ ಎಂದಿದ್ದಾರೆ.

ರಾಜಕಾರಣಿಗಳ ಮನೆಗೆ ಕೆಲವರು ಬಂದು ಹೋಗೋದು ಕಾಮನ್. ಆಕೆ ಮೇಲೆ 20 ಕ್ಕೂ ಹೆಚ್ಚು ಕೇಸ್ ಇದೆ. 2 ಕೋಟಿ ರೂಪಾಯಿ ಚಿನ್ನ ಪಡೆದು ವಂಚಿಸಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ಆಗಲಿ ಎಂದು ವರ್ತೂರು ಪ್ರಕಾಶ್ ಒತ್ತಾಯಿಸಿದರು.



☛ಉದಯವಾಹಿನಿ ಚಿತ್ರ

**ವರ್ತೂರು ಪ್ರಕಾಶ್ ಒತ್ತಾಯ**

ಜ್ಯುವೆಲ್ಲರಿ ಮಾಲೀಕರಿಗೆ ವಂಚನೆ ಪ್ರಕರಣದಲ್ಲಿ ಶ್ವೇತ ಗೌಡ ಎಂಬ ಯುವತಿಯನ್ನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಆಕೆಯನ್ನ ವಿಚಾರಣೆಗೆ ಒಳಪಡಿಸಿದಾಗ ತನಗೆ ವರ್ತೂರು ಪ್ರಕಾಶ್ ಪರಿಚಯ ಎಂದು ಹೇಳಿದ್ದಾರೆ. ಈ ಸಂಬಂಧ ಪ್ರಕಾಶ್‌ಗೆ ನೋಟಿಸ್ ನೀಡಲಾಗಿತ್ತು. ಹೀಗಾಗಿಯೇ ವರ್ತೂರು ಪ್ರಕಾಶ್ ಇವತ್ತು ವಿಚಾರಣೆ ಎದುರಿಸಿದ್ದಾರೆ.

## ವೀಣಾ ವಾದನ

• **ಉದಯವಾಹಿನಿ, ಬೆಂಗಳೂರು**



ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಅವರ ನೇತೃತ್ವದಲ್ಲಿ ಡಿಸೆಂಬರ್ 26, ಗುರುವಾರ ಸಂಜೆ 7–00 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕು|| ಅಹಿಕಾ ನಾಗದೀಪ್ (ವೀಣಾ ವಾದನ), ಶ್ರೀ ವರದರಾಜ್ (ಮೃದಂಗ), ಚಿ|| ಸಮರ್ಥ ಚಂದ್ರ (ಕೊಳಲು) ಏರ್ಪಡಿಸಿದೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಬೆಂಗಳೂರು

## ಬೆಳಗಾವಿ ಕಾಂಗ್ರೇಸ್ ಅಧಿವೇಶನದ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಮೂರು ಉಪಚುನಾವಣೆಯಲ್ಲಿ ಕಾಂಗ್ರೇಸ್ ಭರ್ಜರಿ ಜಯಗಳಿಸಿದ ಬಳಿಕ ಕಾಂಗ್ರೇಸ್ ಅಧ್ಯಕ್ಷರ ಬದಲಾವಣೆ ಕುರಿತು ಕೈ ಪಾಳಯದಲ್ಲಿ ಭಾರೀ ಚರ್ಚೆಯಾಗಿತ್ತು. ಇದೀಗ ಬೆಳಗಾವಿಯಲ್ಲಿ ಕಾಂಗ್ರೇಸ್ ಅಧಿವೇಶನದ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾಗಲಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ. ಬೆಳಗಾವಿ ಈ ಕುರಿತು ಮಾಧ್ಯಮಗಳ ಜೊತೆಗೆ ಮಾತನಾಡಿದ ಸಚಿವ ಎಂ.ಬಿ. ಪಾಟೀಲ್ ಅವರು ಮಾತನಾಡಿ, ಬೆಳಗಾವಿಯಲ್ಲಿ ನಡೆಯಲಿರುವ ಕಾಂಗ್ರೇಸ್ ಅಧಿವೇಶನದ ನಂತರ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯಾಗುವ ಸಾಧ್ಯತೆ ಇದೆ. ಈ ಕುರಿತಂತೆ ಕಾಂಗ್ರೇಸ್ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತಂತೆ ಪಕ್ಷದ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಬೆಳಗಾವಿಯಲ್ಲಿ ನಡೆಯಲಿರುವ ಕಾಂಗ್ರೇಸ್ ಅಧಿವೇಶನದ ನಂತರ ಈ ಬಗ್ಗೆ ನಿರ್ಧಾರವಾಗಲಿದೆ ಎಂದು ಹೇಳಿದರು.

# ಹೊಸ 20 ಅಂಬಾರಿ ಸ್ಲೀಪರ್ ಬಸ್ಸುಗಳ ಲೋಕಾರ್ಪಣೆ

## ಕೆಎಸ್‌ಆರ್‌ಟಿಸಿ ಪ್ರಯಾಣಿಕರಿಗೆ ರಸ್ತೆಗೆ ಇಳಿಯಲಿವೆ ವೋಲ್ವೋ, ಅಂಬಾರಿ, ಉತ್ಸವ ಸ್ಲೀಪರ್ ಬಸ್

• **ಉದಯವಾಹಿನಿ, ಬೆಂಗಳೂರು**

ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣಿಕರಿಗೆ ಗುಡ್ ನ್ಯೂಸ್ ಒಂದು ಹೊರಬಿದ್ದಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಹೊಸ 20 ಅಂಬಾರಿ ಸ್ಲೀಪರ್ ಬಸ್ಸುಗಳನ್ನು ಲೋಕಾರ್ಪಣೆಗೊಳಿಸಿದ್ದಾರೆ. ಹೀಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಂಬಾರಿ ಉತ್ಸವ್ ಸ್ಲೀಪರ್ ಬಸ್ಸುಗಳು ರಸ್ತೆ ಇಳಿಯಲಿದ್ದಾವೆ. ಇಂದು ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ನಿಗಮದ 20 ಅಂಬಾರಿ ಉತ್ಸವ ಸ್ಲೀಪರ್ ಬಸ್ಸುಗಳಿಗೆ ರಾಮಲಿಂಗಾರೆಡ್ಡಿ, ಸಾರಿಗೆ ಮತ್ತು ಮುಜರಾಯಿ ಸಚಿವರು, ದಿನೇಶ್ ಗುಂಡುರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಎಸ್. ಆರ್. ಶ್ರೀನಿವಾಸ್ (ವಾಸು), ಅಧ್ಯಕ್ಷರು ಹಾಗೂ ಶಾಸಕರು ಗುಬ್ಬಿ ವಿಧಾನಸಭಾ ಕ್ಷೇತ್ರ ಮತ್ತು ಮೊಹಮ್ಮದ್ ರಿಜ್ವಾನ್ ನವಾಬ್, ಉಪಾಧ್ಯಕ್ಷರು, ಕರಾರಸಾ ನಿಗಮರವರು ಚಾಲನೆ ನೀಡಿದರು. ಕರಾರಸಾ ನಿಗಮದ ಹುಮ್ನಾಬಾದ್ ತರಬೇತಿ ಕೇಂದ್ರದಲ್ಲಿ ನಡೆಸದ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ 1406 ಅಭ್ಯರ್ಥಿಗಳ ಪೈಕಿ 50 ಅಂಕಗಳಿಗೆ 50/49/48 ಅಂಕ ಪಡೆದಿರುವ 82 ಅಭ್ಯರ್ಥಿಗಳಿಗೆ ಪೈಕಿ 14 ಮಂದಿಗೆ ಚಾಲಕ ಕಂ ನಿರ್ವಾಹಕರ ಹುದ್ದೆಗೆ ತಾತ್ಕಾಲಿಕ ನಿಯೋಜನೆ ಆದೇಶ ವಿತರಣೆ ಮಾಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರತಿ ದಿನ 8896 ವಾಹನಗಳ ಮೂಲಕ 8063 ಅನುಸೂಚಿಗಳಿಂದ 28.76 ಲಕ್ಷ ಕಿ.ಮೀ ಕ್ರಮಿಸಿ 35.43 ಲಕ್ಷ ಪ್ರಯಾಣಿಕರಿಗೆ ಸಾರಿಗೆ ಸೇವೆಯನ್ನು ಒದಗಿಸುತ್ತಿದ್ದು ಇದರಲ್ಲಿ ಶೇ.17 ರಷ್ಟು ವಿದ್ಯಾರ್ಥಿಗಳಿಗೆ ಸಾರಿಗೆ ಸೇವೆಯನ್ನು ಕಲ್ಪಿಸಲಾಗುತ್ತಿದೆ. ನಮ್ಮ ಸರ್ಕಾರವು ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ 5800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ ನೀಡಿದ್ದು, ಈ ಪೈಕಿ ನಾಲ್ಕು ನಿಗಮಗಳಲ್ಲಿ ಕಳೆದ ಒಂದುವರೆ ವರ್ಷದಲ್ಲಿ 4301 ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗಿದೆ.

ನಾಲ್ಕು ನಿಗಮಗಳಲ್ಲಿ 9000 ಹುದ್ದೆಗಳ ನೇಮಕಾತಿಗೆ ನಮ್ಮ ಸರ್ಕಾರವು ಅನುಮತಿ ನೀಡಿದ್ದು, ಈ ಪೈಕಿ 2144, ಚಾಲಕ ಕಂ ನಿರ್ವಾಹಕ, ತಾಂತ್ರಿಕ ಸಿಬ್ಬಂದಿ ಹಾಗೂ ಆಡಳಿತ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. 6856 ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು.

ಶಕ್ತಿ ಯೋಜನೆ ನಿಗಮಗಳ ವಾಹನಗಳಲ್ಲಿ 356.00 ಕೋಟಿ ಮಹಿಳೆಯರು ಪ್ರಯಾಣಿಸಿದ್ದು ಅವರ ಪ್ರಯಾಣದ ಶೂನ್ಯ ಟಿಕೇಟ್ ಮೌಲ್ಯ ರೂ. 8598.23 ಕೋಟಿಗಳಾಗಿರುತ್ತದೆ.

ಮಹಿಳಾ ಪ್ರಯಾಣಿಕರ ಪ್ರಯಾಣದ ಪ್ರಮಾಣ ಶೇ.58.37 ಆಗಿರುತ್ತದೆ. ಶಕ್ತಿ ಯೋಜನೆ ಜಾರಿಗೆ ಮುನ್ನ ನಾಲ್ಕು ನಿಗಮಗಳ ವಾಹನಗಳಲ್ಲಿ ಸರಾಸರಿ 82.51 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಪ್ರಸ್ತುತ ಈ ಸಂಖ್ಯೆಯು 108.70 ಲಕ್ಷಗಳಿಗೆ ಹೆಚ್ಚಳವಾಗಿರುತ್ತದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ನಾಲ್ಕು ನಿಗಮಗಳಲ್ಲಿ 1004 ಮೃತ ಸಿಬ್ಬಂದಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಆದೇಶ ನೀಡಲಾಗಿದೆ.



☛ಉದಯವಾಹಿನಿ ಚಿತ್ರ

> **ಕ.ರಾ.ರ.ಸಾ.ನಿಗಮದ ಸಿಬ್ಬಂದಿಗಳ ಮಕ್ಕಳಿಗೆ ವಿದ್ಯಾ ಸಹಾಯ ನಿಧಿ ಅಡಿಯಲ್ಲಿ 'ಸಾರಿಗೆ ವಿದ್ಯಾ ಚೇತನ' ಯೋಜನೆಯಡಿ ಜಾರಿಗೊಳಿಸಿದ್ದು, ಈವರೆಗೂ 6083 ಫಲಾನುಭವಿಗಳಿಗೆ ರೂ. 3.05 ಕೋಟಿ ಸ್ಕಾಲರ್‌ಶಿಪ್ ನೀಡಲಾಗಿದೆ. ನಿಗಮಕ್ಕೆ ಲಭಿಸಿರುವ ಪ್ರಶಸ್ತಿಗಳು: ಕಳೆದ ಒಂದುವರೆ ವರ್ಷದ ಅವಧಿಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ 112 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿರುತ್ತದೆ.**

### ಸಂಚಾರದ ಮಾರ್ಗಗಳ ಪಟ್ಟಿ

- ಕುಂದಾಪುರ – ಬೆಂಗಳೂರು –2
- ಮಂಗಳೂರು – ಬೆಂಗಳೂರು –2
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ – ಕುಂದಾಪುರ –2
- ಬೆಂಗಳೂರು – ನೆಲ್ಲೂರು –2
- ಬೆಂಗಳೂರು – ಹೈದಾರಬಾದ್ –2
- ಬೆಂಗಳೂರು – ವಿಜಯವಾಡ– 4
- ಬೆಂಗಳೂರು – ಎರ್ನಾಕುಲಂ – 2
- ಬೆಂಗಳೂರು – ತ್ರಿಶೂರು – 2
- ಕರ್ನಾಟಕ ಬೆಂಗಳೂರು – ಕ್ಯಾಲಿಕಟ್ –2

> **ಸಾರಿಗೆ ಸುರಕ್ಷಾ ಅಪಘಾತ ಪರಿಹಾರ ವಿಮಾ ಯೋಜನೆ: ಅಪಘಾತದಿಂದ ಮೃತಪಟ್ಟ 22 ಸಿಬ್ಬಂದಿಗಳ ಅವಲಂಭಿತರಿಗೆ ತಲಾ ರೂ. 1 ಕೋಟಿಯಂತೆ ಇದುವರೆಗೆ ರೂ.22 ಕೋಟಿಗಳ ಪರಿಹಾರ ನೀಡಲಾಗಿದೆ. ನೌಕರರ ಕುಟುಂಬ ಕಲ್ಯಾಣ ಪರಿಹಾರ ಯೋಜನೆ: ಹೃದಯಾಘಾತ ಕ್ಯಾನ್ಸರ್, ಸ್ಟ್ರೋಕ್ ಮತ್ತಿತರ ಕಾರಣಗಳಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ತಲಾ ರೂ. 10 ಲಕ್ಷಗಳಂತೆ 81 ಸಿಬ್ಬಂದಿಗಳ ಅವಲಂಭಿತರಿಗೆ ರೂ. 8.10 ಕೋಟಿಗಳ ಪರಿಹಾರ ವಿತರಿಸಲಾಗಿದೆ.**

# ಜಿಲ್ಲೆಯಲ್ಲಿ ಹೆಚ್ಚಿದ ಬಹಿಷ್ಕಾರ ಪದ್ಧತಿ: ಅಧಿಕಾರಿಗಳಿಂದ ಖಡಕ್ ಎಚ್ಚರಿಕೆ

## ಗ್ರಾಮಗಳಲ್ಲಿ ಬಹಿಷ್ಕಾರ, ದಂಡ ವಿಧಿಸುವಿಕೆ, ಕಾನೂನು ಕೈಗೆತ್ತಿಕೊಳ್ಳುವ ಪ್ರಕರಣಗಳು ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ

• ಉದಯವಾಹಿನಿ ಚಾಮರಾಜನಗರ

ಚಾಮರಾಜನಗರ ಜಿಲ್ಲೆಯ ಗ್ರಾಮಗಳಲ್ಲಿ ಬಹಿಷ್ಕಾರ, ದಂಡ ವಿಧಿಸುವಿಕೆ, ಕಾನೂನು ಕೈಗೆತ್ತಿಕೊಳ್ಳುವ ಪ್ರಕರ ಣಗಳು ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ಎಚ್ಚರಿಕೆ ನೀಡಿದ್ದಾರೆ.

ಚಾಮರಾಜನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿಂದು ಗುಂಡ್ಲುಪೇಟೆ ತಾಲ್ಲೂಕಿನ ಯಡವನ ಹಳ್ಳಿಯಲ್ಲಿ ಒಂದೇ ಕೋಮಿನ ಕುಟುಂಬಗಳಿಗೆ ಅದೇ ಕೋಮಿನ ಮುಖಂಡರು, ಯಜಮಾನರು ಬಹಿಷ್ಕಾರ ಹಾಕಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮದ ಮುಖಂಡರು ಮತ್ತು ಬಹಿಷ್ಕಾರಕ್ಕೆ ಒಳಗಾಗಿದ್ದಾರೆ ಎನ್ನಲಾದ ಕುಟುಂಬ ಸದಸ್ಯರೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮದಲ್ಲಿ ಯಾವುದೇ ತಪ್ಪುಗಳಾದರೆ ಪೊಲೀಸ್ ಅವರಿಗೆ ಮಾಹಿತಿ ನೀಡಬೇಕು. ತಪ್ಪು ಎಸಗಿದವರ ವಿರುದ್ಧ ಬಹಿಷ್ಕಾರ ಹಾಕುವ ಪದ್ಧತಿ ಯಾರಿಗೂ ಇಲ್ಲ. ತಪ್ಪು ಎಸಗಿದ್ದಾರೆ ಎನ್ನುವವರ ವಿರುದ್ಧ ದಂಡನೆ ವಿಧಿಸುವ ಯಾವುದೇ ಅಧಿಕಾರ ನಿಮಗಿಲ್ಲ. ಕಾನೂನು ಕೈಗೆತ್ತಿಕೊಳ್ಳುವ ಪ್ರಕರಣಗಳಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

**ಕಾನೂನಿಗೆ ವಿರುದ್ಧವಾದ ಕ್ರಮ ತೆಗೆದುಕೊಳ್ಳಬಾರದು**

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಅವರು ಕಾನೂನಿಗೆ ವಿರುದ್ಧವಾದ ಯಾವುದೇ ಕ್ರಮ ತೆಗೆದುಕೊಳ್ಳಬಾರದು. ಗ್ರಾಮದ ಹಂತದಲ್ಲಿ ಮತ್ತೊಬ್ಬರಿಗೆ ತೊಂದರೆ ಉಂಟುಮಾಡುವ ಯಾವುದೇ ನಿರ್ಧಾರ ಕೈಗೊಳ್ಳಬಾರದು ಎಂದರು.**


ಉದಯವಾಹಿನಿ ಚಿತ್ರ

ಬಹಿಷ್ಕಾರ ಹೇರುವುದು ಕಾನೂನು ಬಾಹಿರ. ಈ ಬಗ್ಗೆ ಯಾವುದೇ ಮಾನ್ಯತೆ ಇಲ್ಲ. ಬಹಿಷ್ಕಾರ ಸೇರಿದಂತೆ ತೊಂದರೆ ನೀಡುವ ಕಟ್ಟುಪಾಡುಗಳನ್ನು ಕೈಬಿಡಬೇಕು. ಕಾನೂನು ಪಾಲನೆಯನ್ನು ಪ್ರತಿಯೊಬ್ಬರು ಮಾಡಬೇಕು. ಕಾನೂನಿಗೆ ಹೊರತಾದ ಯಾವುದೇ ತೀರ್ಮಾನ ಮಾಡುವಂತಿಲ್ಲ.

ತಪ್ಪು ನಡೆ, ನಿರ್ಧಾರ ಕೈಗೊಂಡು ಮತ್ತೊಂದು ಕುಟುಂಬವನ್ನು ಸಂಕಷ್ಟಕ್ಕೆ ಗುರಿ ಮಾಡಿದರೆ ಸೂಕ್ತ ಕ್ರಮ ಎದುರಿಸಬೇಕಾಗುತ್ತದೆ ಎಂದು ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ತಿಳಿಸಿದರು.

**ಗ್ರಾಮದಲ್ಲಿ ಯಾವುದೇ ಕಲಹ, ಇನ್ನಿತರ ವ್ಯತ್ಯಾಸಗಳಾದಾಗ ನಮಗೆ ಮಾಹಿತಿ ನೀಡಿ, ದೂರು ದಾಖಲಿಸಬೇಕು. ನಿಮ್ಮಲ್ಲಿಯೇ ತೀರ್ಮಾನ ಮಾಡಿ ಕಠಿಣ ಕ್ರಮಗಳನ್ನು ಹೇರುವಂತಿಲ್ಲ. ಒಳ್ಳೆಯ ಉದ್ದೇಶಗಳಿಗೆ, ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಿಗೆ ಊರಿನ ಯಜಮಾನರು ಮುಂದಾಗಬೇಕು. ಕಾನೂನು ಬಾಹಿರ ಕ್ರಮಗಳಿಗೆ ಅವಕಾಶ ಕೊಡಬಾರದು -ಡಾ. ಬಿ.ಟಿ. ಕವಿತಾ**

**ಬಿ.ಎಸ್. ಭಾರತಿ ಎಚ್ಚರಿಕೆ**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರು ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಇದ್ದೇವೆ. ಕಟ್ಟುಪಾಡುಗಳನ್ನು ಕೈಬಿಡಬೇಕು. ಕಾನೂನು ಪಾಲನೆಯನ್ನು ಪ್ರತಿಯೊಬ್ಬರು ಮಾಡಬೇಕು. ಕಾನೂನಿಗೆ ಹೊರತಾದ ಯಾವುದೇ ತೀರ್ಮಾನ ಮಾಡುವಂತಿಲ್ಲ.

ತಪ್ಪು ನಡೆ, ನಿರ್ಧಾರ ಕೈಗೊಂಡು ಮತ್ತೊಂದು ಕುಟುಂಬವನ್ನು ಸಂಕಷ್ಟಕ್ಕೆ ಗುರಿ ಮಾಡಿದರೆ ಸೂಕ್ತ ಕ್ರಮ ಎದುರಿಸಬೇಕಾಗುತ್ತದೆ ಎಂದು ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ತಿಳಿಸಿದರು. ಕಾನೂನನ್ನು ಪ್ರತಿಯೊಬ್ಬರು ಗೌರವಿಸಬೇಕು. ಬಹಿಷ್ಕಾರ, ದಂಡ ವಿಧಿಸುವಂತಹ ಪದ್ಧತಿಗಳನ್ನು ಮುಂದುವರೆಸಿದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಇತರರು ಸಭೆಯಲ್ಲಿ ಇದ್ದರು.

# ಲಿಂಗತ್ವ ಅಲ್ಪಸಂಖ್ಯಾತರ ಸ್ವಾಭಿಮಾನ ಹಬ್ಬ

• ಉದಯವಾಹಿನಿ ರಾಮನಗರ

ನಾವೂ ಮನುಷ್ಯರು. ನಮಗೂ ಬದುಕಿದೆ. ನಮ್ಮನ್ನು ಸಹ ಮನುಷ್ಯರಂತೆ ನೋಡಿ. ಲಿಂಗತ್ವ ಅಲ್ಪಸಂಖ್ಯಾತರಾಗಿ ಹುಟ್ಟಿದ್ದು ನಮ್ಮ ತಪ್ಪಲ್ಲ. ದೈಹಿಕ ರಚನೆಯಲ್ಲಾದ ಪರಿವರ್ತನೆಗೆ ನಾವು ಹೊಣೆಯಲ್ಲ. ನಮ್ಮ ಹಕ್ಕುಗಳನ್ನು ಗೌರವಿಸಿ. ಗೌರವದಿಂದ ಬದುಕಲು ಸೌಲಭ್ಯ ಕೊಡಿ.

ನಗರದಲ್ಲಿ ಜರುಗಿದ 'ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಲೈಂಗಿಕ ಕಾರ್ಮಿಕರ ಸ್ವಾಭಿಮಾನ ಹಬ್ಬ- 2024' ಹಾಗೂ 'ನಮ್ಮ ನಡೆ ಘನತೆಯ ಕಡೆ' ಜಾಗೃತಿ ಜಾಥಾದಲ್ಲಿ ಪಾಲ್ಗೊಂಡಿದ್ದವರ ಬಾಯಲ್ಲಿ ಕೇಳಿಬಂದ ಘೋಷಣೆಗಳಿವು. ನಗರದ ಐಜೂರು ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದ ಜಾಗೃತಿ ಜಾಥಾದಲ್ಲಿ ಹೆಜ್ಜೆ ಹಾಕಿದವರು ಹಿಡಿದ ಫಲಕಗಳಲ್ಲೂ ಇದೇ ಸಾಲುಗಳು ಕಂಡುಬಂದವು. ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಜೊತೆಗೆ, ಘನತೆಯ ಬದುಕಿಗೆ ಅಗತ್ಯ ಸೌಲಭ್ಯಗಳನ್ನು ಕೊಡುವಂತೆ ಒತ್ತಾಯಿಸಿದರು. ಜಾಥಾಕ್ಕೆ ಚಾಲನೆ ನೀಡಿದ ಲಿಂಗತ್ವ ಅಲ್ಪಸಂಖ್ಯಾತರ ಹೋರಾಟಗಾರ್ತಿ ಅಮ್ಮ ಪದ್ಮಸಾಲಿ ಮಾತನಾಡಿ. 'ನಮಗೆ ಬಾಡಿಗೆಗೆ ಮನೆಗಳು ಸಿಗುತ್ತಿಲ್ಲ. ಸಿಕ್ಕರೂ ಹೆಚ್ಚು


ಉದಯವಾಹಿನಿ ಚಿತ್ರ

ಬಾಡಿಗೆ ಹೇಳು ವುದು, ತಾರತಮ್ಯ ಮಾಡುವುದು, ಅನಗತ್ಯವಾಗಿ ಕಿರುಕುಳ ನೀಡುವುದು, ಕಾರಣವಿಲ್ಲದೆ ಮನೆ ಖಾಲಿ ಮಾಡಿಸುವುದು ಸಾಮಾನ್ಯವಾಗಿದೆ. ಇದರಿಂದಾಗಿ ನಮ್ಮದು ಅಲೆಮಾರಿ ಜೀವನವಾಗಿದೆ' ಎಂದು ಅಸಮಾಧಾನ ತೋಡಿಕೊಂಡರು.


ರಾಜ್ಯದ ಕೆಲ ಜಿಲ್ಲೆಗಳಲ್ಲಿ ಸರ್ಕಾರ ಲಿಂಗತ್ವ ಅಲ್ಪಸಂಖ್ಯಾತರಿಗಾಗಿ ಜಾಗ ಮಂಜೂರು ಮಾಡಿ, ಅಲ್ಲಿ ಮನೆಗಳನ್ನು ನಿರ್ಮಿಸುತ್ತಿದೆ. ಅದೇ ರೀತಿ ರಾಮನಗರ ಜಿಲ್ಲೆಯಲ್ಲಿಯೂ ವಾಸಯೋಗ್ಯ ಸ್ಥಳ ಗುರುತಿಸಿ, ಮನೆಗಳನ್ನು ಕಟ್ಟಿಸಿ ಕೊಡಬೇಕು. ಅಲ್ಲಿ ಮೂಲಸೌಕರ್ಯಗಳನ್ನು ಒದಗಿಸಿ, ನಾವೂ ಸಹ ಇತರರಂತೆ ಬದುಕುವ ವಾತಾವರಣ ಸೃಷ್ಟಿಸಬೇಕು' ಎಂದು ಒತ್ತಾಯಿಸಿದರು.

# ಪಾದಾಚಾರಿ ಮಾರ್ಗ ಒತ್ತುವರಿ ತೆರವು

• ಉದಯವಾಹಿನಿ ಚಿಂತಾಮಣಿ

ನಗರದಲ್ಲಿನ ಮುಖ್ಯ ರಸ್ತೆಗಳ ಬದಿಯ ಪಾದಾಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಗರಸಭೆ ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಸೋಮವಾರ ಆರಂಭಿಸಿವೆ. ನಗರದಲ್ಲಿ ಪಾದಾಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಬೇಕು ಎಂದು ನಗರಸಭೆ ಅಧಿಕಾರಿಗಳು ಮಾಧ್ಯಮಗಳು ಮತ್ತು ಆಟೊದಲ್ಲಿ ಮೈಕ್ ಇಟ್ಟು ಪ್ರಚಾರ ನಡೆಸಿದ್ದರು.

ಒತ್ತುವರಿ ತೆರವಿಗೆ ಸೋಮವಾರದ ವರೆಗೆ ಗಡುವು ನೀಡಲಾಗಿತ್ತು. ಈ ಪ್ರಕಾರ ಕೆಲವರು ಸ್ವಯಂಪ್ರೇರಿತರಾಗಿ ಒತ್ತುವರಿ ತೆರವು ಮಾಡಿದರೆ, ಮತ್ತೆ ಕೆಲವು ಕಡೆ ನಗರಸಭೆ ಅಧ್ಯಕ್ಷ ಆರ್. ಜಗನ್ನಾಥ್, ಉಪಾಧ್ಯಕ್ಷೆ ರಾಣಿಯಮ್ಮ ಹಾಗೂ ಪೌರಾಯುಕ್ತ ಜಿ.ಎನ್. ಚಲಪತಿ ನೇತೃತ್ವದಲ್ಲಿ ಮಧ್ಯರಾತ್ರಿ 2 ಗಂಟೆಯಿಂದಲೇ ಎರಡು ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ ನಡೆಯಿತು. ನಗರಸಭೆ ಮುಂಭಾಗದ ಗಣೇಶಗುಡಿ ಎದುರಿಗೆ ಹಾಕಿದ್ದ ಶೀಟ್ ತೆರವುಗೊಳಿಸುವ ಮೂಲಕ ಒತ್ತುವರಿ ತೆರವು ಆರಂಭಿಸಲಾಯಿತು.


ಉದಯವಾಹಿನಿ ಚಿತ್ರ

**ಜೆಸಿಬಿ ಮೂಲಕ ತೆರವು**

ಪೌರಾಯುಕ್ತ ಚಲಪತಿ ಮಾತನಾಡಿ, ಸ್ವಯಂಪ್ರೇರಿತರಾಗಿ ಒತ್ತುವರಿ ತೆರವುಗೊಳಿಸಿದವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರಸಭೆಯ ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ, ಪೌರಕಾರ್ಮಿಕರು ತೆರವು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಬಂದೋಬಸ್ತ್ ಮಾಡಲಾಗಿತ್ತು. ಚಿಂತಾಮಣಿ ನಗರಸಭೆಯ ಮುಂಭಾಗದಲ್ಲೇ ಇರುವ ಗಣೇಶ ದೇವಾಲಯಕ್ಕೆ ಪಾದಾಚಾರಿ ಮಾರ್ಗದ ಮೇಲೆ ಅಳವಡಿಸಿದ್ದ ತಗಡಿನ ಶೀಟ್‌ಗಳನ್ನು ತೆರವುಗೊಳಿಸುತ್ತಿರುವುದು.

**ಪಿಸಿಆರ್ ಕಾಂಪ್ಲೆಕ್ಸ್ ಬಳಿ ಅಂಗಡಿ ಮಾಲೀಕರು ಪಾದಾಚಾರಿ ಮಾರ್ಗದಲ್ಲಿ ಅಳವಡಿಸಿದ್ದ ತಗಡಿನ ಶೀಟ್‌ಗಳು, ಮೆಟ್ಟಿಲುಗಳು, ಸಿಮೆಂಟ್ ಕಟ್ಟೆಗಳನ್ನು ಜೆಸಿಬಿಗಳ ಮೂಲಕ ತೆರವುಗೊಳಿಸಲಾಯಿತು. ಜೋಡಿ ರಸ್ತೆಯ ಪಾದಾಚಾರಿ ಮಾರ್ಗದ ಅಭಿವೃದ್ಧಿಗಾಗಿ ಡೆಲ್ಸ್ ಯೋಜನೆಯಡಿ 8.36 ಕೋಟಿ ಹಣ ಮಂಜೂರಾಗಿದೆ. ನಾಗರಿಕರ ಹಿತದೃಷ್ಟಿಯಿಂದ ಪಾದಾಚಾರಿ ಮಾರ್ಗವನ್ನು ಮಾತ್ರ ಅಭಿವೃದ್ಧಿಗೊಳಿಸಲಾಗುವುದು -ಆರ್. ಜಗನ್ನಾಥ್, ನಗರಸಭೆ ಅಧ್ಯಕ್ಷ**

## ರಾಜ್ಯದಲ್ಲೇ ಮೊಟ್ಟ ಮೊದಲ ಮೂಳೆ ದಾನ

# ಸಾವಿನಲ್ಲೂ ಸಾರ್ಥಕತೆ ಮೆರೆದ ಯುವಕ

• ಉದಯವಾಹಿನಿ ಮಡಿಕೇರಿ

ಕರ್ನಾಟಕ ರಾಜ್ಯದ ಆರೋಗ್ಯ ಕ್ಷೇತ್ರದಲ್ಲೇ ಮೊಟ್ಟ ಮೊದಲ ಬಾರಿಗೆ ಮೃತದೇಹದ ಮೂಳೆ ದಾನ ಮಾಡಲಾಗಿದೆ. ಸೋಮವಾರಪೇಟೆಯ ಜಂಬೂರು ಗ್ರಾಮದ ನಿವಾಸಿ ಈಶ್ವರ ಎನ್. (32) ಎಂಬವರೇ ಸಾವಿನಲ್ಲೂ ಸಾರ್ಥಕತೆ ಮೆರೆದವರು.

ಇದೇ ಡಿ.21 ರಂದು ರಾತ್ರಿ ತಾವು ಚಲಾಯಿಸುತ್ತಿದ್ದ ಪಿಕ್ ಅಪ್ ವಾಹನ ಗರಗಂದೂರು ಬಳಿ ನಿಯಂತ್ರಣ ಕಳೆದುಕೊಂಡು ಮಗುಚಿಕೊಂಡ ಪರಿಣಾಮ ಈಶ್ವರ್ ಎನ್. ಅವರ ತಲೆಯ ಭಾಗಕ್ಕೆ ಗಂಭೀರ ಗಾಯವಾಗಿತ್ತು. ಚಿಂತಾಜನಕ ಸ್ಥಿತಿಯಲ್ಲಿದ್ದ ಅವರನ್ನು ಮಂಗಳೂರಿನ ನಿಟ್ಟೆ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು.

ಈಶ್ವರ ಅವರು ಗಂಭೀರ ಸ್ಥಿತಿಯಲ್ಲಿದ್ದ ವಿಚಾರವನ್ನು ವೈದ್ಯರು ಅವರ ಸಹೋದರಿ ಸೌಮ್ಯ ಬಳಿ ತಿಳಿಸಿದಾಗ ಸ್ವಯಂಪ್ರೇರಿತರಾಗಿ ಅಂಗಾಂಗ ದಾನದ ಕುರಿತು ಆಸಕ್ತಿ ತೋರಿದರು. ಕಸಿ ಸಂಯೋಜಕಿ ಅಕ್ಷತಾ ಶೆಟ್ಟಿ ಹಾಗೂ ನರಶಸ್ತ್ರ ಚಿಕಿತ್ಸಕರು ಸೇರಿದಂತೆ ವೈದ್ಯಕೀಯ ತಂಡ


ಉದಯವಾಹಿನಿ ಚಿತ್ರ

**ಕ್ಯಾನ್ಸರ್ ರೋಗಿಗಳಿಗೆ ಹೊಸ ಭರವಸೆ**

ಸಮಾಲೋಚನೆ ನಡೆಸಿತು. ನಂತರ ಸಹೋದರಿ ಸೌಮ್ಯ ಹಾಗೂ ಕುಟುಂಬ ವರ್ಗ ಈಶ್ವರ ಅವರ ಮೂಳೆಗಳನ್ನು ಕಸಿ ಮಾಡಲು ದಾನ ನೀಡುವುದಾಗಿ ಒಪ್ಪಿಕೊಂಡರು.

ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ದಾನದ ಪ್ರಯೋಜನಗಳು ಮತ್ತು ಸ್ವೀಕರಿಸುವವರ ಮೇಲೆ ಅದು ಬೀರಬಹುದಾದ ಪ್ರಭಾವವನ್ನು ಕುಟುಂಬ ಅರ್ಥಮಾಡಿಕೊಂಡಿದೆ ಎಂದು ವೈದ್ಯರ ತಂಡ ಖಚಿತ ಪಡಿಸಿಕೊಂಡಿತು. ಇದು ಮೆಡಿಕೋ-ಲೀಗಲ್ ಪ್ರಕರಣವಾಗಿರುವುದರಿಂದ, ದಾನ ನೀಡುವ ಮೊದಲು ಪೊಲೀಸರು ಮತ್ತು ಈಶ್ವರ ಅವರ ಹತ್ತಿರದ ಸಂಬಂಧಿಕರಿಂದ ಅಗತ್ಯ ಅನುಮತಿ ಪಡೆಯಲಾಯಿತು.

ಪ್ರಯಾಣ ಆರ್ಥೋಪೆಡಿಕ್ಸ್ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ.ವಿಕ್ರಂ ಶೆಟ್ಟಿ ನೇತೃತ್ವದಲ್ಲಿ ಪ್ರೊ.ಎಂ.ಶಾಂತರಾಮ ಶೆಟ್ಟಿ ಹಾಗೂ ಶಸ್ತ್ರಚಿಕಿತ್ಸಾ ತಂಡ ಮೂಳೆಯನ್ನು ಬೇರ್ಪಡಿಸಿತು.

**ಮೃತದೇಹದ ಮೂಳೆಗಳ ಸ್ಥಳದಲ್ಲಿ ಪ್ಲಾಸ್ಟಿಕ್ ಮೂಳೆಗಳನ್ನು ಸೇರಿಸಲಾಯಿತು. ಈ ಮೂಳೆ ದಾನದಿಂದ ಭವಿಷ್ಯದಲ್ಲಿ ಕ್ಯಾನ್ಸರ್ ಪೀಡಿತ ಆರು ಮಕ್ಕಳ ಕೈ- ಕಾಲುಗಳನ್ನು ಸಮರ್ಥವಾಗಿ ಉಳಿಸಬಹುದು. ಮೂಳೆಗಳನ್ನು ಅಂಗ ಉಳಿಸುವ ಶಸ್ತ್ರಚಿಕಿತ್ಸೆಗಳಿಗೆ ಬಳಸಲಾಗುತ್ತದೆ. ಯುವ ಕ್ಯಾನ್ಸರ್ ರೋಗಿಗಳಿಗೆ ಹೊಸ ಭರವಸೆಯನ್ನು ನೀಡುತ್ತದೆ -ಡಾ.ವರುಣ್ ಶೆಟ್ಟಿ**

# ಕೃಷಿ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳಿಂದ ಮುಕ್ತಿಗೊಳಿಸಿ

• ಉದಯವಾಹಿನಿ, ಮುಳಬಾಗಿಲು

ಕೃಷಿ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಯಿಂದ ವಿಮುಕ್ತಿಗೊಳಿಸದೇ ಹೋದರೆ ಆಹಾರಕ್ಕಾಗಿಯೇ 3ನೇ ಮಹಾಯುದ್ಧ ಪ್ರಾರಂಭವಾಗುವ ಕಾಲ ದೂರವಿಲ್ಲವೆಂದು ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಸರ್ಕಾರಗಳಿಗೆ ಎಚ್ಚರಿಕೆಯ ಜೊತೆಗೆ ಸಲಹೆ ನೀಡಿದರು.

ತಾಲ್ಲೂಕು ಕಚೇರಿ ಆವರಣದಲ್ಲಿ ಎನ್.ಡಿ.ಸುಂದರೇಶ್ ನೆನಪಿನ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ,ಕೃಷಿ ಕ್ಷೇತ್ರ ದಿನೇದಿನೇ ಅವನತಿಯತ್ತ ಸಾಗುತ್ತಿದೆ. ಕೃಷಿ ಮಾಡುತ್ತಿರುವವರ ಸಂಖ್ಯೆ ಕ್ಷೀಣಿಸುತ್ತಿದೆ. ದುಬಾರಿಯಾಗುತ್ತಿರುವ ಕೃಷಿ ಬಂಡವಾಳ, ನಿಯಂತ್ರಣಕ್ಕೆ ಬಾರದ ರೋಗಗಳು, ರೈತರನ್ನು ಸುಡುತ್ತಿರುವ ನಕಲಿ ಬಿತ್ತನೆ ಬೀಜ, ಕೀಟನಾಶಕಗಳ ನಿಯಂತ್ರಣವಿಲ್ಲದೆ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದ ಸರ್ಕಾರಗಳ ರೈತ ವಿರೋಧಿ ಧೋರಣೆಗೆ ರೈತಕುಲವು ದಂಗೆ ಏಳುವ ಕಾಲ ದೂರವಿಲ್ಲವೆಂದು ಎಚ್ಚರಿಕೆ ನೀಡಿದರು.

ತಾಲ್ಲೂಕಿನಾದ್ಯಂತ ಅಕ್ರಮ ಸಾಗುವಳಿ ತನಿಖೆ ಮಾಡಿ ಇಲ್ಲವೇ ನೀಡಿರುವ ಸಾಗುವಳಿ ಚೀಟಿಗೆ ಖಾತೆ ಮಾಡಬೇಕು. ಮತ್ತು ಖಾತೆ ಹೆಸರಿನಲ್ಲಿ ಲಕ್ಷಲಕ್ಷ ಲಂಚ ಕೇಳುವ ಕಂದಾಯ ಅಧಿಕಾರಿಗಳ ವಿರುದ್ಧ ಕ್ರಮಕೈಗೊಂಡು ಒತ್ತುವರಿಯಾಗಿರುವ ಕೆರೆ, ರಾಜಕಾಲುವೆ, ಗೋಮಾಳ, ಗುಂಡುತೋಪು ತೆರವುಗೊಳಿಸಿ ಭೂಮಿಯಿಲ್ಲದ ಬಡವರಿಗೆ ಹಂಚಬೇಕು. ಇಲ್ಲವೇ ಜಾನುವಾರುಗಳಿಗೆ ಮೀಸಲಿಡುವ ಜೊತೆಗೆ ಪ್ರತಿ ಹಳ್ಳಿಯಲ್ಲೂ ಜಾನುವಾರುಗಳಿಗೆ ಗೋಮಾಳ ಮೀಸಲಿಡುವವರೆಗೂ ದರಖಾಸ್ತು ಸಮಿತಿ ಭೂ ಮಂಜೂರಾತಿ ಮಾಡಬಾರದೆಂದು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

ಟಿ.ಕುರುಬರಹಳ್ಳಿ ಕುರಿಗಾಹಿಗಳಿಗೆ ಮೀಸಲಿಟ್ಟಿರುವ ಸರ್ವೇ ನಂಬರ್ 36, 37ರಲ್ಲಿನ 65 ಎಕರೆ ಗೋಮಾಳ ಜಮೀನಿನಲ್ಲಿ ಯಾವುದೇ ದರಖಾಸ್ತು ಕಮಿಟಿ ಮೂಲಕ ಮಂಜೂರು ಮಾಡದೆ ಕುರಿಗಾಹಿಗಳ ಹಿತಕಾಯಬೇಕೆಂದು ಆಗ್ರಹಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಗೀತಾ ಅವರು, ರೈತರಿಗೆ ಯಾವುದೇ ತೊಂದರೆಯಾಗದ ರೀತಿ ಬೆಳೆ ನಷ್ಟ ಪರಿಹಾರ ವಿತರಣೆ ಮಾಡುವ ಜೊತೆಗೆ ಒತ್ತುವರಿಯಾಗಿರುವ ಸರ್ಕಾರಿ ಆಸ್ತಿಗಳನ್ನು ಉಳಿಸಿ ಭೂಮಿಯಿಲ್ಲದ ರೈತರಿಗೆ ಅಥವಾ ಜಾನುವಾರುಗಳಿಗೆ ಮೀಸಲಿಡುವ ಭರವಸೆ ನೀಡಿದರು.

# ಕೈವಾರದಲ್ಲಿ ಗಣಿತ ತಜ್ಞ ಶ್ರೀನಿವಾಸ ರಾಮಾನುಜನ್ ಜಯಂತಿ

• ಉದಯವಾಹಿನಿ ಚಿಂತಾಮಣಿ

ತಾಲ್ಲೂಕಿನ ಕೈವಾರದ ಅಂಬೇಡ್ಕರ್ ವಿದ್ಯಾಸಂಸ್ಥೆಯಲ್ಲಿ ಗಣಿತ ತಜ್ಞ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಗಣಿತ ದಿನವನ್ನು ಸೋಮವಾರ ಆಚರಿಸಲಾಯಿತು. ಸಂಸ್ಥೆ ಅಧ್ಯಕ್ಷೆ ಎಸ್.ಎಂ ರೋಜ ಮಾತನಾಡಿ, ಗಣಿತದ ವಿಚಾರದಲ್ಲಿ ಭಾರತವು ವಿಶ್ವಕ್ಕೆ ದೊಡ್ಡ ಕೊಡುಗೆ ನೀಡಿದೆ. ಕಠಿಣ ಪರಿಶ್ರಮ, ನಿರಂತರ ಅಭ್ಯಾಸ ಮಾಡಿದರೆ ಗಣಿತ ಸುಲಭವಾಗಲಿದೆ. ಹೆಚ್ಚು ಗಣಿತ ಅಭ್ಯಾಸ ಮಾಡಿ ಕಲಿಕೆಯನ್ನು ಸುಲಭ ಮಾಡಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೆಂಗಳೂರು ಗ್ರಾಮಾಂತರ ಗಣಿತ ಶಿಕ್ಷಕಿ ಯೋಗಮ್ಮ ಮಲ್ಲಾಪುರ ಮಾತನಾಡಿ, ಗಣಿತ ಎಂದರೆ ಕಬ್ಬಿಣದ ಕಡಲೆ ಅಲ್ಲ ಗಣಿತ ಸೂತ್ರಗಳು, ಮಗ್ಗಿಗಳನ್ನು ನಿಯಮಿತವಾಗಿ ಅಭ್ಯಾಸ ಮಾಡಿದರೆ ಗಣಿತ ಸುಲಿದ ಬಾಳೆಹಣ್ಣಿನಷ್ಟೇ ಸುಲಭ. ಮುಂದುವರೆದ ಭಿನ್ನರಾಶಿ, ಸಂಖ್ಯೆ ಸಿದ್ಧಾಂತ, ಅನಂತ್ ಸರಣಿಗಳ ಸಾಧನೆ ತಿಳಿಸಿದರು. ಮುಖ್ಯ ಶಿಕ್ಷಕ ಸುರೇಶ್ ಮಾತನಾಡಿ, ಶ್ರೀನಿವಾಸ


ಉದಯವಾಹಿನಿ ಚಿತ್ರ

ರಾಮಾನುಜನ್ ಅವರ 125ನೇ ಜಯಂತಿಯಾದ 2012ರಲ್ಲಿ ದೇಶದಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆ ಆರಂಭಿಸಲಾಯಿತು. ರಾಮಾನುಜನ್ ಅವರ ಜೀವನ ಮತ್ತು ಸಾಧನೆಗಳನ್ನು ಹೇಳಿದರು.

ಗಣಿತ ದಿನದ ಕುರಿತು ಮಕ್ಕಳಿಗೆ ಪ್ರಬಂಧ ಮತ್ತು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು ಕನ್ನಡ ಮಾಧ್ಯಮದಲ್ಲಿ ಹರ್ಷಿಣಿ ಪ್ರಥಮ, ಹಂಸಿಕ ದ್ವಿತೀಯ ಪ್ರೇಮ ತೃತಿಯ ಸ್ಥಾನ ಪಡೆದರು. ಆಂಗ್ಲ ಮಾಧ್ಯಮದಲ್ಲಿ ಬಿ.ಬಿ.ಫಾತಿಮಾ ಪ್ರಥಮ, ಪ್ರೀತಿ ದ್ವಿತೀಯ, ತನುಶ್ರೀ ತೃತೀಯ ಸ್ಥಾನ ಪಡೆದರು. ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

# ತಡವಾಗಿ ಬಂದ ಅಧಿಕಾರಿಗೆ ಹಾರ ಹಾಕಿದ ಶಾಸಕ

• ಉದಯವಾಹಿನಿ, ಬಿಡದಿ

ಬೈರಮಂಗಲ ಗ್ರಾಮದಲ್ಲಿ ಸೋಮವಾರ ಜನಸ್ಪಂದನ ಶಾಸಕ ಎಚ್.ಸಿ. ಬಾಲಕೃಷ್ಣ ನೇತೃತ್ವದಲ್ಲಿ ನಡೆಯಿತು. ಸಭೆಗೆ ಸಮಯಕ್ಕೆ ಬಾರದ ಆಹಾರ ನಿರೀಕ್ಷಕರಿಗೆ ಶಾಸಕರು ವೇದಿಕೆಯಲ್ಲಿ ಹೂವಿನ ಹಾರ ಹಾಕಿ, 'ನನಗೆ ಕೆಲಸವಿಲ್ಲದೇ ಸಭೆ ಮಾಡುತ್ತಿಲ್ಲ. ಸಭೆಗೆ ಸಮಯಕ್ಕೆ ಸರಿಯಾಗಿ ಬರುವುದು ಕಡ್ಡಾಯ' ಎಂದು ಎಚ್ಚರಿಕೆ ನೀಡಿದರು. 'ಗ್ರಾಮ ಸಭೆ ಕೇವಲ ನಿರಂತರ ಸಭೆಗಳಾಗದೆ ಜನರಲ್ಲಿ ವಿಶ್ವಾಸ ಮತ್ತು ಗೌರವ ಮೂಡಿಸಬೇಕು. ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ನಿಷ್ಠೆ ಮತ್ತು ಸಮರ್ಪಣೆಯಿಂದ ಮುನ್ನಡೆಯಬೇಕು' ಎಂದು ಹೇಳಿದರು.

ಸಭೆಯಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಜನಸಂಪರ್ಕ ಸಭೆ ಮಾಡುವ ಉದ್ದೇಶ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆತಂದು ಸ್ಥಳೀಯ ಸಮಸ್ಯೆ ಆಲಿಸಿ ಸಾಧ್ಯವಾದಲ್ಲಿ ಸ್ಥಳದಲ್ಲಿಯೇ ಪರಿಹರಿಸುವುದು' ಎಂದರು. ಶಾಸಕರು ತಹಶೀಲ್ದಾರ್, ತಾ.ಪಂ ಇಒಗಳಿಗೆ ಗ್ರಾಮೀಣ ಸಮಸ್ಯೆಗಳಿಗೆ ಗಮನಹರಿಸಲು ಸೂಚಿಸಿದರು. 'ನಿಮ್ಮ ಮಟ್ಟದಲ್ಲಿ ಗ್ರಾಮಸಭೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಹುಡುಕಿ. ಎಲ್ಲಾ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲೇ ಬಗೆಹರಿಸಲಾಗುದು' ಎಂದರು.


ಉದಯವಾಹಿನಿ ಚಿತ್ರ

ಕೊಡಿಯಾಲ ಕರೇನಹಳ್ಳಿ ಗ್ರಾಮದಲ್ಲಿ ನಕ್ಷೆಯಲ್ಲಿರುವ ರಸ್ತೆ ಅಕ್ರಮವಾಗಿ ಒಡಾವಣೆ ಆಗಿ ಮಾರ್ಪಟ್ಟಿರುವುದಾಗಿ ಸಾರ್ವಜನಿಕರು ದೂರು ನೀಡಿದರು. ಈ ಕುರಿತು ಶಾಸಕರು ರಾಜಸ್ವ ನಿರೀಕ್ಷಕರನ್ನು ತರಾಟೆಗೆ ತೆಗೆದುಕೊಂಡರು. ಅನುಮತಿ ನೀಡಿರುವವರು ಯಾರು' ಎಂದು ಪ್ರಶ್ನಿಸಿದರು. ಅಕ್ರಮ ಒಡಾವಣೆಗಳ ಕೆಲಸ ತಕ್ಷಣವೇ ನಿಲ್ಲಿಸಬೇಕೆಂದು ತಾಕೀತು ಮಾಡಿದರು.

# ಕೊಡಗಿನಲ್ಲಿದೆ ಶತಮಾನಗಳ ಇತಿಹಾಸ ಹೊಂದಿರುವ ವಿಶೇಷ ಚರ್ಚ್

## ಚರ್ಚ್ ನಿರ್ಮಾಣದ ವಿನ್ಯಾಸದಿಂದ ಆರಂಭವಾಗಿ ಹಬ್ಬದ ಆಚರಣೆವರೆಗೂ ಹಿಂದೂ ಸಂಪ್ರದಾಯಕ್ಕೆ ಹತ್ತಿರವಾಗಿದೆ

• ಉದಯವಾಹಿನಿ ಮಡಿಕೇರಿ

ಕೊಡಗಿನಲ್ಲಿ ಶತಮಾನಗಳ ಇತಿಹಾಸ ಹೊಂದಿ ಭಾವೈಕ್ಯತೆ ಸಾರುತ್ತಾ ನಿಂತಿರುವ ವೀರಾಜಪೇಟೆಯ ಸಂತ ಅನ್ನಮ್ಮ ಚರ್ಚ್ ಹಲವು ವಿಶೇಷತೆಗಳೊಂದಿಗೆ ಗಮನಸೆಳೆಯುತ್ತದೆ.

ಚರ್ಚ್ ನಿರ್ಮಾಣದ ವಿನ್ಯಾಸದಿಂದ ಆರಂಭವಾಗಿ ಹಬ್ಬದ ಆಚರಣೆವರೆಗೂ ಹಿಂದೂ ಸಂಪ್ರದಾಯಕ್ಕೆ ಹತ್ತಿರವಾಗಿರುವುದು ಇಲ್ಲಿ ಎದ್ದು ಕಾಣಿಸುತ್ತದೆ. ಹಾಗಾದರೆ ಸಂತ ಅನ್ನಮ್ಮ ಚರ್ಚ್ ಏಕೆ ವಿಭಿನ್ನ ಮತ್ತು ವಿಶಿಷ್ಟ ಎಂಬುದನ್ನು ನೋಡುತ್ತಾ ಹೋದರೆ ಹತ್ತಾರು ವಿಚಾರಗಳು ನಮ್ಮ ಮುಂದೆ ಬರುತ್ತವೆ.

**ಎಲ್ಲರನ್ನು ಆಕರ್ಷಿಸುವ ಸಂತ ಅನ್ನಮ್ಮ ಚರ್ಚ್**

ವೀರಾಜಪೇಟೆ ಪಟ್ಟಣದಲ್ಲಿ ಗಗನಚುಂಬಿಯಾಗಿ ಎಲ್ಲರನ್ನು ಆಕರ್ಷಿಸುವ ಸಂತ ಅನ್ನಮ್ಮ ಚರ್ಚ್ ನಿರ್ಮಾಣದ ಹಿಂದೆ ಒಂದು ರೋಚಕ ಕತೆ ಅಡಗಿದೆ. ಅದಕ್ಕಿಂತ ಹೆಚ್ಚಾಗಿ ಈ ಚರ್ಚ್ ನಿರ್ಮಾಣಕ್ಕೆ ಸಹಾಯ ಮಾಡಿದ್ದೇ ಕೊಡಗಿನ ಅಂದಿನ ಮಹಾರಾಜ ದೊಡ್ಡವೀರರಾಜೇಂದ್ರ, ಎನ್ನುವುದು ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲವೇನೋ? ಇತಿಹಾಸದ ಪುಟಗಳನ್ನು ಕೆದಕುತ್ತಾ ಹೋದರೆ ಚರ್ಚ್ ಯಾವಾಗ ಮತ್ತು ಹೇಗೆ ನಿರ್ಮಾಣವಾಯಿತು ಎಂಬುದಕ್ಕೆ ಒಂದಷ್ಟು ಮಾಹಿತಿಗಳು ಲಭ್ಯವಾಗುತ್ತವೆ.

1790-92ರ ಮೂರನೇ ಆಂಗ್ಲೋ-ಮೈಸೂರು ಯುದ್ಧ ಕಾಲದಲ್ಲಿ ಟಿಪ್ಪು ಸುಲ್ತಾನ್ ಸಾವಿರಾರು ಕ್ರೈಸ್ತರನ್ನು ಶ್ರೀರಂಗಪಟ್ಟಣದಲ್ಲಿ ಬಂಧಿಸಿಟ್ಟಿರುತ್ತಾನೆ. ಆತನ ಬಂಧನದಿಂದ ತಪ್ಪಿಸಿಕೊಂಡು ಸುಮಾರು ಏಳುನೂರಕ್ಕೂ ಹೆಚ್ಚು ಕ್ರೈಸ್ತರು ದಿಕ್ಕುಪಾಲಾಗಿ ಕೊಡಗಿನತ್ತ ಬರುತ್ತಾರೆ. ಹೀಗೆ ಬಂದ ಕ್ರೈಸ್ತರಿಗೆ ಆಗಿನ ದೊಡ್ಡವೀರರಾಜೇಂದ್ರ, ಆಶ್ರಯ ನೀಡಿ, ತಾವು ಹೊಸದಾಗಿ ನಿರ್ಮಿಸಿದ್ದ ವೀರರಾಜೇಂದ್ರಪೇಟೆಯ ಸುತ್ತಮುತ್ತಲ ಹಳ್ಳಿಗಳಲ್ಲಿ ನೆಲೆಸುವಂತೆ ವ್ಯವಸ್ಥೆ ಮಾಡುತ್ತಾರೆ.

ಇದರ ಜೊತೆಗೆ ಅವರ ಮತ ಧರ್ಮವನ್ನು ಪಾಲಿಸಲು ಅನುಕೂಲವಾಗುವಂತೆ ಗೋವಾದಿಂದ ಜುವಾಂವ್ ಡಿ'ಕೋಸ್ಟ ಎಂಬ ಧರ್ಮಗುರುವನ್ನು ಕರೆಸಿ 1792ರ ನವೆಂಬರ್ 10ರಂದು ಸಂತ ಅನ್ನಮ್ಮ


ಉದಯವಾಹಿನಿ ಚಿತ್ರ

ಚರ್ಚ್ ನ್ನು ಕಟ್ಟಿಸಲು ವ್ಯವಸ್ಥೆ ಮಾಡಿಸುತ್ತಾರೆ. ಸದ್ಯ ಈ ಚರ್ಚ್ 232 ವರ್ಷಗಳನ್ನು ಸವೆಸಿದೆ. ಇನ್ನು ಈ ಚರ್ಚ್ ಗೆ ಅವತ್ತಿನ ಕಾಲದಲ್ಲಿ ದೊರೆ ದೊಡ್ಡವೀರರಾಜೇಂದ್ರ, 'ವಿ' ಸಂಕೇತದಿಂದ ಕೂಡಿದ ಎರಡು ದೀಪಕಂಬ (ಕುತ್ತುಂಬೋಳಿಚ್ಚ) ಗಳನ್ನು ನೀಡಿರುವುದು ಗಮನಾರ್ಹವಾಗಿದೆ.

ಚರ್ಚ್ ಪ್ರಾಚೀನ- ಅರ್ವಾಚೀನ ಶೈಲಿಯ ವಾಸ್ತುಶಿಲ್ಪವನ್ನು ಹೊಂದಿದ್ದು, ಭವ್ಯ ಗಾಥಿಕ್ ಶೈಲಿಯಲ್ಲಿ ಶೃಂಗ ತ್ರಿಕೋನ ಬಾಗು ಬಾಹುಗಳ ಮುಖಗೋಪುರವನ್ನು ಹೊಂದಿದೆ. ದೀರ್ಘ ವೃತ್ತಾಕಾರದ ಪ್ರವೇಶ ದ್ವಾರಗಳಿದ್ದು ಗೋಪುರವು ಸುಮಾರು 150 ಅಡಿಗಳಷ್ಟು ಎತ್ತರವಿದೆ. ಇದರ ಮೇಲೆ ಪಂಚಲೋಹದ ಆರು ಅಡಿ ಎತ್ತರದ ಶಿಲುಬೆಯನ್ನಿಡಲಾಗಿದೆ. ಒಳ ಸಭಾಂಗಣದ ವಿನ್ಯಾಸ, ಬಲಿಪೀಠ, ಗೂಡು, ಮೂಲ ಅಂಕಣ, ಸಭಾ ಸ್ತಂಭಗಳು, ಗುರು ಸಮಾಧಿ ನೆಲೆ ಪರಿವರ ಶಿಲ್ಪ, ಪ್ರದಕ್ಷಿಣೆ ಸಭಾಕಾರವಿದ್ದು ಇಲ್ಲಿನ ಗುಡಿಯು ಹಿಂದೂ ದೇವಾಲಯದ ಗರ್ಭಾಂಕಣ, ನವರಂಗ ಮುಖಮಂಟಪ, ಗದ್ದುಗೆ ನೆಲೆಗೋಪುರಗಳನ್ನು ಹೋಲುವಂತಿದೆ. ಚರ್ಚ್‌ನ ಸಮೀಪದಲ್ಲಿ ಲೂರ್ದ್ ಮಾತೆಯ ಸ್ಮರಣಾರ್ಥವಾಗಿ ನಿರ್ಮಿಸಲಾದ ಫ್ರಾನ್ಸ್‌ನ ಲೂರ್ದ್ ಮಾದರಿಯ ಸುಂದರ ಕೃತ್ರಿಮ ಗವಿಯಿದೆ.

ಇಷ್ಟೇ ಅಲ್ಲದೆ ಸಾಲ್ವದೋರ್ ಪಿಂಟೋ ಹಾಗೂ ದೋನಾಥ್ ಲೋಬೋರವರ ಜ್ಞಾಪಕಾರ್ಥವಾಗಿ ಪ್ಯಾರೀಸ್‌ನಿಂದ ತರಿಸಲ್ಪಟ್ಟ ಇಂಪಾದ ನಿನಾದವನ್ನು ಹೊರಹೊಮ್ಮಿಸುವ ಬೃಹದಾಕಾರದ ಎರಡು ಗಂಟೆಗಳು ಇಲ್ಲಿವೆ.

**ನಿಂತು ಪೂಜಿಸುವ ವ್ಯವಸ್ಥೆ**

**ಕೊಡಗಿನ ಹಬ್ಬಗಳಾದ ಕೈಲ್ ಪೊಳ್ ಆಚರಣೆಯ ಒಂಬತ್ತು ದಿನಗಳ ಕಾಲ ಏಸುವಿನ ಪ್ರಾರ್ಥನಾ ವಿಧಿಗಳ ಮೂಲಕ ನಡೆದರೆ, ಹುತ್ತರಿ ಹಬ್ಬದ ಸಂದರ್ಭ ಆರ್ಜಿ ಗ್ರಾಮದಲ್ಲಿರುವ ಗದ್ದೆಯಿಂದ ಕದಿರು ತಂದು ಬಲಿ ಪೀಠದ ಮೇಲಿಟ್ಟು ಕ್ರಿಸ್ತ ಜಪ ಮಾಡಿ ಜನರಿಗೆ ಹಂಚಲಾಗುತ್ತದೆ. ಜೊತೆಗೆ ಅಕ್ಕಿ ಕಾಳಿನ ಪಾಯಸ ಮಾಡುವ ಪದ್ಧತಿಯೂ ಇದೆ. ಚರ್ಚ್ ನಲ್ಲಿ ಆಂಗ್ಲ ಶೈಲಿಯ ಶೂಸ್ ಹಾಕಿ ಪೂಜೆಗೆ ನಿಲ್ಲುವ ಬದಲು ಬರಿಗಾಲಿನಲ್ಲಿ ನಿಂತು ಪೂಜಿಸುವ ವ್ಯವಸ್ಥೆಯಿದೆ.**

**ಈ ಗಂಟೆಗಳನ್ನು ಚರ್ಚ್‌ನ ಗೋಪುರದಲ್ಲಿ ಸುಮಾರು ನೂರು ಅಡಿಗಳಷ್ಟು ಎತ್ತರದಲ್ಲಿ ಅಳವಡಿಸಲಾಗಿದೆ. ಪ್ರತಿವರ್ಷ ಕ್ರಿಸ್‌ಮಸ್ ಹಬ್ಬವನ್ನು ಇಲ್ಲಿ ಅದ್ಧೂರಿಯಾಗಿ ಆಚರಿಸಲಾಗುತ್ತದೆ. ಉಳಿದಂತೆ ಫೆಬ್ರವರಿ ತಿಂಗಳಲ್ಲಿ ಸಂತ ಅನ್ನಮ್ಮ ಕ್ಯಾಂಡಲ್ ಫೀಸ್ಟ್ ಹಬ್ಬವನ್ನು ನಡೆಸುತ್ತಾರೆ. ಈ ಸಂದರ್ಭ ಎಲ್ಲಾ ಜನಾಂಗದವರು ಇಲ್ಲಿ ನೆರೆಯುವುದು ವಿಶೇಷ.**



# ಮಿನಿ ನ್ಯೂಸ್

## ಡೋನ್ ಪ್ರತಾಪ್ ಜೈಲಿನಿಂದ ಬಿಡುಗಡೆ

• ಉದಯವಾಹಿನಿ ತುಮಕೂರು

ಸೋಡಿಯಂ ಬಳಸಿ ಕೃಷಿ ಹೊಂಡದಲ್ಲಿ ಸ್ಫೋಟಿಸಿದ್ದಂತ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದಂತ ಡೋನ್ ಪ್ರತಾಪ್ ಜೈಲಿ ನಿಂದ ಬಿಡುಗಡೆಯಾಗಿದ್ದಾರೆ. ಸಿನಿಮಾ ವ್ಯವಹಾರ ಕರ್ನಾಟಕ ತುಮಕೂರು ಜಿಲ್ಲೆಯ ಮಧುಗಿರಿ ಉಪಕಾರಾಗೃಹದಲ್ಲಿ ಡೋನ್ ಪ್ರತಾಪ್ ಅವರನ್ನು ಇರಿಸಲಾಗಿತ್ತು. ನಿನ್ನೆ ಅವರಿಗೆ ಕೋರ್ಟ್ ಜಾಮೀನು ನೀಡಿತ್ತು. ಕೋರ್ಟ್ ಜಾಮೀನಿನ ನಂತ್ರ ಜಾಮೀನು ಷರತ್ತುಗಳನ್ನು ಪೂರೈಸಿದ ನಂತ್ರ, ಇದೀಗ ಅವರನ್ನು ಜೈಲಿನಿಂದ ಬಿಡುಗಡೆ ಮಾಡಿರುವುದಾಗಿ ತಿಳಿದು ಬಂದಿದೆ. ಕೃಷಿ ಹೊಂಡದಲ್ಲಿ ರಾಸಾಯನಿಕ ಬಳಸಿ ಸ್ಫೋಟಿಸಿದ್ದಂತ ವಿಡಿಯೋವನ್ನು ಸೋಷಿಯಲ್ ಮೀಡಿಯಾದಲ್ಲಿ ಡೋನ್ ಪ್ರತಾಪ್ ಹಂಚಿಕೊಂಡಿದ್ದರು. ಸೋಡಿಯಂ ಮೆಟಲ್ ಬಳಸಿ ಸ್ಫೋಟಗೊಳಿಸಿದ್ದಂತ ವಿಡಿಯೋ ವೈರಲ್ ಆಗಿತ್ತು. ಜೊತೆಗೆ ಕೃಷಿ ಹೊಂಡದಲ್ಲಿ ರಾಸಾಯನಿಕ ಬಳಸಿ ಸ್ಫೋಟಿಸಿದ್ದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಈ ಸಂಬಂಧ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿ, ಡೋನ್ ಪ್ರತಾಪ್ ಬಂಧಿಸಿ ಜೈಲಿಗಟ್ಟಿದ್ದರು.

## ಪ್ರತ್ಯೇಕ ಅಗ್ನಿ ಅವಘಡ: ಲಕ್ಷಾಂತರ ರೂ. ನಷ್ಟ

• ಉದಯವಾಹಿನಿ ತುರುವೇಕೆರೆ

ತಾಲ್ಲೂಕಿನ ಬಸವನಹಳ್ಳಿ ಮತ್ತು ತಾವರೇಕೆರೆಯಲ್ಲಿ ಎರಡು ಪ್ರತ್ಯೇಕ ಅಗ್ನಿ ಅವಘಡ ಉಂಟಾಗಿ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ತಾಲ್ಲೂಕಿನ ಸಾರಿಗೆಹಳ್ಳಿ ರೈತ ರವಿಕಿರಣ್ ತಮ್ಮ ಟ್ರ್ಯಾಕ್ಟರ್‌ನಲ್ಲಿ ರಾಗಿ ಹುಲ್ಲು ತುಂಬಿಕೊಂಡು ಗ್ರಾಮಕ್ಕೆ ಸಾಗಿಸುವಾಗ ತಾಲ್ಲೂಕಿನ ಲೋಕಮ್ಮನಹಳ್ಳಿ ದೊಡ್ಡನಹಳ್ಳಿ ಮಧ್ಯದ ಬಸವನಹಳ್ಳಿ ಬಳಿ ವಿದ್ಯುತ್ ತಂತಿ ಸ್ಪರ್ಶಿಸಿ ಸುಮಾರು 40 ಹೊರೆ ರಾಗಿ ಹುಲ್ಲು, ಟ್ರ್ಯಾಕ್ಟರ್‌ನ ಟ್ರೈಲರ್ ಸುಟ್ಟು 18 ಸಾವಿರ ನಷ್ಟ ಸಂಭವಿಸಿದೆ. ತಾವರೇಕೆರೆ ಗ್ರಾಮದ ರೈತ ರಾಮಕೃಷ್ಣ ಅವರಿಗೆ ಸೇರಿದ ಕಾಯಿ ಶೆಡ್‌ಗೆ ಭಾನುವಾರ ತಡ ರಾತ್ರಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಶೆಡ್‌ನಲ್ಲಿದ್ದ 31 ಸಾವಿರ ಕೊಬ್ಬರಿ ಹಾಗು ಶೆಡ್ಡಿನಲ್ಲಿದ್ದ ಲಗೇಜ್ ವಾಹನ ಸುಟ್ಟಿದ್ದು.

ಹಲವು ಕಂಬಗಳು ಮುರಿದಿವೆ. ಸುಮಾರು 12 ಲಕ್ಷ ನಷ್ಟ ಉಂಟಾಗಿದೆ ಎಂದು ತಾಲ್ಲೂಕು ಸಹಾಯಕ ಅಗ್ನಿ ಶಾಮಕ ಠಾಣಾಧಿಕಾರಿ ಚನ್ನಾಚಾರಿ ತಿಳಿಸಿದ್ದಾರೆ. ಸಿಬ್ಬಂದಿ ರಾಹುಲ್ ದೊಂಬರ್, ರಾಜು, ತೌಸೆಫ್, ಭಗವಾನ್, ಪ್ರದೀಪ್, ಶಿವಕುಮಾರ್, ಕಿರಣ್, ಸಿರಾಜ್ ಮತ್ತು ಗಂಗಾಧರಯ್ಯ, ಅಗ್ನಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದರು.

## ಕೊಳವೆ ಬಾವಿ ಕಾರ್ಯಕ್ಕೆ ಚಾಲನೆ

• ಉದಯವಾಹಿನಿ ಟೇಕಲ್

ಮಾಲೂರು ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಪ.ಜಾ ಮತ್ತು ಪ.ಪಂ ಜನಾಂಗದ 123 ಫಲಾನುಭವಿಗಳು ಸರ್ಕಾರದ ಉಚಿತ ಕೊಳವೆ ಬಾವಿ ಯೋಜನೆಗೆ ಅರ್ಹರಾಗಿದ್ದಾರೆ ಎಂದು ಶಾಸಕ ಕೆ.ವೈ.ನಂಜೇಗೌಡ ತಿಳಿಸಿದರು. ಟೇಕಲ್ ಕೊಂಡಶೆಟ್ಟಿಹಳ್ಳಿ ಗ್ರಾ.ಪಂ. ಕೊಂಡಶೆಟ್ಟಿಹಳ್ಳಿ ಗ್ರಾಮದಲ್ಲಿ ರೈತನೊಬ್ಬನ ಜಮೀನಿನಲ್ಲಿ ಪ್ರಥಮ ಕೊಳವೆ ಬಾವಿ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿರು.

ಮಾಲೂರು ತಾಲ್ಲೂಕಿನ 123 ಮಂದಿ ಫಲಾನುಭವಿ ರೈತರು ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ಕೊಳವೆಬಾವಿಗಳ ಪ್ರಯೋಜನ ಪಡೆಯಲಿದ್ದಾರೆ. ಜೊತೆಗೆ ಅವರಿಗೆ ಪಂಪು ಮೋಟಾರು ನೀಡಲಾಗುತ್ತದೆ. ಇಂತಹ ಯೋಜನೆಗಳಿಂದ ರೈತರು ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.

## ಕಾಂಗ್ರೆಸ್ ಸಮಿತಿಯಿಂದ ರಸ್ತೆ ತಡೆ

• ಉದಯವಾಹಿನಿ ಮಾಲೂರು

ದೇಶದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಸಂವಿಧಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದೆ ಎಂದು ಕೋಲಾರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ. ಲಕ್ಷ್ಮಿನಾರಾಯಣ್ ಆರೋಪಿಸಿದರು.

ಪಟ್ಟಣದ ತಾಲ್ಲೂಕು ಕಾಂಗ್ರೆಸ್ ಸಮಿತಿ ವತಿಯಿಂದ ಅಮಿತ್ ಶಾ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ರಸ್ತೆ ತಡೆ ಹಾಗೂ ಪ್ರತಿಭಟನೆಯಲ್ಲಿ ಮಾತನಾಡಿದರು. ದೇಶದಲ್ಲಿ ಪ್ರಧಾನಿ ಮೋದಿ, ಅಮಿತ್ ಶಾ ಬಳಗ ಸಂವಿಧಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದೆ. ಸಮ ಸಮಾಜವನ್ನು ನಿರ್ಮಾಣ ಮಾಡಿಕೊಟ್ಟ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಗೌರವ ತೋರುವ ಮೂಲಕ ದೇಶದ್ರೋಹ ಎಸಗಿದ್ದಾರೆ. ಇಂತಹ ಅಂಬೇಡ್ಕರ್ ವಿರೋಧಿ ಧೋರಣೆಯ ಅಮಿತ್ ಶಾ ಅವರನ್ನು ಕೂಡಲೇ ಗಡಿಪಾರು ಮಾಡಲು ಪ್ರಧಾನಿ ನರೇಂದ್ರ ಮೋದಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

## ಜಲಕಂಠೇಶ್ವರ ಸ್ವಾಮಿಗೆ ಮಂಡಲಾಭಿಷೇಕ

• ಉದಯವಾಹಿನಿ ಕೋಲಾರ

ನಗರದ ಅಂತರಗಂಗೆ ತಪಲು, ವಿಭೂತಿಪುರ ಗ್ರಾಮದಲ್ಲಿ ನೆಲೆಸಿರುವ ಜಲಕಂಠಶ್ವರಸ್ವಾಮಿ ದೇವಾಲಯದಲ್ಲಿ ಶ್ರೀ ಜಲಕಂಠೇಶ್ವರಸ್ವಾಮಿ ಭಕ್ತ ಮಂಡಳಿ ವತಿಯಿಂದ ಶ್ರೀ ಪ್ರಸನ್ನ ಜಲಕಂಠಶ್ವರ ಪಂಚಶತ ಏಕ (50) ಲಿಂಗ ಮಂಡಲಾಭಿಷೇಕ ಮಹೋತ್ಸವವನ್ನು ಡಿ, 24 ಮತ್ತು 25 ರಂದು 2 ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

ಡಿ, 24ರ ಮಂಗಳವಾರ ರಾತ್ರಿ 7ಕ್ಕೆ ಗಂಗಾಭಾಗಿರತಿ ಪೂಜೆ, ಮಹಾಗಣಪತಿ ಪ್ರಾರ್ಥನೆ, ಜಪ ಪಾರಾಯಣಗಳು, ಕಳಶ ಸ್ಥಾಪನೆ, ಕಳಶಾರ್ಚನೆ, ಅಗ್ನಿ ಪ್ರತಿಷ್ಠೆ, ಗಣಪತಿ ಹೋಮ, ನವಗ್ರಹ ಹೋಮ, ಮೂಲ ದೇವರ ಪ್ರಧಾನ ಹೋಮ, ದಿಕ್ಪಾಲಕರ ಹೋಮ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

ಡಿ, 25ರ ಬುಧವಾರ ಬೆಳಗ್ಗೆ 6-30 ಕ್ಕೆ ಮಹಾ ಗಣಪತಿ ಪ್ರಾರ್ಥನೆ, ಸ್ವಸ್ತಿವಾಚನೆ, ಜಪ ಪಾರಾಯಣಗಳು, ಕಳಶಾರ್ಚನೆ, ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಮಂಗಳಾರತಿ ಗಣಪತಿ ಹೋಮ, ನವಗ್ರಹ ಹೋಮ, ರುದ್ರ ಹೋಮ, ಪ್ರಧಾನ ಹೋಮ, ಕಳಾ ಹೋಮ, ಶಾಂತಿ ಹೋಮ, ಪ್ರಾಯಶ್ಚಿತ ಹೋಮ, ಪೂರ್ಣಾಹುತಿ, ಕಳಶ ವಿಸರ್ಜನೆ, ಲಿಂಗಗಳಿಗೆ ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅರ್ಚನೆ, ನಿವೇದನೆ, ಮಂಗಳಾರತಿ, ಮೂಲದೇವರಿಗೆ ಅರ್ಚನೆ, ನಿವೇದನೆ, ರಾಷ್ಟ್ರೋಪಚಾರ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ಭಕ್ತಾಧಿಗಳು ಸಕಾಲಕ್ಕೆ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಅರ್ಚಕ ಸೋಮಶೇಖರ ದೀಕ್ಷಿತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

ಅಂತರಾಳದಿಂದ.. EDITORIAL

# ಭೂಸ್ವಾಧೀನ ಎಂಬ ಹಗರಣ

ಪಂಜಾಬ್‌ನ ಗಡಿಯಲ್ಲಿ ನಡೆಯುತ್ತಿರುವ ರೈತ ಹೋರಾಟದ ಬಗ್ಗೆ ನಾವು ದಿನ ನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ ಅಲ್ಲಿ ನಡೆಯುತ್ತಿರುವ ಕೇಂದ್ರ ಸರಕಾರದ ದೌರ್ಜನ್ಯಗಳು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತಿವೆ. ಆದರೆ ಅಂತಹದೇ ಒಂದು ಹೋರಾಟ ಕರ್ನಾಟಕದಲ್ಲಿ ಕಳೆದ ಒಂದು ಸಾವಿರ ದಿನಗಳಿಂದ ನಡೆಯುತ್ತಿದೆ. ದಿಲ್ಲಿಯ ರೈತ ಹೋರಾಟಗಳಿಗೆ ಸ್ಪಂದಿಸುತ್ತಿರುವ ರಾಜ್ಯದ ಜನತೆ, ನಮ್ಮದೇ ರೈತರ ಹೋರಾಟಕ್ಕೆ ಮೌನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿರುವುದು ಖೇದನೀಯ. ಪಂಜಾಬ್‌ನ ಪ್ರತಿಭಟನಾ ನಿರತ ರೈತರ ಬಗ್ಗೆ ಅನುಕಂಪವನ್ನು ಸೂಚಿಸುತ್ತಿರುವ ರಾಜ್ಯದ ಕಾಂಗ್ರೆಸ್ ನಾಯಕರು, ರಾಜ್ಯದ ರೈತರ ಹೋರಾಟವನ್ನು ನಿರ್ಲಕ್ಷಿಸುತ್ತಾ ಬಂದಿರುವುದು ವಿಪರ್ಯಾಸವಾಗಿದೆ. ಕೆಐಎಡಿಬಿ ಭೂಸ್ವಾಧೀನವನ್ನು ವಿರೋಧಿಸಿ, ತಮ್ಮ ಫಲವತ್ತಾದ ಕೃಷಿ ಭೂಮಿ ಉಳಿವಿಗಾಗಿ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ ರೈತರು 4 ಎಪ್ರಿಲ್ 2022ರಿಂದ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿಗೆ 1,000 ದಿನಗಳಾಗುತ್ತಿವೆ. ಧರಣಿ ಪ್ರಾರಂಭವಾದಾಗ ರಾಜ್ಯವನ್ನು ಆಳುತ್ತಿದ್ದುದು ಬಿಜೆಪಿ ನೇತೃತ್ವದ ಸರಕಾರ ಬಿಜೆಪಿ ಅಂದು ರೈತರ ಈ ಪ್ರತಿಭಟನೆಯನ್ನು ಸಂಪೂರ್ಣ ನಿರ್ಲಕ್ಷಿಸಿತ್ತು ಮಾತ್ರವಲ್ಲ ಹೋರಾಟ ನಡೆಸುತ್ತಿರುವವರು ರೈತರೇ ಅಲ್ಲ ಎಂದು ಹೇಳಿಕೆ ನೀಡಿತ್ತು. ದೇವನಹಳ್ಳಿ ಭೂಸ್ವಾಧೀನಕ್ಕೆ ಸರಕಾರ ಬೆಂಗಳೂರಿನ ಅಭಿವೃದ್ಧಿಯನ್ನು ಮುಂದಿಟ್ಟಿದೆ. ಇದೇ ಸಂದರ್ಭದಲ್ಲಿ ಸರಕಾರದ ಕ್ರಮವನ್ನು ವಿರೋಧಿಸುವುದಕ್ಕೆ ರೈತರೂ ಸಕಾರಣಗಳನ್ನು ನೀಡಿದ್ದಾರೆ. ಈ ಭೂಸ್ವಾಧೀನದಿಂದ ರೈತರ ಮೇಲೆ ಮಾತ್ರವಲ್ಲ. ಒಟ್ಟು ಕೃಷಿ ಮತ್ತು ಅದಕ್ಕೆ ಪೂರಕವಾದ ಆರ್ಥಿಕ ವ್ಯವಹಾರಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ಅವರು ಮುಂದಿಟ್ಟಿದ್ದಾರೆ. ಅಧಿಸೂಚನೆಯ ಪ್ರಕಾರ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಗೆ ಸೇರಿದ ಪಾಳ್ಯ, ಹರಳೂರು, ಪೋಲನಹಳ್ಳಿ ಗೋಕರೆ ಬಚ್ಚೇನಹಳ್ಳಿ, ನಲ್ಲೂರು, ಮಲ್ಲೇಪುರ, ನಲ್ಲಪ್ಪನಹಳ್ಳಿ, ಚೀಮಾಚನಹಳ್ಳಿ ಮಟ್ಟಬಾರ್ಲು, ಮುದ್ದೇನಹಳ್ಳಿ, ಚನ್ನರಾಯಪಟ್ಟಣ, ಕ್ರೋತ್ರಿಯ ತೆಲ್ಲೋಹಳ್ಳಿ ಮತ್ತು ಹ್ಯಾಡಾಳ ಈ 13 ಗ್ರಾಮಗಳ, 1,777 ಎಕರೆ ಕೃಷಿಭೂಮಿ ಸ್ವಾಧೀನಕ್ಕೆ ನೋಟಿಸ್ ನೀಡಲಾಗಿದೆ. ಈ ಭೂಮಿಯಲ್ಲಿ ಸುಮಾರು 900ರಿಂದ 1000 ಟನ್ ರಾಗಿ ಮತ್ತಿತರ ಆಹಾರ ಧಾನ್ಯಗಳು, 2,000 ಟನ್ ದ್ರಾಕ್ಷಿ, 100ರಿಂದ 150 ಟನ್ ಮಾವು ಮುಂತಾದ ಹಣ್ಣಿನ ಬೆಳೆಗಳು, ಹೂವು, ತರಕಾರಿಗಳನ್ನು ರೈತರು ಬೆಳೆಯುತ್ತಿದ್ದಾರೆ. ಇವು ಇಲ್ಲಿನ ಜನಕ್ಕೆ ಆಹಾರ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸಿವೆ. ಇದೇ ಹಳ್ಳಿಗಳಲ್ಲಿ ಪ್ರತಿದಿನ 5,000ದಿಂದ 8,000 ಲೀಟರ್ ಹಾಲಿನ ಉತ್ಪಾದನೆಯಾಗುತ್ತಿದೆ ಮತ್ತು ಉತ್ತಮ ಗುಣಮಟ್ಟದ ರೇಷ್ಮೆಗೂಡು ಮತ್ತು ಬೆಂಗಳೂರು ಬ್ಲೂ ದ್ರಾಕ್ಷಿ ಉತ್ಪಾದನೆ ಕೂಡ ಇಲ್ಲಿನ ವಿಶೇಷವಾಗಿದೆ. ಕೃಷಿ ಕೌಶಲ್ಯಗಳು ಸಮಾರು 6,000 ಜನರಿಗೆ ನೇರವಾಗಿ ಉದ್ಯೋಗವನ್ನು ಒದಗಿಸಿವೆ. ಇದರಲ್ಲಿ ಬಡ ರೈತರು, ಕೃಷಿ ಕೂಲಿ ಕಾರ್ಮಿಕರು ಸೇರಿದಂತೆ ಹಲವು ಕೃಷಿ ಪೂರಕ ಕೌಶಲ್ಯ ಹೊಂದಿರುವ ಅನಕ್ಷರಸ್ಥರು, ಅತಿ ಕಡಿಮೆ ಓದಿಕೊಂಡವರೇ ಹೆಚ್ಚಾಗಿದ್ದಾರೆ. ಈ ಸ್ವಾಧೀನ ಪ್ರಕ್ರಿಯೆಯಲ್ಲಿ 387 ಕುಟುಂಬಗಳು ಸಂಪೂರ್ಣ ಭೂ ರಹಿತರಾಗಲಿದ್ದು, ಈ ಕು ಟುಂಬಗಳಿಗೆ ಸೇರಿದ 2,989 ಜನರು ಭೂ ರಹಿತರಾಗಲಿದ್ದಾರೆ. ಇಲ್ಲಿನ ಸ್ಥಳೀಯ ರೈತರ ಭರವಸೆ ಮತ್ತು ಸಾಮರ್ಥ್ಯ ಕೃಷಿಯೇ ಆಗಿದ್ದು, ಇಂದಿಗೂ ಕೂಡ ಇದೇ ಕೃಷಿಯನ್ನು ನಂಬಿಕೊಂಡು ಕನಿಷ್ಠ 6,000 ಜನ ಬದುಕುತ್ತಿದ್ದು ಕೃಷಿ ಮಾತ್ರವೇ ಎಲ್ಲರಿಗೆ ಉದ್ಯೋಗ ಒದಗಿಸುವ ಏಕಮಾತ್ರ ಭರವಸೆಯಾಗಿದೆ.ಕೈಗಾರಿಕಾ ಉದ್ದೇಶಕ್ಕೆ ರೈತರ ಭೂಸ್ವಾಧೀನ ಎನ್ನುವ ನೀತಿ ಬಹುತೇಕ ಭ್ರಷ್ಟಾಚಾರ ಮತ್ತು ಕಾರ್ಪೊರೇಟ್ ಓಲೈಕೆಗಾಗಿ ಕುಖ್ಯಾತಿಯನ್ನು ಪಡೆದಿದೆ. ಕೈಗಾರಿಕೀಕರಣ ಅಂದರೆ ದೊಡ್ಡ ಕಂಪೆನಿಗಳಿಗೆ ಹೂಡಿಕೆಗೆ ಅವಕಾಶ ನೀಡುವುದು, ಅವರಿಗೆ ಬೇಕಾದ ಜಮೀನು ಮತ್ತಿತರ ಸೌಲಭ್ಯಗಳನ್ನು ನಾಮಕಾವಾಸ್ತೆ ಬೆಲೆಗೆ, ಎಷ್ಟೋ ಬಾರಿ ಉಚಿತ. ನೀಡುವ ನೀತಿ ಅಷ್ಟೆ. ಚಾರಿತ್ರಿಕವಾಗಿ ತಮಿಳುನಾಡಿನಲ್ಲಿ ಸಣ್ಣ ಪುಟ್ಟ ನಗರಗಳಲ್ಲಿ ಪುಟ್ಟ ಕೈಗಾರಿಕಾ ವಲಯಗಳನ್ನು ಸೃಷ್ಟಿಸಿ ಅಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟ ಮಾದರಿಯನ್ನೇ ದೇವರಾಜ ಅರಸು ಕಾಲದಲ್ಲಿ ಅನುಸರಿಸಿ ಕೈಗಾರಿಕಾ ವಸಾಹತುಗಳನ್ನು ಸೃಷ್ಟಿಸಲಾಯಿತು. ಇವೆಲ್ಲಾ ಕೆಲವೇ ಸಾವಿರ ಚದರಡಿಗಳ ನಿರ್ಮಿತಿಗಳು ಇವು ಸ್ಥಳೀಯ ಉದ್ಯಮಶೀಲತೆಯನ್ನು ಬೆಳೆಸಿದ ಉದಾಹರಣೆ ರಾಜ್ಯದುದ್ದಕ್ಕೂ ಸಿಗುತ್ತದೆ. ಆದರೆ ಜಾಗತೀಕರಣದ ಬಳಿಕ ದೊಡ್ಡ ಕಾರ್ಪೊರೇಟ್ ಉದ್ಯಮಪತಿಗಳು ನೂರಾರು ಕೋಟಿ ಹೂಡಿಕೆ ಮಾಡುವಂತೆ ಸ್ವಾಗತಿಸಿ ಅವರಿಗೆ ನೂರಾರು ಎಕರೆ ಜಮೀನು ನೀಡುವ ಹೊಸ ನೀತಿ ಜಾರಿಗೆ ಬಂತು. ಒಪ್ಪಂದ ಪತ್ರದಲ್ಲಿ ಸ್ಥಳೀಯರಿಗೆ ಉದ್ಯೋಗ, ನೂರಾರು ಉದ್ಯೋಗ ಸೃಷ್ಟಿ ಎಂದೆಲ್ಲಾ ದಾಖಲೆಯಲ್ಲಿದ್ದರೂ ಅಧಿಕೃತವಾಗಿ ಜಾರಿಗೆ ಬರುವಾಗ ಸ್ಥಳೀಯರು ನಿರಾಶ್ರಿತರಾಗಿ ಬಿಡುತ್ತಿದ್ದರು. ಹೆಚ್ಚೆಂದರೆ ಡ್ರೈವರು, ಕಸ ಗುಡಿಸೋದು, ಜವಾನ ಇತ್ಯಾದಿ ಉದ್ಯೋಗಗಳಷ್ಟೇ ಸ್ಥಳೀಯರಿಗೆ ದಕ್ಕಿದ್ದು ಇನ್ನೊಂದೆಡೆ ಹೀಗೆ ಜಮೀನು ಪಡೆದು ವರ್ಷಗಟ್ಟಲೆ ಆದರೂ ಏನನ್ನೂ ಆರಂಭಿಸದೆ ಜಮೀನು ಅಡವಿಟ್ಟು ಕಾಸು ತಿರುಗಿಸಿದ ಉದಾಹರಣೆಗಳು ಇವೆ. ಇದರ ಇನ್ನೊಂದು ಮುಖವಾಗಿ ಇದಕ್ಕೆಂದೇ ಇರುವ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮವು ಭೂ ಬ್ಯಾಂಕ್ ಸೃಷ್ಟಿ ಮಾಡುತ್ತಾ ಹೋಗಿದೆ. ಭವಿಷ್ಯದಲ್ಲಿ ಉದ್ಯಮಿಗಳಿಗೆ ಬೇಕಾದ ಭೂಮಿಯನ್ನು ಈಗಾಗಲೇ ವಶಪಡಿಸಿ ದಾಸ್ತಾನು ಮಾಡಿ ಇಡುವ ಯೋಜನೆ! ಈ ಪ್ರಕಾರ ವಶಪಡಿಸಿಕೊಂಡ ಜಮೀನಿನ ಅರ್ಧಕ್ಕರ್ಧ ಪ್ರದೇಶಕ್ಕೆ ಇಂದಿಗೂ ಬೇಡಿಕೆ ಇಲ್ಲ. ಜಮೀನು ಪಡಕೊಂಡ ಉದ್ಯಮಪತಿಗಳು ಉದ್ಯಮ ಆರಂಭಿಸಿಲ್ಲ ಎಂದು ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ನೋಟಿಸ್ ನೀಡಲಾಗಿತ್ತು. ಅಷ್ಟೇಕೆ ಇದುವರೆಗೆ ಈ ಬೋರ್ಡು ತಾನು ವಶಪಡಿಸಿಕೊಂಡ ಜಮೀನಿನಲ್ಲಿ ಸಾವಿರಾರು ಎಕರೆಗಳನ್ನು ಭೂಸ್ವಾಧೀನದಿಂದ ಕೈಬಿಟ್ಟಿದೆ. ಅಂದಾಜು 25 ಸಾವಿರ ಎಕರೆ) ಜಿಲ್ಲಾ ಕೇಂದ್ರಗಳಲ್ಲಿ ಈ ರೀತಿಯ ಭೂಸ್ವಾಧೀನ ಮೂಲಕ ಕೈಗಾರಿಕಾಭಿವೃದ್ಧಿ ಎಂದು ಘೋಷಿತವಾದರೂ ಬಹುತೇಕ ಜಿಲ್ಲೆಗಳಲ್ಲಿ ಯಾವುದೇ ಗಮನಾರ್ಹ ಹೂಡಿಕೆಯಾಗಿಯೇ ಇಲ್ಲ.

> ಆಗ ಕಾಂಗ್ರೆಸ್‌ನ ಹಲವು ನಾಯಕರು ರೈತರ ಪರವಾಗಿ ಹೇಳಿಕೆಗಳನ್ನು ನೀಡಿದ್ದರು. ಇದೀಗ ಕಾಂಗ್ರೆಸ್ ಸರಕಾರ ಅಧಿಕಾರ ಹಿಡಿದಿದೆ. ಆದರೆ, ರೈತರ ಬೇಡಿಕೆಗಳು ಮಾತ್ರ ಈವರೆಗೆ ಈಡೇರಿಲ್ಲ ಇದೀಗ ಪ್ರತಿಭಟನಾ ನಿರತ ರೈತರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಮಾತುಕತೆ ನಡೆಸಿದ್ದಾರೆ. ಅವರ ಬೇಡಿಕೆಗಳಿಗೆ ಸ್ಪಂದಿಸುವ ಭಾಗಶಃ ಭರವಸೆಯನ್ನೂ ನೀಡಿದ್ದಾರೆ.




## ರಾಮಾಯಣ

### ಅಂಬರೀಷರಾಯನ ನರಮೇಧ ಯಾಗ

• ಹಿಂದಿನ ಸಂಚಿಕೆಯಿಂದ 59 ನೆಯ ಅಧ್ಯಾಯ

ಆಮೇಲೆ ಮಹಾ ಕೀರ್ತಿವಂತನಾದ ಅಂಬರೀಷರಾಜನು ಋಚೀಕನೆಂಬ ಮುನೀಶ್ವರನಿಗೆ ಅನೇಕ ಸುವರ್ಣಗಳನ್ನೂ ರತ್ನರಾಶಿಗಳನ್ನೂ ಒಂದು ಲಕ್ಷ ಹಸುಗಳನ್ನೂ ಕೊಟ್ಟು ಶುನಃಶೇಫನನ್ನು ಕ್ರಯಕ್ಕೆ ತೆಗೆದುಕೊಂಡು ಮಹಾ ಸಂತೋಷದಿಂದ ರಥದಮೇಲೆ ಕುಳ್ಳಿರಿಸಿಕೊಂಡು ತನ್ನ ಪಟ್ಟಣಕ್ಕೆ ತೆರಳಿದನು.

### ಶುನ 1 ಶೇಫನು ದೀರ್ಘಾಯುಷ್ಯವನ್ನು ಪಡೆದುದು

''ಎಲೈ ರಘುನಾಥನೇ ಕೇಳು: ಈ ಪ್ರಕಾರದಲ್ಲಿ ಅಂಬರೀಷರಾಜನು ಶುನಃಶೇಫನನ್ನು ಕರೆದುಕೊಂಡು ಹೋಗುತ್ತ ಮಧ್ಯಾಹ್ನ ಕಾಲವಾಗಲು ಪುಷ್ಕರಗಳೆಂಬ ಕೊಳಗಳ ಸಮೀಪದಲ್ಲಿ ರಥದಿಂದಿಳಿದನು. ಶುನಃಶೇಫನು ಪುಷ್ಕರ ತೀರದಲ್ಲಿ ಋಷಿಗಳೊಡನೆ ಕೂಡಿಕೊಂಡು ತಪಸ್ಸನ್ನು ಮಾಡುತ್ತಿದ್ದ ತನ್ನ ಸೋದರ ಮಾವನಾದ ವಿಶ್ವಾಮಿತ್ರಮುನೀಂದ್ರನನ್ನು ಕಂಡು ಬಳಲಿಕೆಯಿಂದ ಕಂದಿದ ಮುಖವುಳ್ಳವನಾಗಿ ಲಜ್ಜೆಯಿಂದ ದೈನ್ಯಭಾವವುಳ್ಳವನಾಗಿ ಆತನ ಸಮೀಪಕ್ಕೆ ಹೋಗಿ ಅಭಿವಂದಿಸಿ ★ವಿಶ್ವಾಮಿತ್ರ ಮುನೀಂದ್ರನೆ, ನನಗೆ ತಾಯಿ ತಂದೆ ಜ್ಞಾತಿ ಬಾಂಧವರಾರೂ ಇಲ್ಲ. ನನ್ನನ್ನು ಧರ್ಮದಿಂದ ರಕ್ಷಿಸು. ನೀನು ಸಮಸ್ತ ಪ್ರಾಣಿಗಳಿಗೂ ರಕ್ಷಕನು. ನೀನು ಸರ್ವಜ್ಞನು. ನರಪಶುವಾಗಬೇಕೆಂದು ನನ್ನನ್ನು ಕ್ರಯಕ್ಕೆ ತಂದ ಅಂಬರೀಷರಾಜನು ನರಮೇಧಯಾಗದ ಸಂಪೂರ್ಣ ಫಲವನ್ನು ಪಡೆದು ಕೃತಾರ್ಥನಾಗುವಹಾಗೆಯೂ ನಾನು ದೀರ್ಘಾಯುಷ್ಯವಂತನಾಗಿ ಉತ್ತಮವಾದ ತಪಸ್ಸನ್ನು ಮಾಡಿ ಸ್ವರ್ಗಲೋಕವನ್ನು ಪಡೆಯುವಹಾಗೆಯೂ ಅನುಗ್ರಹಿಸು, ಅನಾಥನಾದ ನನ್ನನ್ನು ಮಗನನ್ನು ರಕ್ಷಿಸುವಂತೆ ರಕ್ಷಿಸಬೇಕು ' ಎಂದು ಬೇಡಿಕೊಂಡನು.


ಆಗ ವಿಶ್ವಾಮಿತ್ರನು ಶುನಃಶೇಫನನ್ನು ಅಂಜಬೇಡವೆಂದು ಸಂತವಿಟ್ಟು ತನ್ನ ಮಕ್ಕಳನ್ನು ಕರೆದು' ಮಕ್ಕಳಿರಾ, ಲೋಕದಲ್ಲಿ ಶ್ರೇಯಸ್ಸನ್ನು ಪಡೆಯುವಂಥ ಪುಣ್ಯಾತ್ಮರು ಯಾವ ಪರಲೋಕಸಾಧನಾರ್ಥವಾಗಿ ಮಕ್ಕಳನ್ನು ಬಯಸುವರೋ ಅಂಥ ಪರಲೋಕಸಾಧನ ಕೃತ್ಯವನ್ನು ಮಾಡುವ ಸಮಯವು ಬಂದಿದೆ. ಈ ಋಚೀಕಮುನೀಶ್ವರನ ಮಗನು ಬಾಲಕನು. ನನ್ನನ್ನು ಶರಣುಹೊಕ್ಕನು ಈತನ ಪ್ರಾಣವನ್ನು ಉಳಿಸಿ ನನ್ನ ಇಷ್ಟವನ್ನು ಸೆರವೇರಿಸಿರಿ. ನೀವು ಮಹಾಕೃತಾರ್ಥರು ನೀವು ಧರ್ಮಬುದ್ಧಿಯುಳ್ಳವರು ಆದ್ದರಿಂದ ನೀವು ಅಂಬರೀಷರಾಜನ ಸರಮೇಧಯಾಗದಲ್ಲಿ ಪಶುಗಳಾಗಿ ಯಜ್ಞೇಶ್ವರನಿಗೆ ತೃಪ್ತಿಯನ್ನು ಮಾಡಿರಿ ಅನಾಥನಾದ ಶುನಃವೇಧನು ನಿಮ್ಮಿಂದ ಜೀವಿತನಾಗಿ ಬದುಕಲಿ. ಅಂಬರೀಷರಾಜನ ಯಾಗವು ನಿರ್ವಿಘ್ನವಾಗಿ ನೆರವೇರಲಿ. ಆ ಯಾಗದಲ್ಲಿ ಹವಿರ್ಭಾಗಗಳನ್ನು ಭುಜಿಸುವ ದೇವತೆಗಳು ಸಂತುಷ್ಟರಾಗಲಿ, ನನ್ನ ಮಾತು ಸತ್ಯವಾಗಲಿ' ಎಂದು ನುಡಿದನು.

ಮುಂದುವರಿಯುವುದು...



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ , ವಿಮರ್ಶಕರು

# ಶ್ರೀಪಂಡಿತ್ ಮದನ ಮೋಹನ ಮಾಳವೀಯರವರ 163ನೇ ವರ್ಷದ ಜನ್ಮಜಯಂತಿ



• ಉದಯವಾಹಿನಿ, ವಿಶೇಷ

ಪಂ.ಮ.ಮೋ. ಮಾಳವೀಯರವರು 1861 ಡಿಸೆಂಬರ್ 25 ರಂದು ಅಲಹಾಬಾದ್ ನಲ್ಲಿ ಜನಿಸಿದರು. ಬಡತನ ಕುಟುಂಬವಾದರೂ ಶಿಸ್ತು, ಸಂಯಮ,ಶಾಂತಿ, ಸನ್ಮಾರ್ಗ, ಸದ್ಬುದ್ಧಿ, ಸದ್ಗುಣ,ಮಿಗಿಲಾಗಿ ಸಂಸ್ಕಾರಕ್ಕೆ ಕೊರತೆಯಿರಲಿಲ್ಲ. ಈ ರೀತಿ ಕುಟುಂಬ ಇದ್ದರಿಂದಲೇ ಮಾಳವೀಯರು ಬಹಳ ಎತ್ತರಕ್ಕೆ ಬೆಳೆದು ದೊಡ್ಡ ಆಲದಮರವಾದರು. ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಕಾನೂನು ಪದವೀಧರರಾಗಿ ಶಿಕ್ಷಣ ಶ್ರೀಮಂತರಾದರು ಹಾಗೂ ಶಿಕ್ಷಣಕ್ಕೆ ಜಾಸ್ತಿ ಒತ್ತುಕೊಟ್ಟರು. ಶಿಕ್ಷಣದಿಂದಲೇ ಸಮಾಜ ಪ್ರಗತಿ ಸಾಧ್ಯ ಎಂದು ಒತ್ತಿ ಹೇಳಿದರು.

ಚಂದಾ ಹಣವನ್ನು ಸಂಗ್ರಹಿಸಿ 1919 ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು. ಇದರ ಉಪಕುಲಪತಿಗಳಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಹಲವು ವಿದ್ಯಾರ್ಥಿನಿಲಯಗಳು, ಭಾರತಿ ಭವನ ಸ್ಥಾಪಿಸಿ ದರು. ಅವರ ಭಾಷಣಗಳು ವಸ್ತುನಿಷ್ಠವಾಗಿರುವವರೊಂದಿಗೆ ತರ್ಕಬದ್ಧವಾಗಿರುತ್ತಿತ್ತು. ಮಹಾತ್ಮ ಗಾಂಧೀಜಿ ರವರು ಮಾಳವೀಯ ರನ್ನು ತಮ್ಮ ಹಿರಿಯ ಅಣ್ಣನೆಂದು ಭಾವಿಸಿದ್ದ ರಲ್ಲದೆ,ಅವರೊಬ್ಬ ಅಗ್ರಮಾನ್ಯ ಸ್ವಾತಂತ್ರ್ಯ ಹೋರಾಟಗಾರರೆಂದು ತಿಳಿದಿದ್ದರು.

ಭಾರತ ದ್ವೇಷ,ಹಿಂಸೆ, ರಕ್ತಪಾತಗಳಿಗೆ ಎಡೆ ಕೊಡದೆ ಅಹಿಂಸಾತ್ಮಕ ಚಳುವಳಿಯ ಮೂಲಕವೇ ಸ್ವಾತಂತ್ರ್ಯ ಗಳಿಸಬೇಕೆಂಬುದು ಮಾಳವೀಯರ ಅಪೇಕ್ಷೆಯಾಗಿದ್ದಿತು.

ಮಾಳವೀಯರು ಹಿಂದೂ ಧರ್ಮದ ಅಂಧಾಭಿಮಾನಿಗಳಾಗಿರಲಿಲ್ಲ.ಅಸ್ಪೃಶ್ಯತೆ ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಅಧಿಕಾರವೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಹಿಂದೂ ಮುಸ್ಲಿಮರಲ್ಲಿ ಪರಸ್ಪರ, ಸ್ನೇಹ,ಸೌಹಾರ್ದ ,ಸಹಬಾಳ್ವೆಯನ್ನು ಅವರು ಅಪೇಕ್ಷಿಸಿದ್ದರು. ಮುಸ್ಲಿಂ ಬಂಧುಗಳು ಸಹ ಮಾಳವೀಯರ ವಿಚಾರಗಳನ್ನು ಗೌರವಿಸುತ್ತಿದ್ದರು. ಮಾಳವೀಯರು ತಮ್ಮ ಜೀವಿತದ ಕೊನೆಯ ಗಳಿಗೆಯವರೆಗೂ ರಾಷ್ಟ್ರದ ಹಿತಕ್ಕಾಗಿ ಹಾಗೂ ಸ್ವಾತಂತ್ರ್ಯಕ್ಕಾಗಿ ದುಡಿದರು. ತಮ್ಮ ನಾಡಿನ ಮೇಲಿನ ಅಗಾಧ ಪ್ರೀತಿಯಿಂದಾಗಿ ಅವರು ತಮ್ಮೆಲ್ಲಾ ವೈಯಕ್ತಿಕ ಕಷ್ಟಗಳನ್ನು ಸಹಿಸಿದರು. ಅವರು ನಾಡಿಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಮಹನೀಯರಾಗಿದ್ದರು. ಇಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಭಾರತರತ್ನ ಪಂಡಿತ ಮದನ ಮೋಹನ ಮಾಳವೀಯರವರ 163 ನೇ ವರ್ಷದ ಜನ್ಮ ಜಯಂತಿಯನ್ನು ಭಾರತೀಯರಾದ ನಾವು ಅವರನ್ನು ಸ್ಮರಿಸಿ ನೆನೆಯುತ್ತಾ ಶ್ರದ್ಧಾಭಕ್ತಿಯಿಂದ ಆಚರಿಸುವ ಮೂಲಕ ಅವರ ಸರಳ ಬದುಕು, ಆದರ್ಶಗಳನ್ನು ಪಾಲಿಸುತ್ತಾ ,ಸನ್ಮಾನ್ಯರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರೆಯಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

> ಮಾಳವೀಯರು ನವಂಬರ್ 12, 1946 ರಂದು ವಯೋಸಹಜ ಕಾರಣ ತನ್ನ 85 ನೇ ವಯಸ್ಸಿನಲ್ಲಿ ಇಹ ಲೋಕವನ್ನು ತ್ಯಜಿಸಿದರು. ಭಾರತ ಸರ್ಕಾರ ಅವರಿಗೆ ಮರಣೋತ್ತರವಾಗಿ 2015 ರಲ್ಲಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು.

# ಶ್ರೀ ಅಟಲ್ ಬಿಹಾರಿ ವಾಜಪೇಯಿರವರ 100ನೇ ವರ್ಷದ ಜನ್ಮಜಯಂತಿ

• ಉದಯವಾಹಿನಿ, ವಿಶೇಷ

ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು 1924 ಡಿಸೆಂಬರ್ 25 ರಂದು ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಜನಿಸಿದರು.


ಬಾಲ್ಯ,ವಿದ್ಯಾಭ್ಯಾಸ, ಸಂಸ್ಕಾರ,ಪೋಷಕರ ಹಾಗೂ ಗುರುಗಳ ಆಶೀರ್ವಾದದಿಂದ ಶ್ರದ್ಧೆ, ಶಿಸ್ತು,ಪ್ರಯತ್ನ,ಕಠಿಣ ಪರಿಶ್ರಮದಿಂದ ರಾಷ್ಟ್ರದ ಉತ್ತುಂಗ ಸ್ಥಿತಿಗೆ ಏರಿದ ಪೈಕಿ ಒಬ್ಬರಾಗಿರುತ್ತಾರೆ.

ಜಾತಿ,ಧರ್ಮ,ಪಕ್ಷ ಭೇದ ಮರೆತು ಕಾಲಾ ದೇಶ ಮೀರಿ ಭಾರತೀಯರ ಹೃದಯಗಳಲ್ಲಿ ಗೌರವ, ಹೆಮ್ಮೆ ,ಆದರ ಭಾವನೆಗಳು ಮೂಡುವಂತೆ ಅವರು ಯಾವ ಕೆಲಸವನ್ನು ಮಾಡಿದರೂ ದೇಶದ ಘನತೆ,ಗೌರವ, ಹಿರಿಮೆಗಳನ್ನು ಎತ್ತಿ ತೋರುವಂತೆ ಮಾಡುವ ಮಹಾನ್ ವ್ಯಕ್ತಿತ್ವ ಅವರದು. ಕವಿ,ಪತ್ರಿಕೋದ್ಯಮಿ, ಶ್ರೇಷ್ಠವಾಗ್ಮಿ,ಪ್ರಾಮಾಣಿಕ ರಾಜಕಾರಣಿ,ಅಜಾತಶತ್ರು, ಶ್ರೇಷ್ಠ ಸಂಸದೀಯ ಪಟು,ಹಾಸ್ಯ ಸ್ವಭಾವ, ಸ್ವಾತಂತ್ರ ಮನೋಭಾವ, ಯುಕ್ತಾಯುಕ್ತ ಆಲೋಚನೆ, ಪರಾಮರ್ಶೆ,ವೈಚಾರಿಕತೆ ಹೀಗೆ ಹಲವು ಹತ್ತು ಗುಣಗಳನ್ನು ಮೈಗೂಡಿಸಿಕೊಂಡು ತಮ್ಮ ಸ್ವಂತ ಪ್ರತಿಭೆ, ಬೌದ್ಧಿಕ ಶಕ್ತಿ ಸಾಮರ್ಥ್ಯಗಳಿಂದ ದೇಶದ ಪ್ರಧಾನಮಂತ್ರಿ ಯಾಗಿ ಪ್ರಸಿದ್ಧರಾದರು. ದೇಶದ ಪ್ರಗತಿಗಾಗಿ ಹತ್ತು ಹಲವಾರು ಉಪಯುಕ್ತ ಯೋಜನೆ ಗಳನ್ನು ರೂಪಿಸಿ ಭಾರತದ ನದಿಗಳೆಲ್ಲವನ್ನೂ ಒಟ್ಟುಗೂಡಿಸಿ ಬರಪೀಡಿತ ಪ್ರದೇಶಗಳಲ್ಲಿ ಸಂಪದ್ಭರಿತ ಪ್ರಾಂತ್ಯಗಳನ್ನಾಗಿ ಮಾಡುವ ಉದ್ದೇಶ ಹೊಂದಿದ್ದರು.

ಅಟಲ್ ಬಿಹಾರಿ ವಾಜಪೇಯಿ ಅವರು ಓರ್ವ ಆದರ್ಶ ರಾಜಕೀಯ ನಾಯಕರಾಗಿದ್ದು, ನಿಸ್ವಾರ್ಥ ಮನೋಭಾವ, ಉಜ್ವಲ ದೇಶಪ್ರೇಮ, ರಾಷ್ಟ್ರೀಯತೆ ಇವುಗಳಿಂದ ಕೂಡಿದ ಪಾರದರ್ಶಕ ವ್ಯಕ್ತಿತ್ವ ಅವರದಾಗಿತ್ತು.ದೇಶಕ್ಕಾಗಿ ಎಂಥಹ ತ್ಯಾಗಕ್ಕೂ ಕೂಡ ಅವರು ಸಿದ್ದರಾಗಿದ್ದರು. ಭಾರತ ಸರ್ಕಾರ 2015 ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.

ಇಂತಹ ಮಹಾನ್ ಚೇತನ ಆಗಸ್ಟ್ 16 ,2018 ರಂದು ತನ್ನ 94 ನೇ ವಯಸ್ಸಿನಲ್ಲಿ ಭೌತಿಕ ಶರೀರವನ್ನು ಬಿಟ್ಟು ಬಾರದ ಲೋಕಕ್ಕೆ ಹೋದರು.ಆದರೂ ಅವರ ಆದರ್ಶಗಳು ಜೀವಂತವಾಗಿವೆ ಹಾಗೂ ಎಲ್ಲಾ ಪಕ್ಷದ ರಾಜಕೀಯ ಮುಖಂಡರುಗಳಿಗೆ ಆದರ್ಶರಾಗಿ, ಮಾರ್ಗದರ್ಶಕರಾಗಿ ರಾಷ್ಟ್ರದಲ್ಲಿ ಚಿರಸ್ಮರಣೀಯ ರಾಗಿದ್ದಾರೆ. ಅವರೇ ಧನ್ಯರು, ರಾಷ್ಟ್ರದ ಶಕ್ತಿ ಮತ್ತು ಆಸ್ತಿವಂತರಾಗಿದ್ದರು. ಭಾರತೀಯರಾದ ನಾವು ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ವರ್ಷದ ಜನ್ಮ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ನಾವು ನೀವುಗಳು ಆಚರಿಸುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

> ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು



# ಶ್ರೀ ಅಯ್ಯಪ್ಪ ಸ್ವಾಮಿ ಮಂಡಲೋತ್ಸವ

• ಉದಯವಾಹಿನಿ, ಬೆಂಗಳೂರು

ಶ್ರೀ ಅಯ್ಯಪ್ಪ ಧರ್ಮಾಚಾರ ಸೇವಾಶ್ರಮ (ರಿ.) ಚಾಮರಾಜಪೇಟೆ ಬೆಂಗಳೂರು – 18 ದಿನಾಂಕ 26 ಡಿಸೆಂಬರ್ 2024 ರಂದು ಮಂಡಲೋತ್ಸವದ ಸಂದರ್ಭದಲ್ಲಿ ಈ ಕೆಳಗೆ ತಿಳಿಸಿದ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.


5.00 AM : ಗಣಪತಿ, ಸುಬ್ರಹ್ಮಣ್ಯ, ಅಯ್ಯಪ್ಪನಿಗೆ ಅಷ್ಟಾಭಿಷೇಕ.

10:00 AM : ಅಯ್ಯಪ್ಪ ಲಕ್ಷಾರ್ಚನೆ

1:00 PM: ಮಹಾ ಮಂಗಳಾರತಿ ನಂತರ ಎಲ್ಲಾ ಭಕ್ತರಿಗೆ ಪ್ರಸಾದ

ವಿಶೇಷ ಸೂಚನೆ: ಮಾಲೆ ಧರಿಸಿದ ಸ್ವಾಮಿಗಳು ಲಕ್ಷಾರ್ಚನೆಗೆ ಕುಳಿತುಕೊಳ್ಳಬಹುದು ಮತ್ತು ಯಾವುದೇ ನೋಂದಣಿ ಇಲ್ಲದೆ ಪೂಜೆಯ ಭಾಗವಾಗಬಹುದು.

4. 6:00 PM : ವಿಲ್ಲಕ್ಕು ಪೂಜೆ ಆರಂಭ 5. 7.30 PM : ಪಡಿಪೂಜೆ, ಮಹಾ ಮಂಗಳಾರತಿ ನಂತರ ಎಲ್ಲಾ ಭಕ್ತರಿಗೆ ಪ್ರಸಾದ. ಅಯ್ಯಪ್ಪನ ಶ್ರದ್ಧಾಪೂರ್ವಕ ಭಕ್ತರು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಇದರಲ್ಲಿ ಭಾಗವಹಿಸಿ ಮತ್ತು ಅಯ್ಯಪ್ಪನ ಆಶೀರ್ವಾದವನ್ನು ಪಡೆದುಕೊಳ್ಳಿ.


ಉದಯವಾಹಿನಿ ಚಿತ್ರ

# ದಿನಕ್ಕೊಂದು ಮುಕ್ತಕ -61



ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

**ಗುರುವೆಮಗೆ ಕಲಿಸುವರು**
**ಪಾಠವನು ಸರಿಯಾಗಿ**
**ಮರೆಯದೆಯೆ ಓದಿ ತಿಳಿಯುತ್ತ**
**ಬದುಕು**
**ಗರಿಮೆಯಲಿ**
**ಕಲಿಯುತಲಿ**
**ಸಾಗುತಿರು**
**ಜೀವನದಿ**
**ತೊರೆಯದಲೆ**
**ಗುಂಪಿನಲಿ ಲಕ್ಷ್ಮಿ**
**ದೇವಿ.....**

**ಭಾವಾರ್ಥ** : ಗುರುವು ನಮಗೆ ಪಾಠವನ್ನು ಕಲಿಸುತ್ತಾರೆ. ಶಿಸ್ತು ಬದ್ಧ ಜೀವನವನ್ನು ನಡೆಸಲು ದಾರಿದೀಪವಾಗುತ್ತಾರೆ. ಮನೆಯೇ ಮೊದಲ ಪಾಠಶಾಲೆಯಾದರೆ. ಶಾಲೆಯು ಎರಡನೇ ಪಾಠಶಾಲೆ. ಯಾವುದೇ ವಿಚಾರವಾಗಲಿ ಪಠ್ಯಪುಸ್ತಕಕ್ಕೆ ಸೀಮಿತವಾಗಿರದೆ ಬದುಕಿನಲ್ಲಿ ಬೇಕಾಗುವಂತಹ ಶಿಸ್ತು ಬದ್ಧ ಜೀವನಕ್ಕೆ ಕಾರಣಕರ್ತರಾಗುತ್ತಾರೆ. ವಿದ್ಯಾರ್ಥಿಯಾದವರು ಅದನ್ನು ಅರಿತು ತಿಳಿದು ಕಲಿತು ಮುಂದೆ ಸಾಗಬೇಕು. ಶಾಲೆಯೆಂಬ ಮಂದಿರದಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಜ್ಞಾನವನ್ನು ಪಡೆದು ಒಳ್ಳೆಯ ವಿದ್ಯಾರ್ಥಿಯಾಗಬೇಕು. ಆಗ ಮಾತ್ರ ಉತ್ತಮವಾದ ಪ್ರಜೆಯಾಗಿ ಬೆಳೆಯಲು ಸಾಧ್ಯ.



> ಶಿಸ್ತು ಬದ್ಧ ಜೀವನವನ್ನು ನಡೆಸಲು ದಾರಿ


# ಇಡುಗುಂಜಿ ಗಣಪತಿಗೆ ಈ ರೀತಿಯಾದ ಒಂದು ಸಣ್ಣ ಹರಕೆ ಮಾಡಿಕೊಳ್ಳಿ

• ಉದಯವಾಹಿನಿ, ಬೆಂಗಳೂರು

ಹೊನ್ನಾವರದಿಂದ ಕೇವಲ 15 ಕಿಲೋ ಮೀಟರ್ ಹಾಗೂ ಮುರ್ಡೇಶ್ವರದಿಂದ 23 ಕಿಲೋ ಮೀಟರ್ ದೂರದಲ್ಲಿರುವ ಈ ಪವಿತ್ರ ಪುಣ್ಯಧಾಮಕ್ಕೆ ಇಡಗುಂಜಿ ಎಂದು ಹೆಸರು ಹೇಗೆ ಬಂತು ಗೊತ್ತೆ. ಇಡಾ ಎಂದರೆ ಎಡ, ಕುಂಜು ಎಂದರೆ ಗಿಡಗಂಟೆಗಳಿಂದ ತುಂಬಿರುವ ಅರಣ್ಯಪ್ರದೇಶ, ಶರಾವತಿಯ ಎಡ ಭಾಗದಲ್ಲಿರುವ ಅರಣ್ಯದ ರಮಣೀಯತೆಗೆ ಮನಸೋತು ನಾರದ ಮರ್ಷಿಗಳು ಈ ಹೆಸರು ಇಟ್ಟರೆಂದು ಸ್ಥಳ ಪುರಾಣ ಹೇಳುತ್ತದೆ.

ಪ್ರಾಚೀನ ಕಾಲದಲ್ಲಿ ಇಲ್ಲಿ ವಾಲಖಿಲ್ಯಾದಿ ಋಷಿಗಳೂ ಕುಟಜಾದ್ರಿಯಲ್ಲಿ ತಪಸ್ಸನ್ನಾಚರಿಸುತ್ತಿರಂತೆ. ಅವರಿಗೆ ಹಲವು ಬಗೆಯ ವಿಘ್ನಗಳು ಎದುರಾದವು. ಆ ಸಂದರ್ಭದಲ್ಲಿ ಅಲ್ಲಿ ಪ್ರತ್ಯಕ್ಷರಾದ ತ್ರಿಲೋಕ ಸಂಚಾರಿ ನಾರದ ಮರ್ಷಿಗಳು ವಿಘ್ನ ನಿವಾರಕನಾದ ಗಣಪತಿಯ ಪೂಜೆ ಮಾಡುವಂತೆ ತಿಳಿಸಿದರು. ತಾವೇ ಗಣಪನನ್ನು ಕರೆತರುವುದಾಗಿಯೂ ಒಪ್ಪಿಕೊಂಡರು. ನಂತರ ಗೇರುಸೊಪ್ಪೆ ಪ್ರದೇಶದಲ್ಲಿ ನಿಂತು ಸುತ್ತಲ ಪ್ರದೇಶವನ್ನು ನೋಡಿದ ನಾರದರು, ಶರಾವತಿಯ ಮುಖಜಪ್ರದೇಶ ಕಂಡು ಮನಸೋತರು. ಶರಾವತಿ ನದಿಯ ಎಡ ಭಾಗದಲ್ಲಿರುವ ಗಿಡಗಂಟಿಗಳ ಅರಣ್ಯ ಪ್ರದೇಶದ ರಮಣೀಯತೆಗೆ ಮನಸೋತು ಇಡಾಕುಂಜ ಎಂದು ಕರೆದರಂತೆ. ಮುಂದೆ ಅದುವೇ ಇಡಗುಂಜಿ ಆಯಿತೆನ್ನುತ್ತಾರೆ ಸ್ಥಳೀಯರು.ಗಣಪನ ಪೂಜೆಗೆ ಸಾಕ್ಷಾತ್ ಗಣೇಶನನ್ನೇ ಕರೆತರುವುದಾಗಿ ವಾಲಖಿಲ್ಯಾದಿ ಮುನಿಗಳಿಗೆ ಮಾತುಕೊಟ್ಟಿದ್ದ ನಾರದರು, ನಿತ್ಯ ಪಂಚಕಜ್ಜಾಯ ಕೊಡುವುದಾಗಿ ತಿಳಿಸಿ, ಗಣಪತಿಯನ್ನು ಕರೆತಂದರಂತೆ ವಾಲಖಿಲ್ಯಾದಿ ಋಷಿಗಳು ಗಣಪತಿಯನ್ನು ಪೂಜಿಸಿದರು. ಅಲ್ಲಿಯೇ ನೆಲೆಸುವಂತೆ ಕೋರಿದರು. ಆಗ ದೇವಶಿಲ್ಪಿ ವಿಶ್ವಕರ್ಮನೇ ಎರಡು ಕೈಗಳ ಸುಂದರ ಗಣಪನನ್ನು ನಿರ್ಮಿಸಿದ ಎಂದು ಹೇಳಲಾಗುತ್ತದೆ.

ಈ ಸುಂದರ ಮೂರ್ತಿಯನ್ನು ನಾರದರೇ ಮಾಘಮಾಸದ ಶುಕ್ಲಪಕ್ಷದ ಬಿದಿಗೆಯಂದು ಪ್ರತಿಷ್ಠಾಪಿಸಿದರಂತೆ. ಇಲ್ಲಿ ಪ್ರತಿವರ್ಷ ಮಾಘ ಮಾಸದಲ್ಲಿ ವಾರ್ಷಿಕೋತ್ಸವದಂದು ವಿಶೇಷ ಪೂಜೆ ನಡೆಯುತ್ತದೆ. ಭಾದ್ರಪದ ಶುಕ್ಲ ಚೌತಿಯ ವರಸಿದ್ಧಿ ವಿನಾಯಕನ ವ್ರತದ ದಿನ ಇಲ್ಲಿ ಜನಜಾತ್ರೆಯೇ ಸೇರುತ್ತದೆ. ಇಡಗುಂಜಿಯ ದ್ವಿಭುಜ ಗಣೇಶನಿಗೆ ಅಡಕೆ ಬೆಳೆಗಾರರ ದೊಡ್ಡ ಭಕ್ತವೃಂದವೇ ಇದೆ. ಅಡಕೆ ತೋಟಗಳಿಗೆ ಕೊಳೆರೋಗ ಬಂದರೆ, ಇವರು ಇಡಗುಂಜಿ ಗಣಪನಿಗೆ ಹರಕೆ ಹೊರುತ್ತಾರೆ ಹೀಗಾಗಿ ಈ ಗಣಪನಿಗೆ ಕೊಳಯಡಿಕೆ ಗಣಪ ಎಂಬ ಹೆಸರು ಬಂದಿದೆ.


ಉದಯವಾಹಿನಿ ಚಿತ್ರ

> **ವಿಶಾಲ ಪ್ರದೇಶದಲ್ಲಿ 800 ವರ್ಷಗಳಷ್ಟು ಪುರಾತನವಾದ ವಿನೂತನ ಮಾದರಿಯ ದೇವಸ್ಥಾನ ಶಿಖರ ಗೋಪರದಲ್ಲಿ 22 ತೊಲ ಚಿನ್ನದ ಲೇಪವುಳ್ಳ 78 ಕಿ.ಗ್ರಾಂ. ತೂಕದ ಪಂಚಲೋಹದ ಕಳಶ ಸ್ಥಾಪಿಸಲಾಗಿದೆ. ಪ್ರತಿವರ್ಷವೂ ರಥಸಪ್ತಮಿಯ ದಿನ ಇಲ್ಲಿ ವೈಭವದ ರಥೋತ್ಸವ ಜರುಗುತ್ತದೆ.**

# ಹೂಕೋಸು ಸೇವನೆಯಿಂದ ಎಷ್ಟೆಲ್ಲಾ ಪ್ರಯೋಜನ?


• ಉದಯವಾಹಿನಿ, ಬೆಂಗಳೂರು

ಚಳಿಗಾಲದಲ್ಲಿ ಅನೇಕ ರುಚಿಕರವಾದ ಮತ್ತು ಪೌಷ್ಟಿಕಾಂಶದ ತರಕಾರಿಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಅದರಲ್ಲಿ ಹೂಕೋಸು ಬಹಳ ವಿಶೇಷವೆಂದು ಪರಿಗಣಿಸಲಾಗುತ್ತದೆ. ಹೂಕೋಸು ಕೇವಲ ರುಚಿಕರವಲ್ಲ ಆದರೆ ಇದು ನಮ್ಮ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ ಹೂಕೋಸು ತಿನ್ನುವುದರಿಂದ ಏನು ಪ್ರಯೋಜನ ಹೂಕೋಸು ತಿನ್ನಲು ರುಚಿಕರವಾಗಿರುವುದು ಮಾತ್ರವಲ್ಲದೆ ಅನೇಕ ಪೋಷಕಾಂಶಗಳನ್ನು ಒಳಗೊಂಡಿದೆ. ವಿಟಮಿನ್ ಸಿ ಇರುವ ಕಾರಣ ಇದು ಅನೇಕ ರೋಗಗಳಿಂದ ನಮ್ಮನ್ನು ರಕ್ಷಿಸುತ್ತದೆ. ಇದರಲ್ಲಿ ಹಲವು ಪೋಷಕಾಂಶಗಳಿದ್ದು ಚಳಿಗಾಲದಲ್ಲಿ ಹಲವು ರೋಗಗಳಿಂದ ನಮ್ಮನ್ನು ರಕ್ಷಿಸುತ್ತದೆ. ಪೊಟ್ಯಾಸಿಯಮ್, ಮೆಗ್ನೀಸಿಯಮ್, ಕಬ್ಬಿಣಾಂಶ, ಫೈಬರ್ ಮತ್ತು ಆಂಟಿಆಕ್ಸಿಡೆಂಟ್ ಗಳನ್ನು ಒಳಗೊಂಡಿದೆ. ಹೂಕೋಸು ಬಹಳ ಕಡಿಮೆ ಕ್ಯಾಲೋರಿಗಳನ್ನು ಹೊಂದಿದೆ. ತೂಕ ಇಳಿಕೆಗೆ ಇದು ಉತ್ತಮ ಆಹಾರ.

**ಹೃದಯದ ಆರೋಗ್ಯಕ್ಕೆ ಉತ್ತಮ** : ಹೂಕೋಸಿನಲ್ಲಿ ಪೊಟ್ಯಾಸಿಯಮ್ ಮತ್ತು ಆ್ಯಂಟಿ ಆಕ್ಸಿಡೆಂಟ್‌ಗಳಿವೆ. ಇದು ನಮ್ಮ ಹೃದಯದ ಆರೋಗ್ಯವನ್ನು ಆರೋಗ್ಯವಾಗಿರಿಸುತ್ತದೆ. ರಕ್ತದ ಒತ್ತಡವನ್ನು ನಿಯಂತ್ರಿಸಲು ಹೂಕೋಸು ಸೇವಿಸಬಹುದು. ಇದು ದೇಹದಲ್ಲಿ ಇರುವ ಕೆಟ್ಟ ಕೊಲೆಸ್ಟ್ರಾಲ್ ಅನ್ನು ತೆಗೆದುಹಾಕಲು ಕೆಲಸ ಮಾಡುತ್ತದೆ. ಹೂಕೋಸು ನಿಯಮಿತವಾಗಿ ಸೇವಿಸಿದರೆ ಇದು ಹೃದಯಾಘಾತ ಮತ್ತು ಪಾರ್ಶ್ವವಾಯು ಮುಂತಾದ ಕಾಯಿಲೆಗಳ ಅಪಾಯವನ್ನು ತೆಗೆದುಹಾಕುತ್ತದೆ. ಹೂಕೋಸುಗಳಲ್ಲಿ ಸಲ್ಫ ರಾಫಿನ್ ಇರುತ್ತದೆ. ಇದು ದೇಹದಲ್ಲಿ ಉರಿಯೂತವನ್ನು ಕಡಿಮೆ ಮಾಡುತ್ತದೆ. ಇದರ ಸೇವನೆಯಿಂದ ರಕ್ತ ಸಂಚಾರವೂ ಉತ್ತಮಗೊಳ್ಳುತ್ತದೆ.

**ಜೀರ್ಣಾಂಗ ವ್ಯವಸ್ಥೆಯನ್ನು ಬಲಪಡಿಸಲು** : ಹೂಕೋಸು ಹೇರಳವಾದ ಫೈಬರ್ ಅನ್ನು ಹೊಂದಿರುತ್ತದೆ. ಇದನ್ನು ಸೇವಿಸುವುದರಿಂದ ನಮ್ಮ ಜೀರ್ಣಾಂಗ ವ್ಯವಸ್ಥೆ ಸುಧಾರಿಸುತ್ತದೆ. ಇದು ಹೊಟ್ಟೆ ಮತ್ತು ಗ್ಯಾಸ್ ಸಮಸ್ಯೆ ನಿವಾರಿಸುತ್ತದೆ. ಕೋಸಿನೋಲೇಟ್ ಸಂಯುಕ್ತವು ಇದರಲ್ಲಿದೆ. ಇದು ನಮ್ಮ ಕರುಳನ್ನು ಸ್ವಚ್ಛಗೊಳಿಸಲು ಸಹಾಯ ಮಾಡುತ್ತದೆ. ಹೂಕೋಸಿನಲ್ಲಿ ಫೈಬರ್ ಇರುವ ಕಾರಣ ಇದು ಜೀರ್ಣಾಂಗ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಹೂಕೋಸುಗಳನ್ನು ಕುದಿಸಿ ಸೂಪ್ ಆಗಿಯೂ ಸೇವಿಸಬಹುದು.

ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ವಿಟಮಿನ್ ಸಿ ಹೂಕೋಸುಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಇದು ದೇಹದ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳು ಉಚಿತ ಅಭ್ಯಾಸದಿಂದ ದೇಹವನ್ನು ಹಾನಿಯಿಂದ ರಕ್ಷಿಸುತ್ತದೆ. ಶೀತ ವಾತಾವರಣದಲ್ಲಿ ಶೀತ ಮತ್ತು ಸೋಂಕುಗಳ ಅಪಾಯವು ಹೆಚ್ಚಾಗುತ್ತದೆ. ಹೂಕೋಸು ಸೇವನೆಯು ನಮ್ಮ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಮತ್ತು ಅನೇಕ ರೋಗಗಳನ್ನು ತಡೆಯುತ್ತದೆ. ಹೂಕೋಸುಗಳಲ್ಲಿ ವಿಟಮಿನ್ ಸಿ ಮತ್ತು ಫೈಟೊನ್ಯೂಟ್ರಿಯೆಂಟ್‌ಗಳ ಉಪಸ್ಥಿತಿಯಿಂದಾಗಿ ಇದು ಬಿಳಿ ರಕ್ತ ಕಣಗಳನ್ನು ಸಕ್ರಿಯಗೊಳಿಸುತ್ತದೆ. ಇದು ಸೋಂಕಿನ ವಿರುದ್ಧ ಹೋರಾಡಲು ನಮಗೆ ಸಹಾಯ ಮಾಡುತ್ತದೆ.



### ತೂಕ ಇಳಿಕೆಗೆ ಸಹಕಾರಿ


**ತೂಕ ಇಳಿಸಿಕೊಳ್ಳಲು ಬಯಸುವವರಿಗೆ ಹೂಕೋಸು ಉತ್ತಮ ಆಯ್ಕೆಯಾಗಿದೆ. ಇದು ಫೈಬರ್ ಅನ್ನು ಹೊಂದಿರುತ್ತದೆ ಮತ್ತು ಕ್ಯಾಲೊರಿಗಳ ಪ್ರಮಾಣವು ತುಂಬಾ ಕಡಿಮೆಯಾಗಿದೆ. ಇದನ್ನು ಸೇವಿಸುವುದರಿಂದ ದೀರ್ಘಕಾಲದವರೆಗೆ ಹೊಟ್ಟೆ ತುಂಬಿದ ಅನುಭವವಾಗುತ್ತದೆ. ಇದು ಹಸಿವನ್ನು ನಿಯಂತ್ರಿಸುತ್ತದೆ. ಹೂಕೋಸು ಸೇವನೆಯು ಚಯಾಪಚಯವನ್ನು ಸುಧಾರಿಸುತ್ತದೆ. ಇದನ್ನು ಸಲಾಡ್‌ನಲ್ಲಿ ಸೇರಿಸಿ ಅಥವಾ ಗ್ರೇವಿಯಲ್ಲಿ ಬೇಯಿಸಿ ತಿನ್ನಬಹುದು.**

> ಜೀರ್ಣಾಂಗ ವ್ಯವಸ್ಥೆಯನ್ನು ಬಲಪಡಿಸಲು

# ಹಾಡಹಗಲೇ ಹೋಟೆಲ್ ಮಾಲೀಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಹಾಡಹಗಲೇ ಹೋಟೆಲ್ ಮಾಲೀಕರೊಬ್ಬರ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಈ ದಾಳಿಯ ವೇಳೆಯಲ್ಲಿ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ ಪರಿಣಾಮ ಹೋಟೆಲ್ ಮಾಲೀಕರ ಒಂದು ಕೈ ಕಟ್ ಆಗಿರುವುದಾಗಿ ತಿಳಿದು ಬಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಸಾದರಹಳ್ಳಿ ಗೇಟ್ ಬಳಿಯ ಹೋಟೆಲ್‌ನಲ್ಲಿ ಈ ಘಟನೆ ನಡೆದಿದೆ. ವ್ಯವಹಾರ ಹಳೆಯ ವೈಷಮ್ಯದ ಹಿನ್ನಲೆಯಲ್ಲಿ ದುಷ್ಕರ್ಮಿಗಳು ಹೋಟೆಲ್ ಮಾಲೀಕ ಮಂಜುನಾಥ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದಾರೆ. ಕರ್ನಾಟಕ ಮಚ್ಚಿನಿಂದ ಹಲ್ಲೆ ಮಾಡಿದ ಪರಿಣಾಮ ಹೋಟೆಲ್ ಮಾಲೀಕ ಮಂಜುನಾಥ್ ಒಂದು ಕೈ ಕಟ್ ಆಗಿರುವುದಾಗಿ ತಿಳಿದು ಬಂದಿದೆ. ಕೆಳಗೆ ಬಿದ್ದಂತ ಮಂಜುನಾಥ್ ಮೇಲೆ ಮನಸೋ ಇಚ್ಛೆ ದುಷ್ಕರ್ಮಿಗಳು ಹಲ್ಲೆ ಮಾಡಿರುವುದಾಗಿ ಹೇಳಲಾಗುತ್ತಿದೆ. ದುಷ್ಕರ್ಮಿಗಳ ದಿಢೀರ್ ದಾಳಿಯಿಂದಾಗಿ ಹೋಟೆಲ್ ಸಿಬ್ಬಂದಿ, ಗ್ರಾಹಕರೇ ಬೆಚ್ಚಿ ಬಿದ್ದಿದ್ದಾರೆ. ಗಾಯಾಳು ಮಂಜುನಾಥ್ ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿರುವಂತ ಚಿಕ್ಕಜಾಲ ಠಾಣೆಯ ಪೊಲೀಸರು ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಇಂದು ನೀವು ಆರಾಮವಾಗಿರಬೇಕು ಹಾಗೂ ನಿಕಟ ಸ್ನೇಹಿತರು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಸಂತೋಷವಾಗಿರಿಸಲು ಪ್ರಯತ್ನಿಸಬೇಕು. ಯಾವುದೇ ಹಳೆಯ ಸ್ನೇಹಿತ ನಿಮ್ಮ ಬಳಿ ಹಣವನ್ನು ಕೇಳಬಹುದು.

**ವೃಷಭ** ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ತಾಳ್ಮೆ ಕಳೆದುಕೊಳ್ಳಬೇಡಿ. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಮಿಥುನ** ನಿಮ್ಮ ಹೃದಯಕ್ಕೆ ಪ್ರಿಯವಾಗುವ ಯಾರನ್ನಾದರೂ ಸಂಧಿಸುವ ಅವಕಾಶಗಳು ಇಂದು ಬಲವಾಗಿವೆ. ಇಂದು ಮಾಡಿದ ಹೂಡಿಕೆ ಲಾಭದಾಯಕವಾಗಿದ್ದರೂ ನೀವು ಬಹುಶಃ ಪಾಲುದಾರರಿಂದ ವಿರೋಧ ಎದುರಿಸುತ್ತೀರಿ.

**ಕರ್ಕಾಟಕ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ.

**ಸಿಂಹ** ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ನೀವು ಆಯಾಸ ಹಾಗೂ ನಿರಾಸೆಯಲ್ಲಿ ಸಿಲುಕುತ್ತೀರಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ.

**ಕನ್ಯಾ** ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು,

**ತುಲಾ** ನೀವು ದೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ – ಆದರೆ ಆರ್ಥಿಕವಾಗಿ ಲಾಭದಾಯಕವಾಗಿರುತ್ತವೆ.

**ವೃಶ್ಚಿಕ** ನೀವು ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ ನಿಮಗೆ ತುಂಬಾ ದಣಿವಾದಂತೆನಿಸುತ್ತದೆ ಮತ್ತು ನಿಮಗೆ ಅಧಿಕ ವಿಶ್ರಾಂತಿ ಬೇಕಾಗುತ್ತದೆ. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.

**ಧನಸ್ಸು** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಸಣ್ಣ ಉದ್ಯೋಗವನ್ನು ಮಾಡುವ ಜನರು ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

**ಮಕರ** ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ.

**ಕುಂಭ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಇಂದು ನೀವು ಅನಗತ್ಯವಾಗಿ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು.

**ಮೀನ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು.

## ಯುವಕರ ಗುಂಪಿನ ನಡುವೆ ಮಾರಾಮಾರಿ

• ಉದಯವಾಹಿನಿ, ಹುಬ್ಬಳ್ಳಿ

ಯುವಕರ ಗುಂಪೊಂದು ಹಾಡ ಹಗಲೇ ನಡು ರಸ್ತೆಯಲ್ಲಿಯೇ ಹೊಡೆದಾಡಿಕೊಂಡಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಯುವಕರ ಎರಡು ಗುಂಪುಗಳ ನಡುವೆ ಮಾತಿಗೆ ಮಾತು ಬೆಳೆದು, ವಾಗ್ವಾದ ಕೋಪಕ್ಕೆ ತಿರುಗಿದೆ. ಯುವಕರ ಗುಂಪು ಪರಸ್ಪರ ನಡುರಸ್ತೆಯಲ್ಲಿಯೇ ಹೊಡೆದಾಡಿಕೊಂಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ದೃಶ್ಯ ವೈರಲ್ ಆಗಿದೆ. ಹುಬ್ಬಳ್ಳಿ-ಕಾರವಾರ ರೋಡ್ ಬ್ರಿಡ್ಜ್ ಬಳಿ ಈ ಘಟನೆ ನಡೆದಿದೆ. ಯಾವ ಕಾರಣಕ್ಕಾಗಿ ಯುವಕರು ಹಾಡಹಗಲೇ ರಸ್ತೆಯಲ್ಲಿ ಹೊಡೆದಾಡಿಕೊಂಡಿದ್ದಾರೆ ಎಂಬ ಬಗ್ಗೆ ತಿಳಿದುಬಂದಿಲ್ಲ.

## ವಾಹನಗಳ ಮೇಲೆ ದೊಣ್ಣೆ ಬೀಸಿದ ಕಿಡಿಗೇಡಿಗಳು

• ಉದಯವಾಹಿನಿ, ಕಲಬುರಗಿ

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಇಂದು ಕಲಬುರಗಿ ಬಂದ್ ಗೆ ಕರೆ ನೀಡಲಾಗಿದ್ದು ಕೆಲವೆಡೆ ಕಿಡಿಗೇಡಿಗಳು ಪ್ರತಿಭಟನೆ ಹೆಸರಲ್ಲಿ ಗೂಂಡಾ ವರ್ತನೆ ಮೆರೆದಿದ್ದಾರೆ. ಕೈಯಲ್ಲಿ ದೊಣ್ಣೆ ಹಿಡಿದು ರಸ್ತೆಗಳಲ್ಲಿ ಸಾಗಿದ ಕಿಡಿಗೇಡಿಗಳು, ಕೆಲ ಅಂಗಡಿಗಳನ್ನು ಬಲವಂತವಾಗಿ ಮುಚ್ಚಿಸಿದ್ದಾರೆ. ವಾಣಿಜ್ಯ ರಸ್ತೆಗಳಲ್ಲಿ ನಿಲ್ಲಿಸಿದ್ದ ವಾಹನಗಳ ಮೇಲೆ ದೊಣ್ಣೆಯಿಂದ ಹೊಡೆದು ಹುಚ್ಚಾಟ ಮೆರೆದಿದ್ದಾರೆ. ಶಹಬಜಾರ್ ಬಳಿ ಬೈಕ್ ನಲ್ಲಿ ಬರುತ್ತಿದ್ದ ವ್ಯಕ್ತಿಯನ್ನು ತಡೆದು ಬೈಕ್ ಜಖಂಗೊಳಿಸಿದ್ದಾರೆ. ಅಲ್ಲಿದ್ದ ಅಂಗಡಿಗಳಿಗೆ ತೆರಳಿ, ಕುರ್ಚಿಗಳನ್ನು ಹೊರಗೆ ಬಿಸಾಕಿ, ಅಂಗಡಿ ಬಾಗಿಲುಗಳನ್ನು ಮುಚ್ಚಿಸಿದ್ದಾರೆ. ಕೈಯಲ್ಲಿ ದೊಣ್ಣೆ ಹಿಡಿದು ನಗರದಾದ್ಯಂತ ಬೈಕ್ ನಲ್ಲಿ ಸುತ್ತಾಡಿ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

## ಎಸ್ಸಿ ಎಸ್ಟಿ, ಸಮುದಾಯದ ನೇಕಾರರಿಗೆ ಹೊಸ ಜವಳಿ ಘಟಕ ಸ್ಥಾಪನೆಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಶಿವಮೊಗ್ಗ

ಕೈಮಗ್ಗ ಮತ್ತು ಜವಳಿ ಇಲಾಖೆಯು ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಸಿದಂತೆ ಸಣ್ಣ ಮತ್ತು ಅತಿಸಣ್ಣ (ಎಸ್‌ಎಂಇ) ಘಟಕಗಳ ಸ್ಥಾಪನೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರು ಹೊಸದಾಗಿ ಜವಳಿ ಘಟಕ ಸ್ಥಾಪಿಸಲು ಅರ್ಜಿ ಅಹ್ವಾನಿಸಿದೆ. ಆಸಕ್ತ ಜವಳಿ ಉತ್ಪಾದನಾ ಉದ್ದಿಮೆದಾರರು ನಿಗದಿತ ನಮೂನೆ ಅರ್ಜಿಯನ್ನು ಉಪನಿರ್ದೇಶಕರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಮಂಜುನಾಥ ಟವರ್ಸ್, 2ನೇ ಮಹಡಿ, ಗಾಂಧಿನಗರ, 1ನೇ ಮುಖ್ಯ ರಸ್ತೆ, ಶಿವಮೊಗ್ಗ ಇಲ್ಲಿಂದ ಪಡೆದು, ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯ ದಾಖಲೆಗಳನ್ನು ಲಗತ್ತಿಸಿ ಡಿ. 31ರೊಳಗಾಗಿ ಸಲ್ಲಿಸುವಂತೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಕರ್ನಾಟಕ ಹೆಚ್ಚಿನ ಮಾಹಿತಿಗಾಗಿ ದೂ.ಸಂ.: 08182-223405 ನ್ನು ಸಂಪರ್ಕಿಸುವುದು.

## ಸಾವಿನಲ್ಲೂ ಸಾರ್ಥಕತೆ ಮೆರೆದ ಗೀತಾ

• ಉದಯವಾಹಿನಿ, ಕೊಪ್ಪಳ

ಅಪಘಾತದಲ್ಲಿ ಗಾಯಗೊಂಡು ಸಾವು ಬದುಕಿನ ನಡುವೆ ಹೋರಾಡುತ್ತಿದ್ದಂತ ಆಕೆ ಬದುಕಲೇ ಇಲ್ಲ. ಬದುಕದೇ ಇದ್ದರೂ ಸಾವಿನ ನಂತ್ರವೂ ಇತರರಿಗೆ ತನ್ನ ಅಂಗಾಂಗ ದಾನದ ಮೂಲಕ ಜೀವದಾನವಾಗಿದ್ದಾಳೆ. ಡಿಸೆಂಬರ್.15ರಂದು ಶಿವಮೊಗ್ಗದ ಬೇಡರಹೊಸಳ್ಳಿ ಬಳಿಯಲ್ಲಿ ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ ಭೀಕರ ಅಪಘಾತ ಸಂಭವಿಸಿತ್ತು. ಈ ಅಪಘಾತದಲ್ಲಿ ಕಾರಿನಲ್ಲಿದ್ದಂತ ಗೀತಾ ಸಂಗನಗೌಡ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಕೂಡಲೇ ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಆದರೇ ಅವರ ಮೆದುಳು ನಿಷ್ಕ್ರಿಯಗೊಂಡ ಕಾರಣ, ಮಣಿಪಾಲ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೇ ಇಂದು ಆಕೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ. ಆಕೆಯ ಕುಟುಂಬಸ್ಥರನ್ನು ವೈದ್ಯರು ಮನವೊಲಿಸಿದ ಪರಿಣಾಮ, ಅಂಗಾಂಗ ದಾನ ಮಾಡಿದ್ದಾರೆ.

# ರೈತರ ಜಮೀನುಗಳಿಗೆ ನೀರು ತಲುಪದೆ ರೈತರು ಕಂಗಾಲು

## ಕಾಲುವೆಗಳಲ್ಲಿ ಗಿಡಗಂಟ್ಟೆಗಳು, ರೈತರ ಜಮೀನಿಗೆ ಹೋಗದ ನೀರು, ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ

**ಉದಯವಾಹಿನಿ ವಿಶೇಷ ವರದಿ**

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನಲ್ಲಿ ಎರಡು ಮಧ್ಯಮ ನೀರಾವರಿ ನಾಗರಾಳ ಜಲಾಶಯ ಮತ್ತು ಚಂದ್ರಂಪಳ್ಳಿ ಜಲಾಶಯ ಹಾಗೂ 21 ಸಣ್ಣ ನೀರಾವರಿ ಕೆರೆಗಳು ಇದ್ದರೂ ಸಹ ಸಂಪೂರ್ಣವಾಗಿ ರೈತರ ಜಮೀನುಗಳಿಗೆ ನೀರು ತಲುಪದೆ ರೈತರು ಬಹಳಷ್ಟು ಕಂಗಾಲಾಗಿದ್ದಾರೆ.

ತಾಲ್ಲೂಕಿನಲ್ಲಿ ಒಟ್ಟಾರೆ ಮಧ್ಯಮ ಜಲಾಶಯ ಮತ್ತು ಸಣ್ಣ ನೀರಾವರಿ ಕೆರೆಗಳು ಒಟ್ಟಾರೆ 23 ಇದ್ದು ಇಂದು ಚಿಂಚೋಳಿ ತಾಲ್ಲೂಕಾ ಸಂಪೂರ್ಣವಾಗಿ ನೀರಾವರಿ ಕ್ಷೇತ್ರ ಇರಬೇಕಾಗಿತ್ತು ಆದರೆ ಅಂದಾಜು ಶೇ.30ಪ್ರತಿಶತಃ ಮಾತ್ರ ನೀರಾವರಿ ಜಮೀನು ರೈತರು ಮಾಡುತ್ತಿರುವುದು ನೋಡಿದರೆ ಚುನಾಯಿತ ಜನಪ್ರತಿನಿಧಿಗಳು ಹಾಗೂ ಉನ್ನತಮಟ್ಟದ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ.

**ನಾಗರಾಳ ಜಲಾಶಯ:** 80ಕಿಮೀ ಮುಖ್ಯ ಕಾಲುವೆ ಜೋತೆ ಸಾಕಷ್ಟು ಕಿಮೀ ಮರಿ ಕಾಲುವೆಯಿವೆ ಆದರೆ ಇಲ್ಲಿಯವರೆಗೆ ಕಾಮಗಾರಿ ಪೂರ್ಣಗೊಳ್ಳದೆ ನೀರು ರೈತರ ಜಮೀನಿಗೆ ಸಾಗದೆ ಕಂಗಲಾಗಿದ್ದರೆ ಗುತ್ತಿಗೆದಾರನ ಮಾತ್ರ ಆಷ್ಯರಾಮೀ ಜೀವನವಿದೆ,ರೈತರು ಸಂಕಷ್ಟದಲ್ಲಿದ್ದಾರೆ,ಕಾಲುವೆಗಳಲ್ಲಿ ಸಾಕಷ್ಟು ಗಿಡಗಂಟ್ಟೆಗಳು ಆಪ್ ಬೆಳೆದಿದೆ ಇದರಿಂದ ನೀರು ಸಾಗುವುದು ತುಂಬಾ ಕಷ್ಟವಾಗಿದೆ,ಮರಿ ಕಾಲುವೆ ಅಂತು ಕೇಳತೀರದು ಹೀಗಾದರೆ ರೈತರು ಜೀವನ ನಡೆಸುವುದು ಹೇಗೆ ಎಂಬುವುದು ಯಕ್ಷಪ್ರೇಶ್ನೆಯಾಗಿದೆ.

**ಚಂದ್ರಂಪಳ್ಳಿ ಜಲಾಶಯ:** ಎಲ್.ಬಿ.ಎಸ್ 22ಕಿಮೀ ಮುಖ್ಯ ಕಾಲುವೆ,ಆರ್.ಬಿ.ಸಿ 14ಕಿಮೀ ಮುಖ್ಯ ಕಾಲುವೆಯಿದೆ,ಆದರೆ ರೈತರ ಜಮೀನಿಗೆ ನೀರು ಬರುವುದು ಬಹಳಷ್ಟು ಕಷ್ಟಕರವಾಗಿದೆ,ನ.15ಕ್ಕೆ ನೀರು ಬಿಟ್ಟಿದ್ದರೆ ಡಿಸೆಂಬರ್ 23ಆದರೂ ಸಹ ನೀರು ರೈತರ ಜಮೀನಿಗೆ ಬರುವುದಿಲ್ಲಾ ಇದರಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ,ಮುಖ್ಯ ಕಾಲುವೆಗೆ ಬಂದರೂ ಸಹ ಮರಿ ಕಾಲುವೆಗಳು ಮಾಯಾವಾಗಿವೆ,ಮರಿ ಕಾಲುವೆಗಳು ಇಲ್ಲದಿದ್ದರೆ ನೀರು ಬರುವುದು ಹೇಗೆ ಎಂಬುವುದು ರೈತರ ಪ್ರೇಶ್ನೆಯಾಗಿದೆ,ಕೆಲಕಡೆ ರೈತರು ಮೋಟಾರ್ ಮೂಲಕ ಬೆಳೆಗಳಿಗೆ ನೀರುಣಿಸುತ್ತಿದ್ದು ಕೆಲವೆಡೆ ರೈತರು ಕಂಗಾಲಾಗಿದ್ದಾರೆ,71ಗಂಟೆಯಲ್ಲಿ ಸಂಪೂರ್ಣವಾಗಿ ರೈತರ ಜಮೀನಿಗೆ ಹೋಗಬೇಕಾದ ನೀರು ಎರಡು ತಿಂಗಳ ಗತಿಸಿದರು ನೀರು ಬರುವುದಿಲ್ಲಾ ಹೀಗಾದರೆ ರೈತರು ಹೇಗೆ ಬದುಕಬೇಕು ಎಂಬುವುದು ರೈತರ ಯಕ್ಷಪ್ರೇಶ್ನೆಯಾಗಿದೆ. ಚುನಾಯಿತ ಜನಪ್ರತಿನಿಧಿಗಳು, ತಾಲ್ಲೂಕಾ ಮಟ್ಟದ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು,ಈ ಭಾಗದ ಪ್ರಮುಖ ರೈತರು ಒಗ್ಗೂಡಿ ಎಲ್ಲೋರ ಸಮಕ್ಷಮ ಸಭೆ ನಡೆಸಿ ರೈತರಿಗೆ ಅನುಕೂಲವಾಗುವಂತೆ ನೀರು ರೈತರ ಜಮೀನಿಗೆ ಬರುವಂತೆ ಒಮ್ಮತದ ಅಭಿಪ್ರಾಯ ಪಡೆಯಬೇಕು ಆಗ ರೈತರ ಜಮೀನಿಗೆ ನೀರು ಹೋಗಲು ಸಾಧ್ಯವಾಗುತ್ತದೆ.





ಉದಯವಾಹಿನಿ ಚಿತ್ರ

> ನಾಗರಾಳ ಜಲಾಶಯ ನೂತನ ಕಾಲುವೆ ಕಾಮಗಾರಿ ಕಾರಣ ಯಾವುದೇ ಅನುದಾನ ಬಂದಿಲ್ಲ,ನೀರು ನಿರ್ವಹಣೆಗೆ ಅನುದಾನವಿಲ್ಲ ಕಾಲುವೆಗಳು ಗುತ್ತಿಗೆದಾರರು ಮಾಡುತ್ತಿದ್ದಾರೆ,ಸುಮಾರು 80ಕಿಮೀ ಮುಖ್ಯ ಕಾಲುವೆಗಳ ಮೂಲಕ ನೀರು ಹರಿಸಲಾಗಿದೆ, ಮರಿ ಕಾಲುವೆ ಕೆಲಕಡೆ ಇದ್ದರೂ ರೈತರು ಒಬ್ಬರು ಬೇಡ ಬೇಕು ಎಂಬುವುದರಲ್ಲಿ ಸಂಪೂರ್ಣಯಿಲ್ಲ ಕೆಲಕಡೆ ನೀರಾವರಿ ಸೌಲಭ್ಯ ರೈತರಿಗೆ ನೀಡುತ್ತಿದ್ದೇವೆ, ಈಗಾಗಲೇ ಕೆಲವು ಕಡೆ ಮುಖ್ಯ ಕಾಲುವೆ ಗಿಡಗಂಟ್ಟೆಗಳು ಆಪ್ ಹುಲ್ಲು ಸ್ವಚ್ಚತೆ ಮಾಡಲಾಗಿದ್ದು ಬಾಕಿಯಿದ ಸ್ವಚ್ಚತೆ ಶೀಘ್ರವೇ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು.
>
> – ಅಮೃತ ಪವ್ವಾರ, ಎಇಇ ನಾಗರಾಳ ಜಲಾಶಯ ಚಿಂಚೋಳಿ.

> ತಾಲ್ಲೂಕಿನಲ್ಲಿ ಒಟ್ಟಾರೆ ಸಣ್ಣ ನೀರಾವರಿ ಕೆರೆಗಳು 23ಯಿವೆ, ಆದರೆ ರೈತರ ಬೇಡಿಕೆಯಂತೆ ನೀರು ಸರಬರಾಜು ಮಾಡುತ್ತೇವೆ, ಮಳೆಗಾಲದಲ್ಲಿ ಕೆರೆಗಳಲ್ಲಿ ಬೇಕಾಗುವಷ್ಟು ನೀರು ಸಂಗ್ರಹ ಮಾಡಿಕೊಂಡು ಹೆಚ್ಚಿನ ನೀರು ಹೊರ ಬಿಡಲಾಗುವುದು,ಈಗಾಗಲೇ ನಾಗಾಯಿದ್ಲಾಯಿ ಗ್ರಾಮದ ಕೆರೆ ದುರಸ್ತಿ ಕಾಮಗಾರಿ ಮಾಡುವ ಹಂತದಲ್ಲಿದ್ದು ನೀರು ಸಂಗ್ರಹ ಮಾಡಿರುವುದಿಲ್ಲಾ ಉಳಿದ ಎಲ್ಲಾ ಕೆರೆಗಳಲ್ಲಿ ನೀರಿನ ಸಂಗ್ರಹವಿದೆ, ವರ್ಷಕ್ಕೆ ಸರ್ಕಾರದಿಂದ ನಿರ್ವಹಣೆ ಅನುದಾನ ಮಿತಿಯಂತೆ ಬರುವುದಿಲ್ಲಾ ಸರ್ಕಾರ ನೀಡಿದ ಅನುದಾನ ವರ್ಷಕ್ಕೆ ಬಂದಷ್ಟು ಬ್ರೀಜ್ಡ್ ಕಂ ಬ್ಯಾರೇಜ್ ಹಾಗೂ ಸಣ್ಣ ಕೆರೆಗಳು ಆದ್ಯತೆ ಮೇರೆಗೆ ನಿರ್ವಹಣೆ ಮಾಡುತ್ತೇವೆ.
>
> – ಶಿವಾಜಿ ಜಾಧವ, ಎಇಇ ಸಣ್ಣ ನೀರಾವರಿ ಇಲಾಖೆ ಚಿಂಚೋಳಿ.

> ಚಂದ್ರಂಪಳ್ಳಿ ಜಲಾಶಯ ಮತ್ತು ಕಾಲುವೆಗಳು ತುಂಬಾ ಹಳೆಯದು ಬೆಸಿಗೆಯಲ್ಲಿ ವಿವರವಾಗಿ ಸರ್ವೆ ನಡೆಸಲು ತಜ್ಞರ ತಂಡ ಆಗಮಿಸುತ್ತಿದ್ದು ಸರ್ವೆಯ ವರದಿ ಆಧಾರಿಸಿ ಅನುದಾನ ಬಿಡುಗಡೆಯಾದ ನಂತರ ನೀರು ಸರಬರಾಜು ಬಗ್ಗೆ ಸಂಪೂರ್ಣ ಕೆಲಸ ಆಗಲಿದೆ,ಅಲ್ಲಿಯವರೆಗೆ ಹಾಗೆ ರೈತರಿಗೆ ನೀರು ಸರಬರಾಜು ಮಾಡಲಾಗುವುದು ಕೆಲವು ಕಡೆ ಕೊಂಡಿ ಮತ್ತು ಕಾಲುವೆ ಸಣ್ಣಪುಟ್ಟ ಗೇಟ್‌ಗಳು ಹಾಳಾಗಿವೆ,ನೀರು ನಿರ್ವಹಣೆಗೆ ಪ್ರತಿವರ್ಷ 30ಲಕ್ಷ ಅನುದಾನ ಬರುತ್ತೆ ಆದರೆ ಕಾಲುವೆ,ಜಲಾಶಯ,ಗೇಟ್ ,ಕಛೇರಿ ಖರ್ಚುವೆಚ್ಚ ಮಾಡಲಾಗುವುದು,ಕಾಲುವೆಯಲ್ಲಿನ ಗಿಡಗಂಟ್ಟೆಗಳು ಆಪ್ ಸ್ವಚ್ಚತೆ ಮಾಡುವ ಕಾಮಗಾರಿ 04ಕಿಮೀ ಇತ್ತು 10ಕಿಮೀ ಸ್ವಚ್ಚತೆ ಹಾಗೂ ಸಣ್ಣಪುಟ್ಟ ಕೆಲಸ ಮಾಡಲಾಗುತ್ತಿದೆ. ತಜ್ಞರ ತಂಡ ಬಂದನಂತರ ಮ್ಯಾಪ್ ಮೂಲಕ ನೀರು ಸಾಗುವ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಲಾಗುವುದು.
>
> – ಚೇತನ ಕಳಸ್ಕರ, ಎಇಇ ಚಂದ್ರಂಪಳ್ಳಿ ಜಲಾಶಯ ಚಿಂಚೋಳಿ.

> ಚಿಂಚೋಳಿ ತಾಲ್ಲೂಕಿನಲ್ಲಿ ಸಾಕಷ್ಟು ನೀರಿನ ಪ್ರಮಾಣವಿದ್ದು ರೈತರಿಗೆ ಸಮರ್ಪಕವಾಗಿ ನೀರು ಸಿಗುತ್ತಿಲ್ಲಾ ಚುನಾಯಿತ ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದ್ದು ರೈತರ ಸಮಸ್ಯೆ ಯಾರು ಬೆಹರಿಸುವುದಿಲ್ಲ,ನವ್ವಂಬರ್ 15ಕ್ಕೆ ಅಧಿಕಾರಿಗಳು ನೀರು ಹರಿಸಬೇಕು,ಅಧಿಕಾರಿಗಳು ನೀರು ಕಾಲುವೆಗಳಿಗೆ ಬಿಟ್ಟರು ಸಹ ರೈತರ ಹೊಲಗಳಿಗೆ ಬರಲು ಎರಡು ತಿಂಗಳು ಬೇಕು,ಅಲ್ಲಿಯವರೆಗೆ ರೈತರು ಬೆಳೆದ ಬೆಳೆಗಳು ಹಾಳಾಗುತ್ತಿವೆ, ಮುಖ್ಯ ಕಾಲುವೆಗೆ ನೀರು ಬಂದರು ಮರಿ ಕಾಲುವೆಗೆ ನೀರು ಬರುವುದಿಲ್ಲ, ಈಗ ನೀರು ಬಿಟ್ಟು 40ದಿನ ಕಳೆದರೂ ರೈತರ ಜಮೀನಿಗೆ ನೀರು ಬಂದಿಲ್ಲ,ರೈತರ ಸಮಸ್ಯೆ ಕೇಳುವವರು ಯಾರುಯಿಲ್ಲ. – ಶಂಕರರಾವ ಭೋಗವಂತಿ, ಪ್ರಗತಿಪರ ರೈತ ಚಿಂಚೋಳಿ.

## ಹಲವು ಸಾಧಕರಿಗೆ ನಗನೂರ ಮಠದಲ್ಲಿ ಸನ್ಮಾನ

• ಉದಯವಾಹಿನಿ ಕೆಂಭಾವಿ

ನಗನೂರಿನ ಶ್ರೀ ಸೂಗುರೇಶ್ವರ ದೇವರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ನಡೆದ ಧರ್ಮ ಸಭೆಯಲ್ಲಿ 2024 ನೇಸಾಲಿನ ಸುರಪುರ ಕಸಾಪ ವರ್ಷದ ವ್ಯಕ್ತಿ ಪ್ರಶಸ್ತಿ ಗೆ ಭಾಜನರಾದ ಸಾಹಿತಿ, ಸಂಶೋಧಕರು ಶ್ರೀಮಠದ ಪರಮ ಭಕ್ತರಾದ ಶ್ರೀ ನಿಂಗನಗೌಡ. ಹ. ದೇಸಾಯಿ ( ಹನಿ) ಪರಸನಹಳ್ಳಿ ಯವರನ್ನು ಶ್ರೀಮಠದ ಪರಮ ಪೂಜ್ಯರಾದ ಶ್ರೀಷ.ಬ್ರ. ಸೂಗುರೇಶ್ವರ ಶಿವಾಚಾರ್ಯರು ಸನ್ಮಾನಿಸಿ ಗೌರವಿಸಿದರು.

ಜೊತೆಯಲ್ಲಿ ಹಿರಿಯ ಸಂಗೀತಗಾರರಾದ ಶ್ರೀ ನೀಲಪ್ಪ ಚೌದ್ರಿ, ಹಾಗೂ ಮಿಮಿಕ್ರಿ ಕಲಾವಿದ ಸುನಿಲಕುಮಾರ್ ರವರನ್ನು ಸನ್ಮಾನಿಸಿದರು.

ಸಮಾರಂಭದಲ್ಲಿ ನಗನೂರಿನ ಪೂಜ್ಯರಾದ ಶ್ರೀ ಶರಣಪ್ಪಶರಣರು ದೇವರಮನಿ , ಶ್ರೀ ಖಂಡಪ್ಪ ತಾತನವರು,ಕೆಂಭಾವಿಯ ಶ್ರೀಗಳಾದ ಶ್ರೀ ಚನ್ನಬಸವ ಶಿವಾಚಾರ್ಯರು ಸಗರ, ನಾಗಠಾಣ ಮಠದ ಶ್ರೀ ಸೋಮಶೇಖರ ಶಿವಾಚಾರ್ಯರು, ನಾವದಗಿಯ ಪೂಜ್ಯರಾದ ಶ್ರೀ ರಾಜೇಂದ್ರ ಒಡೆಯರ್ ಶಿವಾ ಚಾರ್ಯರು ಮತ್ತು ಶರಣ ಸೋಮನಾಳದ ಶ್ರೀಗಳಾದ ಮಹದೇವ್ ಶಾಸ್ತ್ರಿಗಳು ಹಾಗೂ ಗಣ್ಯರಾದ ಶ್ರೀ ಶಂಕ್ರಣ್ಣ ವಣಿಕ್ಯಾಳರವರು ಶ್ರೀ ಅಮೇನರೆಡ್ಡಿ ಪಾಟೀಲ ಸಂಘಟಕರಾದ ಶ್ರೀ ಪ್ರಕಾಶ ಅಂಗಡಿ ಕನ್ನಳ್ಳಿ , ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

## ಅಮಿತ್ ಶಾ ರಾಜೀನಾಮೆ ನೀಡಲು ವಕೀಲರ ಸಂಘ ಒತ್ತಾಯ

• ಉದಯವಾಹಿನಿ,ಚಿಂಚೋಳಿ

ಕೇಂದ್ರ ಗೃಹ ಸಚಿವರಾದ ಅಮಿತಶಾರವರು ಸಂಸತ್ತಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನಿಸಿದ ರೀತಿಯಲ್ಲಿ ಮಾತನಾಡಿದ್ದು ತಕ್ಷಣವೇ ರಾಷ್ಟ್ರಪತಿಯವರು ಮಧ್ಯಸ್ಥಿಕೆ ವಹಿಸಿ ಅವರ ರಾಜೀನಾಮೆ ಪಡೆಯಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ ಒತ್ತಾಯಿಸಿದರು.

ಪಟ್ಟಣದ ಬಸ್ ಘಟಕದ ಎದುರು ರಾಜ್ಯ ಹೆದ್ದಾರಿ ಮುಖ್ಯರಸ್ತೆಯಲ್ಲಿ ವಕೀಲರ ಸಂಘದಿಂದ ಅಂಬೇಡ್ಕರ್ ಅವರಿಗೆ ಅವಮಾನಿಸಿದ ರೀತಿಯಲ್ಲಿ ಸಂಸತ್ತಿನಲ್ಲಿ ಹೇಳಿರುವ ಗೃಹ ಮಂತ್ರಿಯವರಿಗೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು,ಅಮಿತ ಶಾ ರವರು ಅಂಬೇಡ್ಕರ್ ಅವರಿಗೆ ಅವಮಾನಿಸಿದ ರೀತಿಯಲ್ಲಿ ಸಂಸತ್ತಿನಲ್ಲಿ ಮಾತನಾಡಿದಕ್ಕಾಗಿ ಕೂಡಲೇ ರಾಜ್ಯಪಾಲರು ನಮ್ಮ ಮನವಿಯನ್ನು ರಾಷ್ಟ್ರಪತಿಯವರಿಗೆ ರವಾನಿಸಿ ಅವರ ರಾಜಿನಾಮೆ ಪಡೆಯುವಂತೆ ವಕೀಲರ ಸಂಘ ಆಗ್ರಹಿಸುತ್ತದೆ ಒಂದುವೇಳೆ ರಾಜಿನಾಮೆ ಪಡೆಯದಿದ್ದರೆ ದೇಶದ ವಕೀಲರೆಲ್ಲರೂ ಅವರ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಜಗನ್ನಾಥ ಗಂಜಗಿರಿ, ಜಿ.ಕೆ.ಗೋಖಲೆ, ವಿಶ್ವನಾಥ ಬೆನಕಿನ್, ರವೀಂದ್ರ ಹೊವಿನಭಾವಿ, ಮಾಣಿಕರಾವ ಗುಲಗುಂಜಿ, ರಾಜೇಂದ್ರ ವರ್ಮಾ, ಚಂದ್ರಶೇಟ್ಟಿ ಜಾಧವ, ಶಂಕರ ರಾಠೋಡ, ಚಂದ್ರಶೇಖರ ಮಲಸಾ, ಉಮೇಶ ಪಾಟೀಲ, ಸಂಜುಕುಮಾರ ಮೇತ್ರಿ, ವೀರಶೇಟ್ಟಿ, ಅರುಣ ಹೇಗ್ಡೆ, ದೀಲೀಪ್ ಚವ್ಹಾಣ, ರಾಮಲಿಂಗ, ಸುನೀಲ, ಶೇಖ್ ಭಕ್ತಿಯಾರ ಜಗೀರದಾರ, ಮಲ್ಲಿಕಾರ್ಜುನ, ಸೂರ್ಯಕಾಂತ,ಗುರುನಾಥ,ಇರ್ಫಾನ್ ಪಟೇಲ, ಥಾರು ರಾಠೋಡ್, ಸಾಯಬಣ್ಣ, ಮಲ್ಲಿಕಾರ್ಜುನ ಮಾಣಿಕರಾವ, ಅನೇಕರಿದ್ದರು.



ಉದಯವಾಹಿನಿ ಚಿತ್ರ

**ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿಪತ್ರ**

## ಇಂದು ಕ್ರಿಸ್ಮಸ್ ಜಾಗರಣೆ ವಿಶೇಷ ಬಲಿ ಪೂಜೆ

• ಉದಯವಾಹಿನಿ ಮಹಾನಗರ

ಕ್ರಿಸ್ತ ಜಯಂತಿಯ ಸಂಭ್ರಮಕ್ಕೆ ನಾಡು ಸಜ್ಜಾಗಿದ್ದು, ಡಿ. 24ರಂದು ರಾತ್ರಿ ಎಲ್ಲೆಡೆ ಕ್ರಿಸ್ಮಸ್ ಸಂಭ್ರಮಾಚರಣೆಗೆ ಚಾಲನೆ ಸಿಗಲಿದೆ. ಬೆತ್ತೆಹೇಮ್ ನಗರದಲ್ಲಿ ನಡುರಾತ್ರಿಯ ವೇಳೆ ಕ್ರಿಸ್ತರ ಜನನವಾದ ಸನ್ನಿವೇಶವನ್ನು ಸ್ಮರಿಸಿ ಡಿ. 24ರ ರಾತ್ರಿ ಜಾಗತಿಕವಾಗಿ ಕ್ರಿಸ್ಮಸ್ ಜಾಗರಣೆ ನಡೆಯುತ್ತದೆ. ಮಂಗಳವಾರ ಸಂಜೆ 7 ಗಂಟೆಯಿಂದ ಚರ್ಚ್‌ಗಳಲ್ಲಿ ಕ್ಯಾರೋಲ್ ವಿಶೇಷ ಬಲಿಪೂಜೆ, ಜಾಗತಿಕ ಶಾಂತಿಗಾಗಿ ಪ್ರಾರ್ಥನೆ ನಡೆಯುತ್ತವೆ. ಬಲಿಪೂಜೆಯ ಬಳಿಕ ಹಬ್ಬದ ಶುಭಾಶಯಗಳನ್ನು ಜಗತ್ತಿನ ನ ಪರಸ್ಪರ ವಿನಿಮಯ ಮಾಡುವ ಜತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

ಹಬ್ಬದ ಹಿನ್ನೆಲೆಯಲ್ಲಿ ನಗರದ ವಿವಿಧ ಚರ್ಚ್‌ಗಳನ್ನು ವಿದ್ಯುದ್ದೀಪಾಲಂಕಾರ ಗೊಳಿಸಲಾಗಿದೆ. ಕೆಥೋಲಿಕ್ ಹಾಗೂ ಪ್ರೊಟೆ ಸ್ಟೆಂಟ್ ಚರ್ಚ್‌ಗಳು ದೀಪಾಲಂಕಾರ ಗಳಿಂದ ಕಂಗೊಳಿಸುತ್ತಿದೆ. ಗೋದಲಿ, ನಕ್ಷತ್ರಗಳೊಂದಿಗೆ ಅಲಂಕರಿಸಲಾಗಿದೆ. ಕೆಥೋಲಿಕ ರಾಷ್ಟ್ರೀಯ ಚರ್ಚ್‌ಗಳಾದ ನಗರದ ರೊಸಾರಿಯೋ ಕ್ಯಾಥೆಡ್ರಲ್, ಮಿಲಾಗ್ರಿಸ್, ಕೊರ್ಡೆಲ್, ಬೆಂದೂರ್‌ವೆಲ್, ಅಶೋಕ ನಗರ, ಬೊಂದೇಲ್ ವಾಮಂಜೂರು, ಪಾಲನೆ, ಕುಲಶೇಖರ, ಫನ್ನೀರ್, ಕಾಸಿಯಾ, ಕೂಳೂರು, ಬಿಜೈ, ಬಜಾಲ್, ಶಕ್ತಿನಗರ, ಬಿಕರ್ನಕಟ್ಟೆ ಸಹಿತ ವಿವಿಧ ಚರ್ಚ್‌ಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಪ್ರೊಟೆಸ್ಟೆಂಟ್ ಧರ್ಮಪ್ರಾಂತದ ಬಲ್ಮಠ ಸಿಎಸ್‌ಐ ಶಾಂತಿ ಕ್ಯಾಥೆಡ್ರಲ್, ಹೆಬಿಕ್ ಮೆಮೋರಿಯಲ್ ಚರ್ಚ್ ಗೋರಿಗುಡ್ಡ, ಕಾಂತಿ ಚರ್ಚ್ ಜಪ್ಪು, ಉಡುಪಿ ಉತ್ತರ ಕನ್ನಡ ಕೋಡಿಕ್ಕಲ್ ಕ್ರಿಸ್ಟ್ ಚರ್ಚ್‌ಗಳು ವಿದ್ಯುತ್ ದೀಪಗಳಿಂದ ಜಗಮಗಿಸುತ್ತಿವೆ. ಹಬ್ಬದ ಹಿನ್ನೆಲೆಯಲ್ಲಿ ನಗರದ ವಿವಿಧ ಕೆಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಚರ್ಚ್‌ಗಳು ವಿದ್ಯತ್ ದೀಪ, ಗೋದಲಿ, ನಕ್ಷತ್ರ ಗಳಿಂದ ಕಂಗೊಳಿಸುತ್ತಿವೆ. ಕ್ರೈಸ್ತರ ಮನೆ, ಚರ್ಚ್‌ಗಳಲ್ಲಿ ಕ್ರಿಸ್ಮಸ್ ಸಂಬಂಧಿತ ಆಕರ್ಷಕ ಗೋದಲಿ(ಕ್ರಿಬ್) ಗಳನ್ನು ರಚಿಸಲಾಗಿದ್ದು ಗಮನಸೆಳೆಯುತ್ತಿವೆ.



ಉದಯವಾಹಿನಿ ಚಿತ್ರ

**ತಯಾರಿ ಬಲು ಜೋರು**

ಬಹುತೇಕ ಕ್ರೈಸ್ತರ ಮನೆಗಳ ಮುಂಭಾಗಗಳಲ್ಲಿ ಗೋದಲಿಗಳು, ನಕ್ಷತ್ರಗಳು ಕಾಣಸಿಗುತ್ತಿದ್ದು ಸೋಮವಾರ ಸಂಪೂರ್ಣವಾಗಿ ಸಿದ್ಧಪಡಿಸಲಾಗಿದೆ. ವಾಣಿಜ್ಯ ಅಲಂಕಾರಿಕ ವಸ್ತುಗಳಿಂದ ಜೋಡಿಸಲಾಗಿದೆ. ಮಂಗಳೂರು ನಗರ. ಕ್ರೀಡೆ ಗ್ರಾಮಾಂತರದ ಹಲವಾರು ಚರ್ಚ್‌ಗಳಲ್ಲಿ, ಕ್ರೈಸ್ತರ ಮನೆಗಳಲ್ಲಿ ತಯಾರಿಗಳು ಬಲು ಜೋರಾಗಿವೆ.

## ಗೃಹಲಕ್ಷ್ಮಿ ಹಣ ಹೂಡಿ ವ್ಯಾಪಾರ ಆರಂಭಿಸಿದ ಮಹಿಳೆ

• ಉದಯವಾಹಿನಿ ಹೊಳೆಹೊನ್ನೂರು

ಸಮೀಪದ ಎಡೆಹಳ್ಳಿ ಗ್ರಾಮದ ವೃದ್ಧೆಯೊಬ್ಬರು ರಾಜ್ಯ ಸರ್ಕಾರ ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆ ಅಡಿ ಇದುವರೆಗೆ ನೀಡಿದ ಹಣವನ್ನು ಕೂಡಿಟ್ಟು ತಮ್ಮ ಮನೆಯಲ್ಲೇ ಸಣ್ಣ ಅಂಗಡಿ ತೆರೆದು ವ್ಯಾಪಾರ ಆರಂಭಿಸಿದ್ದಾರೆ. ಗ್ರಾಮದ 62 ವರ್ಷ ವಯಸ್ಸಿನ ಖುರ್ಷಿದಾ ಅಂಗಡಿ ತೆರೆದ ಮಹಿಳೆ. ಗ್ರಾಮದ ಬಳಿ ಭದ್ರಾ ನಾಲೆ ಬಳಿ 2 ಲಕ್ಷ ಖರ್ಚು ಮಾಡಿ ಪುಟ್ಟ ಮನೆಯನ್ನು ಕಟ್ಟಿಕೊಂಡು ವಾಸವಿರುವ ಇವರಿಗೆ ಇದ್ದೊಬ್ಬ ಮಗ 16 ವರ್ಷಗಳ ಹಿಂದೆ ಹಾಗೂ ಪತಿ 4 ವರ್ಷಗಳ ಹಿಂದೆ ತೀರಿಕೊಂಡಿದ್ದು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಇದೀಗ 'ಗೃಹಲಕ್ಷ್ಮಿ' ಯೋಜನೆ ಮೂಲಕ 14 ತಿಂಗಳಿಂದ ಜಮೆಯಾಗಿರುವ 28,000ದ ನೆರವಿನಿಂದ ಅಂಗಡಿ ತೆರೆದಿದ್ದಾರೆ. ಈ ಅಂಗಡಿಯಲ್ಲಿ ಬಿಸ್ಕತ್ತು, ಚಾಕೊಲೇಟ್, ಗುಟ್ಕಾ. ಸೀಗರೇಟ್, ಬೀಡಿ, ನೀರಿನ ಬಾಟಲು ಹಾಗೂ ಚಿಕ್ಕಮಕ್ಕಳು ತಿನ್ನುವ ಕುರುಕ್ ತಿಂಡಿ, ಕಾಫಿ, ಟೀ ಮಾರಾಟ ಮಾಡಲು ಪ್ರಾರಂಭಿಸಿದ್ದಾರೆ. ಈ ಅಂಗಡಿಯಲ್ಲಿ ಬಿಸ್ಕತ್ತು, ಚಾಕೊಲೇಟ್, ಗುಟ್ಕಾ, ಸೀಗರೇಟ್, ಬೀಡಿ, ನೀರಿನ ಬಾಟಲು ಹಾಗೂ ಚಿಕ್ಕಮಕ್ಕಳು ತಿನ್ನುವ ಕುರುಕ್ ತಿಂಡಿ, ಕಾಫಿ, ಟೀ ಮಾರಾಟ ಮಾಡಲು ಪ್ರಾರಂಭಿಸಿದ್ದಾರೆ. ಗೃಹಲಕ್ಷ್ಮಿ ಹಣವನ್ನು ಬಿಡಿಸಿಕೊಂಡಿರಲಿಲ್ಲ. ಒಬ್ಬಂಟಿಯಾಗಿರುವ ನನಗೆ ಅಂಗಡಿ ಆರಂಭಿಸಲು ಗ್ರಾಮಸ್ಥರು ನೀಡಿದ ಸಹಕಾರ ಮರೆಯುವಂತಿಲ್ಲ. ಅಂಗಡಿಯನ್ನು ಚೆನ್ನಾಗಿ ನಡೆಸುವ ಮೂಲಕ ಜೀವನ ನಿರ್ವಹಿಸುವ ವಿಶ್ವಾಸ ಇದೆ' ಎಂದು ಖುರ್ಷಿದಾ ಹೇಳುತ್ತಾರೆ.



ಉದಯವಾಹಿನಿ ಚಿತ್ರ

> ಗೃಹಲಕ್ಷ್ಮಿ ಹಣದ ಸದ್ಬಳಕೆ ಬಗ್ಗೆ ಪ್ರತಿ ಮಹಿಳೆ ಯೋಚಿಸುವ ಮೂಲಕ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಬೇಕು. ಯೋಜನೆ ಮಹಿಳೆಯರ ಪಾಲಿಗೆ ವರವಾಗಿದ್ದು, ಸರ್ಕಾರಕ್ಕೆ ಧನ್ಯವಾದಗಳು ಎಂದು ಅವರು ತಿಳಿಸಿದ್ದಾರೆ.

## ಅಂಬೇಡ್ಕರ್ ಕುರಿತು ಅಮಿತ್ ಶಾ ಹೇಳಿಕೆ ಖಂಡಿಸಿ ಗದಗ, ಕಲಬುರಗಿ ಬಂದ್

• ಉದಯವಾಹಿನಿ, ಗದಗ

ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಕುರಿತಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿಕೆ ನೀಡಿರುವ ಮಾತುಗಳು ಅಕ್ಷಮ್ಯ, ಅಮಿತ್ ಶಾ ಅವರು ಅಂಬೇಡ್ಕರ್ ಪ್ರತಿಮೆ ಎದುರು ಮಂಡಿಯೂರಿ ಕುಳಿತು ದೇಶದ ಜನರ ಬಳಿ ಕ್ಷಮೆ ಕೇಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ತಕ್ಷಣವೇ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿ ವಿವಿಧ ದಲಿತ ಸಂಘಟನೆಗಳು ಮಂಗಳವಾರ ಬೆಳ್ಳಂಬೆಳಗ್ಗೆ ಗದಗ-ಬೆಟಗೇರಿ ಬಂದ್‌ಗೆ ಚಾಲನೆ ನೀಡಿದವು.

ದಲಿತ ಸಂಘರ್ಷ ಸಮಿತಿ, ಅಲ್ಪಸಂಖ್ಯಾತ ಸಂಘಟನೆಗಳ ಒಕ್ಕೂಟ, ರೈತ ಸಂಘಟನೆಗಳು, ಕಾರ್ಮಿಕರು, ಕಟ್ಟಡ ಕಾರ್ಮಿಕರ ಸಂಘಟನೆಗಳು, ಬಸವದಳ, ಆಟೊ ಚಾಲಕರು, ಮಾಲೀಕರ ಸಂಘ, ಜೈಭೀಮ್ ಸೇನೆ, ಕರ್ನಾಟಕ ರಕ್ಷಣಾ ವೇದಿಕೆ, ಭೀಮ್ ಆರ್ಮಿ, ಬೀದಿಬದಿ ವ್ಯಾಪಾರಸ್ಥರ ಸಂಘ, ಜಿಲ್ಲಾ ಸ್ಲಂ ಸಮಿತಿ, ಕನ್ನಡಪರ ಸಂಘಟನೆಗಳು ಸೇರಿದಂತೆ ಹತ್ತಾರು ಸಂಘ ಸಂಸ್ಥೆಗಳ ಮುಖಂಡರು ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು ಪ್ರತಿಭಟನೆ ನಡೆಸಿದರು. ಬೆಟಗೇರಿ ಬಸ್ ನಿಲ್ದಾಣ, ಗದಗ ಹೊಸ ಮತ್ತು ಹಳೆ ಬಸ್ ನಿಲ್ದಾಣ, ಮುಳಗುಂದ ನಾಕಾ, ಹಾತಲಗೇರಿ ನಾಕಾ, ಟಿಪ್ಪು ವೃತ್ತ ಸೇರಿ ನಗರದ ಪ್ರಮುಖ ವೃತ್ತ ಹಾಗೂ ಪ್ರದೇಶಗಳಲ್ಲಿ ದಲಿತ ಮುಖಂಡರು ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಬಂದ್ ಆಚರಿಸಿದರು.

# ದೆಹಲಿ ಪರೇಡ್‌ಗೆ ಬ್ರಹ್ಮ ಜಿನಾಲಯ ಸ್ತಬ್ಧಚಿತ್ರ: ಗತ ವೈಭವ ಸಾರಲಿದೆ ಟ್ಯಾಬ್ಲೊ

## ಬ್ರಹ್ಮ ಜಿನಾಲಯ ಕ್ರಿ.ಶ. 11ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಪ್ಪು ಶಿಲೆಯಿಂದ ನಿರ್ಮಿಸಲಾಗಿದೆ

• ಉದಯವಾಹಿನಿ, ಗದಗ

ದೆಹಲಿಯಲ್ಲಿ 2025ರ ಜನವರಿ 26ರಂದು ಆಚರಿಸುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯದ ಗದಗ ಜಿಲ್ಲೆಯ ಲಕ್ಕುಂಡಿ (ಲೊಕ್ಕಿಗುಂಡಿ)ಯ ಕ್ರಿ.ಶ. 11ನೇ ಶತಮಾನದ ಕಪ್ಪುಶಿಲೆಗೆ ಅವಕಾಶ ಒಲಿದು ಬಂದಿದೆ.


ಐತಿಹಾಸಿಕ ಬ್ರಹ್ಮ ಜಿನಾಲಯ (ಅತ್ತಿಮಬ್ಬೆ ಜಿನಾಲಯ) ಸ್ತಬ್ಧ ಚಿತ್ರವು ದೇಶದ ಜನತೆಗೆ ಲಕ್ಕುಂಡಿ ಗತವೈಭವ ಸಾರಲಿದೆ. ಜಿಲ್ಲೆಯ ಐತಿಹಾಸಿಕ ದೇವಾಲಯಗಳಲ್ಲಿ ಒಂದಾಗಿರುವ ಬ್ರಹ್ಮ ಜಿನಾಲಯ ಕ್ರಿ.ಶ. 11ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಪ್ಪುಶಿಲೆಯಿಂದ ನಿರ್ಮಿಸಲಾಗಿದೆ. ದೆಹಲಿಯ ಕರ್ತವ್ಯಪಥದಲ್ಲಿ ನಡೆಯುವ ಪಥಸಂಚಲನದಲ್ಲಿ ರಾಜ್ಯ, ರಾಷ್ಟ್ರದ ಗಮನ ಸೆಳೆಯಲಿದೆ ಬ್ರಹ್ಮ ಜಿನಾಲಯದ ಮಾದರಿ.

**ರಾಷ್ಟ್ರದ ಗಮನ ಸೆಳೆಯಲಿದೆ**

ಬ್ರಹ್ಮ ಜಿನಾಲಯ ಪೂರ್ವಾಬಿಮುಖವಾಗಿ ನಿರ್ಮಾಣಗೊಂಡಿದೆ. ವಾಣಿಜ್ಯ ಉಡುಪಿ ಗರ್ಭಗೃಹ, ಅಂತರಾಳ, ಗೂಢಮಂಟಪ, ಅಗಮಂಟಪದಂತಹ ವಿನ್ಯಾಸದಿಂದ ಕೂಡಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಎತ್ತರವಾದ ಸಿಂಹಪೀಠದ ಮೇಲೆ ತೀರ್ಥಂಕರನ ಶಿಲ್ಪವಿದೆ. ಇಕ್ಕೆಲಗಳಲ್ಲಿ ಇಬ್ಬರು ಚಾಮರಧಾರಿಗಳಿದ್ದಾರೆ.

ಪೀಠದ ಸುತ್ತಲೂ ಮಕರ ತೋರಣದ ಅಲಂಕಾರವಿದ್ದು, ಮೇಲ್ಭಾಗದಲ್ಲಿ ರತ್ನತ್ರಯರ ಪ್ರತೀಕವಾದ ಮುಕ್ಕೊಡೆಯಿದೆ. ತೀರ್ಥಂಕರನನ್ನು ಸದ್ಯದಲ್ಲಿ ನೇಮಿನಾಥ ಎಂದು ಕರೆಯಲಾಗುತ್ತಿದೆ.

ಗರ್ಭಗೃಹಕ್ಕೆ ಹೊಂದಿಕೊಂಡು ಅಂತರಾಳವಿದ್ದು, ಮೂಲೆಗಳಲ್ಲಿ ಅರ್ಧಗಂಬಗಳಿವೆ. ಮುಂಭಾಗದಲ್ಲಿ ಎರಡು ಭದ್ರಕ ರೀತಿಯ ಸ್ತಂಭಗಳಿವೆ. ವಿತಾನವು ಸಮತಲವಾಗಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ಗೂಢಮಂಟಪವಿದೆ. ಮಧ್ಯದಲ್ಲಿ ನಾಲ್ಕು ಸ್ವತಂತ್ರ ಶ್ರೀಕಾರ ಸ್ತಂಭಗಳಿದ್ದು, ಪೀಠ, ಓಮ, ಕಾಂಡ ಮಾಲಾಸ್ನಾನ, ಕುಂಭ, ಕಲಶ, ಫಲಕ ಮತ್ತು ಬೋದಿಗೆ ಭಾಗಗಳನ್ನು ಹೊಂದಿವೆ. ಇಕ್ಕೆಲಗಳಲ್ಲಿ ಚತುರ್ಮುಖ ಬ್ರಹ್ಮ ಮತ್ತು ಪದ್ಮಾವತಿ ಯಕ್ಷಿಯ ಶಿಲ್ಪಗಳಿವೆ. ಸಮತಲ ವಿತಾನದ ಮಧ್ಯದಲ್ಲಿ ಪದ್ಮದ ಉಬ್ಬು ಅಲಂಕಾರವಿದೆ.



ಉದಯವಾಹಿನಿ ಚಿತ್ರ

> ಲಕ್ಕುಂಡಿ ಗ್ರಾಮದಲ್ಲಿ 16 ಜೈನ ಬಸದಿಗಳು, 5 ವೈಷ್ಣವ ದೇವಾಲಯಗಳು, 1 ಬೌದ್ಧ ಮಂದಿರ, 101 ದೇವಸ್ಥಾನ, 101 ಈಶ್ವರ ಲಿಂಗಗಳು, 101 ಬಾವಿಗಳು ಹಾಗೂ 22 ವೀರಶೈವ ಲಿಂಗಾಯತ ಮಠಗಳಿದ್ದವು ಎಂಬುದಾಗಿ ಶಿಲಾಶಾಸನಗಳಿಂದ ತಿಳಿದು ಬಂದಿದೆ. ಇತಿಹಾಸ ತಜ್ಞರು ಅವುಗಳ ಪತ್ತೆಗೆ ವಿಶೇಷ ಯೋಜನೆ ರೂಪಿಸುವಲ್ಲಿ ನಿರತರಾಗಿದ್ದಾರೆ.

**13 ಆರಕ್ಷಿತ ಸ್ಮಾರಕಗಳ ಸಂರಕ್ಷಣೆ**

ಐತಿಹಾಸಿಕ ಲಕ್ಕುಂಡಿ ಇತಿಹಾಸವನ್ನು ದೇಶಕ್ಕೆ ಪರಿಚಯಿಸಬೇಕೆಂಬ ಮಹದಾಸೆಯೊಂದಿಗೆ ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ವಿಶೇಷ ಆಸಕ್ತಿ ವಹಿಸಿ ವಿಶೇಷ 5 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿದ್ದ 13 ಆರಕ್ಷಿತ ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿ ಹಾಗೂ ಪ್ರಾಚ್ಯಾವಶೇಷಗಳ ಅನ್ವೇಷಣೆ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯರಾಗಿರುವ ಸಿದ್ಧಲಿಂಗೇಶ್ವರ ಪಾಟೀಲ. ಅ.ದ. ಕಟ್ಟಿಮನಿ ಹಾಗೂ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಅವರು ಸ್ಥಳದಲ್ಲೇ ಇದ್ದು ನಿರ್ವಹಣೆ ಮಾಡುತ್ತಿದ್ದಾರೆ.

**ಬ್ರಹ್ಮ ಜಿನಾಲಯದ ಬಾಹ್ಯ ವಾಸ್ತು:** ಈ ಬಸದಿಯ ಕಪೋತಬಂಧ, ಅಧಿಷ್ಠಾನವನ್ನು ಹೊಂದಿದ್ದು ಅದಕ್ಕೆ ಕ್ರಮವಾಗಿ ಖುರಕ, ಪದ್ಮ, ಅಂತರೀತ, ತ್ರಿಪಟ್ಟ ಕುಮುದ, ಅಂತರೀತ ಕಪೋತ ಮತ್ತು ಮಕರಪಟ್ಟಿಕೆ ಭಾಗಗಳಿವೆ. ಮಕರ ಪಟ್ಟಿಕೆಯಲ್ಲಿ ಪ್ರಾಣಿಗಳ ಮತ್ತು ಕೀರ್ತಿಮುಖಗಳ ಅಲಂಕಾರವಿದೆ ಹಾಗೂ ಕಪೋತದ ಮೇಲೆ ನಾಸಿಗಳ ಅಲಂಕಾರವಿದೆ.

ಗರ್ಭಗೃಹದ ಮೇಲಿನ ಶಿಖರವು ಚತುಸ್ತಲ ದ್ರಾವಿಡ ಮಾದರಿಯದಾಗಿದೆ. ಮೊದಲನೇ ಮಹಡಿಯಲ್ಲಿ ಹಾರವು ಕೂಟ, ಪಂಜರ, ಶಾಲಾಗಳಿಂದ ಕೂಡಿದೆ. ಕಪೋತದ ಮೇಲೆ ವೇದಿಕಾ ಇದೆ. ಕೂಟ ಮತ್ತು ಪಂಜರಗಳಲ್ಲಿ ಕೀರ್ತಿಮುಖಗಳ ಅಲಂಕಾರವಿದೆ. ಶಾಲಾದಲ್ಲಿ ಜಿನಬಿಂಬಗಳನ್ನು ಮತ್ತು ಶಿವ, ಸೂರ್ಯನ ಶಿಲ್ಪಗಳನ್ನು ಕಂಡರಿಸಲಾಗಿದೆ. ಎರಡು ಮತ್ತು ಮೂರನೇ ಮಹಡಿಗಳಲ್ಲಿಯೂ ಇದೇ ರೀತಿಯ ಹಾರದ ಅಲಂಕಾರವಿದೆ. ಅದರ ಮೇಲೆ ಕಪೋತವಿದೆ. ಮೇಲ್ಭಾಗದಲ್ಲಿ ಘಂಟಾ, ಕಲಶವಿದೆ. ಶಿಖರದ ಮುಂಭಾಗದಲ್ಲಿಯ ಶುಕನಾಸಿಯು ಗವಾಕ್ಷದ ಅಲಂಕಾರದಿಂದ ಕೂಡಿದ್ದು ಮಧ್ಯದಲ್ಲಿ ಶಿಲ್ಪವಿಲ್ಲ. ಅದರ ಮೇಲೆ ಕೀರ್ತಿ ಮುಖವಿದೆ.

# ಮತ್ತೊಂದು ಸುತ್ತಿನ ಕುಸ್ತಿಗೆ ಸಜ್ಜಾಗಬೇಕಿದೆ ಭಾರತ..!

## ಪಾಕ್-ಬಾಂಗ್ಲಾ ನಡುವಿನ ದೋಸ್ತಿಯಿಂದ ಭಾರತಕ್ಕೇನು ಅಪಾಯ ಕಾದಿದೆ? ಚಿತ್ತಗಾಂಗ್ ಬಂದರಿಗೆ ಆಗಮಿಸಿದ ಎರಡನೇ ಸರಕು ಸಾಗಾಣೆ ಹಡಗು



**ಹೆಚ್ಚುತ್ತಿದೆ ಪಾಕ್ -ಬಾಂಗ್ಲಾ ದೋಸ್ತಿ**

**ಢಾಕಾ:** ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಪಾಕಿಸ್ತಾನಕ್ಕೆ ಹತ್ತಿರವಾಗುತ್ತಿರುವ ಲಕ್ಷಣಗಳು ಕಂಡುಬರುತ್ತಿದ್ದು, ಉಭಯ ರಾಷ್ಟ್ರಗಳ ನಡುವಿನ ವ್ಯಾಪಾರ ಮತ್ತು ಕಡಲ ಸಂಬಂಧಗಳು ಬಲ ಗೊಳ್ಳುತ್ತಿರುವುದು ಭಾರತಕ್ಕೆ ಹೊಸ ಸವಾಲನ್ನು ತಂದೊಡ್ಡಿದೆ. ಭಾರತದೊಂದಿಗಿನ ಕಡಲ ಸಂಬಂಧಗಳ ಮರು ವಿಮರ್ಶೆಗೆ ಮುಂದಾಗಿರುವ ಬೆನ್ನಲ್ಲೇ, ಬಾಂಗ್ಲಾದೇಶವು ಪಾಕಿಸ್ತಾನದ ಕರಾಚಿಯಿಂದ ಎರಡನೇ ಸರಕು ಹಡಗನ್ನು ಸ್ವಾಗತಿಸಿರುವುದು ಇದೀಗ ಗಮನ ಸೆಳೆದಿದೆ.

ಪಾಕಿಸ್ತಾನದ ಕರಾಚಿಯಿಂದ ಹೊರಟಿದ್ದ ಪನಾಮ ಫ್ಲ್ಯಾಗ್ ಹಡಗು ಎಂವಿ ಯುವಾನ್ ಕ್ಸಿಯಾಂಗ್ ಫಾ ಝಾನ್', ಬಾಂಗ್ಲಾದೇಶದ ಜಲ ಪ್ರದೇಶವನ್ನು ಪ್ರವೇಶಿಸಿ ಚಿತ್ತಗಾಂಗ್ ಬಂದರನ್ನು ತಲುಪಲಿದೆ ಎಂದು ಬಾಂಗ್ಲಾದೇಶದ ಮಾಧ್ಯಮಗಳು ವರದಿ ಮಾಡಿವೆ. ಕರಾಚಿ, ದುಬೈ ಮಾರ್ಗವಾಗಿ ಸಂಚರಿಸಿ ಚಿತ್ತಗಾಂಗ್ ತಲುಪಿರುವ ಈ ಸರಕು ಹಡಗು, ಡಾಲಮೈಟ್ ಮತ್ತು ಮಾರ್ಬಲ್ ಬ್ಲಾಕ್‌ಗಳಂತಹ ಅಗತ್ಯ ಕೈಗಾರಿಕಾ ವಸ್ತುಗಳ 811 ಕಂಟೇನರ್‌ಗಳನ್ನು ಬಾಂಗ್ಲಾದೇಶಕ್ಕೆ ಸಾಗಿಸಿದೆ. ಇಷ್ಟೇ ಅಲ್ಲದೇ ಗಾರ್ಮೆಂಟ್ಸ್ ಕಚ್ಚಾ ವಸ್ತುಗಳು, ಸಕ್ಕರೆ, ಮತ್ತು ಎಲೆಕ್ಟ್ರಾನಿಕ್ ಉತ್ಪನ್ನಗಳನ್ನೂ ಈ ಹಡಗು ಹೊತ್ತು ತಂದಿದೆ ಎಂದು ಢಾಕಾ ಟ್ರಿಬ್ಯೂನ್ ಮತ್ತು ಡೈಲಿ ಅಬ್ಸರ್ವರ್ ವರದಿ ಮಾಡಿವೆ.

ಬಾಂಗ್ಲಾದೇಶದ ಹಂಗಾಮಿ ನಾಯಕ ಪ್ರೊಫೆಸರ್ ಮುಹಮ್ಮದ್ ಯೂನಸ್ ಅವರು, ಈಜಿಪ್ಟ್‌ನ ಕೈರೋದಲ್ಲಿ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಭೇಟಿಯಾದ ಒಂದು ದಿನದ ನಂತರ ಈ ಬೆಳವಣಿಗೆ ನಡೆದಿದೆ. ಭೇಟಿಯ ಸಂದರ್ಭದಲ್ಲಿ ಢಾಕಾ ಮತ್ತು ಇಸ್ಲಾಮಾಬಾದ್ ನಡುವಿನ ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಲು, ಈ ಇಬ್ಬರೂ ನಾಯಕರು ಸಹಮತಿ ಸೂಚಿಸಿದರು ಎಂದು ಮೂಲಗಳು ಖಚಿತಪಡಿಸಿವೆ.

ಚಿತ್ತಗಾಂಗ್ ಬಂದರು ಬಂಗಾಳ ಕೊಲ್ಲಿಯಲ್ಲಿ ಆಯಕಟ್ಟಿನ ಡಾಕಿಂಗ್ ತಾಣವಾಗಿದೆ. ಚಿತ್ತಗಾಂಗ್ ಬಂದರಿನಲ್ಲಿನ ಚಟುವಟಿಕೆಗಳ ಮೇಲೆ ಕಣ್ಣಿಡಲು ಭಾರತವು ನಿರಂತರವಾಗಿ ಪ್ರಯತ್ನ ನಡೆಸುತ್ತಲೇ ಇದೆ. ಅಲ್ಲಿ ಈ ವರ್ಷದಲ್ಲಿ ಸುಮಾರು 1,500 ಬಾಕ್ಸ್ ಚೀನೀ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಇಷ್ಟೇ ಅಲ್ಲದೇ ಪಾಕಿಸ್ತಾನದ ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್ (ಐಎಸ್‌ಐ), ಭಾರತದಲ್ಲಿ ನಿಷೇಧಿತ ಉಲ್ಫಾ ಭಯೋತ್ಪಾದಕ ಸಂಘಟನೆಗೆ ಅಂದಾಜು 4.5 ರಿಂದ 7 ಮಿಲಿಯನ್ ಅಮೆರಿಕನ ಡಾಲರ್ ಮೌಲ್ಯದ ನೆರವನ್ನು ರವಾನೆ ಮಾಡಲು ಚಿತ್ತಗಾಂಗ್ ಬಂದರನ್ನು ಬಳಸಿಕೊಂಡಿದೆ ಎಂಬ ಮಾತುಗಳೂ ಕೇಳಿಬಂದಿವೆ. ಬಾಂಗ್ಲಾದೇಶದಲ್ಲಿ ಇಸ್ಲಾಮಿ ಉಗ್ರವಾದದ ಪುನರುತ್ಥಾನವು ಭಾರತವನ್ನು ಗುರಿಯಾಗಿಸಬಹುದು ಮತ್ತು ಈಶಾನ್ಯ ರಾಜ್ಯಗಳಲ್ಲಿ ದಂಗೆಕೋರ ಗುಂಪುಗಳನ್ನು ಬೆಂಬಲಿಸಬಹುದು ಎಂಬ ಆತಂಕ ಇದೀಗ ಎದುರಾಗಿದೆ. ಅಲ್ಲದೇ ಪಾಕಿಸ್ತಾನದಿಂದ ಹಡಗಿನ ಮೂಲಕ ಚಿತ್ತಗಾಂಗ್ ಬಂದರು ಸೇರುವ ಸರಕುಗಳ ಭೌತಿಕ ಪರಿಶೀಲನೆ ನಿಯಮವನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಹಿಂಪಡೆದಿರುವುದು ಭಾರತದ ಚಿಂತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಬಾಂಗ್ಲಾದೇಶದಲ್ಲಿ ಈ ಮೊದಲು ಪ್ರಧಾನಿ ಶೇಖ್ ಹಸೀನಾ ಆಡಳಿತಾವಧಿಯಲ್ಲಿ ನಿರ್ಬಂಧಿತ ವ್ಯಾಪಾರ ನೀತಿಯ ಅನ್ವಯ, ಪಾಕಿಸ್ತಾನದಿಂದ ಬರುವ ಸರಕುಗಳನ್ನು ಮಲೇಷ್ಯಾ, ಸಿಂಗಾಪುರ ಅಥವಾ ಶ್ರೀಲಂಕಾದಲ್ಲಿ ಆಫ್‌ಲೋಡ್ ಮಾಡಬೇಕಾಗಿತ್ತು. ಸೂಕ್ತ ಪರಿಶೀಲನೆ ಬಳಿಕ ಅವುಗಳನ್ನು ಬಾಂಗ್ಲಾದೇಶಕ್ಕೆ ಬರುವ ಇತರ ಹಡಗುಗಳಿಗೆ ವರ್ಗಾಯಿಸಿಬೇಕಾಗಿತ್ತು. ಅಲ್ಲದೇ ಚಿತ್ತಗಾಂಗ್ ಬಂದರಿಗೆ ಸಂಪರ್ಕ ಕಲ್ಪಿಸುವ ಸಮುದ್ರ ಮಾರ್ಗಗಳ ಮೇಲೆ ಭಾರತೀಯ ಅಧಿಕಾರಿಗಳು ನಿಗಾ ಇರಿಸಿದ್ದರು.

### ಭಾರತದ ಆತಂಕವೇನು?

**ಬಾಂಗ್ಲಾದೇಶದ ವ್ಯಾಪಾರಿಗಳು ಪಾಕಿಸ್ತಾನದಿಂದ ಸರಕುಗಳನ್ನು ಆಮದು ಮಾಡಿಕೊಳ್ಳುವಂತೆ ಅಲ್ಲಿನ ಮಧ್ಯಂತರ ಸರ್ಕಾರವು ಒತ್ತಡ ಹೇರುತ್ತಿದೆ.. ಎಂದು ದಿ ಎಕನಾಮಿಕ್ ಟೈಮ್ಸ್ ವರದಿ ಮಾಡಿದೆ. ಅಲ್ಲದೇ ಬಾಂಗ್ಲಾದೇಶದ ಹಡಗು ಸಚಿವಾಲಯವು ಚಿತ್ತಗಾಂಗ್ ಮತ್ತು ಮೊಂಗ್ಲಾ ಬಂದರುಗಳಿಗೆ ಭಾರತಕ್ಕೆ ಪ್ರವೇಶವನ್ನು ನೀಡುವ ಒಪ್ಪಂದವನ್ನು ಮರು ಪರಿಶೀಲನೆ ಒಳಪಡಿಸಲು ಚಿಂತನೆ ನಡೆಸುತ್ತಿದೆ.. ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.**

**ತನ್ನ ಅಸ್ತಿತ್ವದ ಇತಿಹಾಸ ಮರೆತಂತೆ ಕಾಣುತ್ತಿರುವ ಬಾಂಗ್ಲಾದೇಶ, ಭಾರತದ ಆಶ್ರಯದಿಂದ ಹೊರಬಂದು ಪಾಕಿಸ್ತಾನದ ಜೊತೆಗಿನ ತನ್ನ ರಾಜತಾಂತ್ರಿಕ ಸಂಬಂಧವನ್ನು ಗಟ್ಟಿಗೊಳಿಸುತ್ತಿದೆ. ಇದಕ್ಕೆ ಪುಷ್ಠಿ ಎಂಬಂತೆ ಪಾಕಿಸ್ತಾನದ ಕರಾಚಿಯಿಂದ ಹೊರಟ ಎರಡನೇ ಸರಕು ಸಾಗಾಣೆ ಹಡಗು, ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿಗೆ ಆಗಮಿಸಿದೆ. ಪಾಕಿಸ್ತಾನದೊಂದಿಗಿನ ವ್ಯಾಪಾರ ಮತ್ತು ಕಡಲ ಸಂಬಂಧಗಳ ವೃದ್ಧಿಗೆ ಮುಂದಡಿ ಇಟ್ಟಿರುವ ಬಾಂಗ್ಲಾದೇಶ, ಇದಕ್ಕಾಗಿ ಅಸ್ತಿತ್ವದಲ್ಲಿರುವ ನಿಯಮಗಳಲ್ಲಿ ಬದಲಾವಣೆ ಮಾಡುತ್ತಿದೆ. ಪಾಕ್-ಬಾಂಗ್ಲಾ ನಡುವಿನ ಈ ಸ್ನೇಹ ಸಂಬಂಧ ಭಾರತಕ್ಕೆ ತಂದೊಡ್ಡಬಹುದಾದ ಅಪಾಯದ ಕುರಿತು ಇಲ್ಲಿದೆ ವಿಸ್ತೃತ ವರದಿ.**

## ಇಸ್ಮಾಯಿಲ್ ಹನಿಯೆಹ್ ಹುಟ್ಟಡಗಿಸಿದ್ದು ನಾವೇ ಎಂದು ಒಪ್ಪಿಕೊಂಡ ಇಸ್ರೇಲ್



**ಜೆರುಸಲೇಂ:** ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ ಅವರು ಜುಲೈನಲ್ಲಿ ಇರಾನ್ನಲ್ಲಿ, ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆಹ್ ನನ್ನ ಕೊಂದಿದ್ದು ಇಸ್ರೇಲ್ ಎಂದು ಮೊದಲ ಬಾರಿಗೆ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಇದೇ ಸಮಯದಲ್ಲಿ ಯೆಮೆನ್ನಲ್ಲಿ ಹೌತಿ ಬಂಡುಕೋರರ ನಾಯಕತ್ವವನ್ನು ಶಿರಚ್ಛೇಧನ ಮಾಡುವುದಾಗಿ ಎಚ್ಚರಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಅವರು, ನಾವು ಆತಾಹುತಿಗಳ ಮೇಲೆ ಬಲವಾಗಿ ದಾಳಿ ನಡೆಸಲಿದ್ದೇವೆ ಮತ್ತು ಅವರ ನಾಯಕತ್ವವನ್ನು ಶಿರಚ್ಛೇದ ಮಾಡುತ್ತೇವೆ ಎಂದರು.

ನಾವು ಟೆಹ್ರಾನ್, ಗಾಜಾ ಮತ್ತು ಲೆಬನಾನ್ನಲ್ಲಿ ಹನಿಯೆಹ್, ಸಿನ್ವಾರ್ ಮತ್ತು ನಸ್ರಲ್ಲಾನ ಹತ್ಯೆ ಮಾಡಿದಂತೆ ಹೊಡೆದಾಹ್, ಸನಾದಲ್ಲಿ ಮಾಡುತ್ತೇವೆ ಎಂದು ಇಸ್ರೇಲ್ ಕಾಟ್ಜ ಹೇಳಿದ್ದಾರೆ. ಯೆಮೆನ್‌ನಲ್ಲಿನ ಇರಾನ್ ಬೆಂಬಲಿತ ಗುಂಪು ಇಸ್ರೇಲ್‌ನ ಮೇಲೆ ನೌಕಾ ದಿಗ್ಬಂಧನ ಮಾಡಲು ಒಂದು ವರ್ಷಕ್ಕೂ ಅಧಿಕ ಕಾಲದಿಂದ ನಿರಂತರವಾಗಿ ಕೆಂಪು ಸಮುದ್ರದಲ್ಲಿ ವಾಣಿಜ್ಯ ಹಡಗುಗಳ ಮೇಲೆ ದಾಳಿ ಮಾಡುತ್ತಿದೆ. ಗಾಜಾದ ಮೇಲೆ ನಾವು ಹಿಡಿತ ಸಾಧಿಸಿದ್ದೇವೆ ಎಂದು ಹೇಳಿದರು. ಜುಲೈ 31 ರಂದು ಟೆಹ್ರಾನ್ನ ಅತಿಥಿಗೃಹದಲ್ಲಿ ಸಂಭವಿಸಿದ ಸ್ಫೋಟದಲ್ಲಿ ಹನಿಯೆಹ್ ಕೊಲ್ಲಲ್ಪಟ್ಟಿದ್ದ. ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಹನಿಯೆಹ್ ಆಗಮನದ ವಾರಗಳ ಮೊದಲು ಇಸ್ರೇಲಿ ಕಾರ್ಯಕರ್ತರು ಸ್ಫೋಟಕಗಳನ್ನು ಇರಿ ಸಿದ್ದರು ಎಂದು ವರದಿಯಾಗಿದೆ. ತಿಂಗಳುಗಳ ನಂತರ, ಗಾಜಾದಲ್ಲಿ ಇಸ್ರೇಲಿ ಪಡೆಗಳು ಹನಿಯೆ ಅವರ ಉತ್ತರಾಧಿಕಾರಿ ದಕ್ಷಿಣ ಗಾಜಾ ಪಟ್ಟಿಯ ಕಾರ್ಯಾಚರಣೆಯಲ್ಲಿ ಹಮಾಸ್ ಭಯೋತ್ಪಾದಕ ಸಂಘಟನೆಯ ನಾಯಕ ಯಾಹ್ಯಾ ಸಿನ್ವಾರ್‌ನ್ನು ಹತ್ಯೆ ಮಾಡಿದೆ ಎಂದು ಇಸ್ರೇಲಿ ಮಿಲಿಟರಿ ಹೇಳಿತ್ತು. ಆತನ ಅವರ ಸಾವನ್ನು ಹಮಾಸ್ ದೃಢಪಡಿಸಿರಲಿಲ್ಲ.

ಅಕ್ಟೋಬರ್ 7, 2023 ರಂದು ಹಮಾಸ್ ಮೊದಲ ಬಾರಿಗೆ ಇಸ್ರೇಲ್ ಮೇಲೆ ದಾಳಿ ನಡೆಸಿ ಹಲವರನ್ನು ಹತ್ಯೆ ಮಾಡಿತ್ತು. ಅಷ್ಟೇ ಅಲ್ಲದೆ ಹಮಾಸ್ ಉಗ್ರರು 250 ಮಂದಿಯನ್ನು ಒತ್ತೆಯಾಳಾಗಿರಿಸಿಕೊಂಡಿದ್ದರು. ಇದರಿಂದ ಎರಡು ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿತ್ತು. ಇದಕ್ಕೆ ಪ್ರತೀಕಾರವಾಗಿ ಇಸ್ರೇಲ್ ಹಮಾಸ್ ಮೇಲೆ ಪದೇ ಪದೇ ದಾಳಿ ನಡೆಸುತ್ತಲೇ ಇದೆ. ಇಸ್ರೇಲ್ ಮೂರು ವಾರಗಳವರೆಗೆ ಗಾಜಾದ ಮೇಲೆ 6000 ಬಾಂಬ್‌ಗಳನ್ನು ಹಾಕಿತ್ತು.

### ಗಾಜಾ ನಡುವಿನ ಸಂಘರ್ಷ

**ನಂತರ ಈ ಬಗ್ಗೆ ಹಮಾಸ್ ಸ್ಪಷ್ಟನೆ ನೀಡಿದ್ದು, ತಮ ನಾಯಕನ ಸಾವನ್ನು ಖಚಿತಪಡಿಸಿತ್ತು. ಅಕ್ಟೋಬರ್ 7, 2023ರಂದು ಇಸ್ರೇಲ್ ಮೇಲಿನ ದಾಳಿಯ ಹಿಂದಿನ ಮಾಸ್ಟರ್ ಮೈಂಡ್ ಸಿನ್ವಾರ್ ಎಂದು ಹೇಳಲಾಗಿತ್ತು. ಇದಾದ ನಂತರ ಇಸ್ರೇಲ್, ಗಾಜಾ ನಡುವಿನ ಸಂಘರ್ಷ ಉಲ್ಬಣಗೊಂಡಿತು.**

## ಹಸೀನಾ ವಿರುದ್ಧ ಮತ್ತೊಂದು ಭ್ರಷ್ಟಾಚಾರದ ಆರೋಪ




**ಢಾಕಾ:** ರೂಪುರ್ ಅಣು ವಿದ್ಯುತ್ ಸ್ಥಾವರದಲ್ಲಿ 5 ಶತಕೋಟಿ ಡಾಲರ್ ದುರುಪಯೋಗಪಡಿಸಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಕುಟುಂಬದ ವಿರುದ್ಧ ಭ್ರಷ್ಟಾಚಾರ ವಿರೋಧಿ ಸಮಿತಿಯು ತನಿಖೆಯನ್ನು ಪ್ರಾರಂಭಿಸಿದೆ ಎಂದು ವರದಿಯಾಗಿದೆ.

ಬಾಂಗ್ಲಾದೇಶದಲ್ಲಿ ರಷ್ಯಾದ ಸರ್ಕಾರಿ ಸಂಸ್ಥೆಯಾದ ರೊಸಾಟಮ್ ನಿರ್ಮಿಸುತ್ತಿರುವ ರೂಪುರ್ ಪರಮಾಣು ವಿದ್ಯುತ್ ಸ್ಥಾವರವನ್ನು ನಿರ್ಮಿಸುವಲ್ಲಿ ಭಾರತೀಯ ಕಂಪನಿಗಳು ಭಾಗವಹಿಸುತ್ತಿವೆ. ಮೊದಲ ಬಾಂಗ್ಲಾದೇಶದ ಪರಮಾಣು ವಿದ್ಯುತ್ ಸ್ಥಾವರ, ರಷ್ಯಾ ವಿನ್ಯಾಸಗೊಳಿಸಿದ ರೂಪುರ್, ಬಾಂಗ್ಲಾದೇಶದ ರಾಜಧಾನಿ ಢಾಕಾದಿಂದ ಪಶ್ಚಿಮಕ್ಕೆ 160 ಕಿಮೀ ದೂರದಲ್ಲಿ ನಿರ್ಮಿಸಲಾಗುತ್ತಿದೆ.

ಹಸೀನಾ ಜೊತೆಗೆ ಅವರ ಮಗ ಸಜೀಬ್ ವಾಝೆದ್ ಜಾಯ್, ಆಕೆಯ ಸೋದರ ಸೊಸೆ, ಯುಕೆ ಖಜಾನೆ ಸಚಿವ ಟುಲಿಪ್ ಸಿದ್ದಿಕ್ ಅವರನ್ನು ಸಹ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ವರದಿಯಾಗಿದೆ.ರೂಪುರ್ ಪರಮಾಣು ವಿದ್ಯುತ್ ಸ್ಥಾವರ ಯೋಜನೆಯಲ್ಲಿ 5 ಶತಕೋಟಿ ಡಾಲರ್ ದುರುಪಯೋಗದ ಆರೋಪವಿದೆ ಎಂದು ವರದಿ ಸೇರಿಸಲಾಗಿದೆ.

ಹಸೀನಾ, ಜಾಯ್ ಮತ್ತು ಟುಲಿಪ್ ಅವರು ರೂಪುರ್ ಪರಮಾಣು ವಿದ್ಯುತ್ ಸ್ಥಾವರ ಯೋಜನೆಯಿಂದ ಮಲೇಷಿಯಾದ ಬ್ಯಾಂಕ್‌ಗೆ 5 ಶತಕೋಟಿ ಡಾಲರ್‌ಗಳನ್ನು ವರ್ಗಾಯಿಸಿದ ಆರೋಪದ ಬಗ್ಗೆ ಭ್ರಷ್ಟಾಚಾರ ನಿಗ್ರಹ ಆಯೋಗದ (ಎಸಿಸಿ) ನಿಷ್ಕ್ರಿಯತೆ ಏಕೆ ಎಂದು ಪ್ರಶ್ನಿಸಿ ಹೈಕೋರ್ಟ್ ನಿಯಮವನ್ನು ಹೊರಡಿಸಿದ ಎರಡು ದಿನಗಳ ನಂತರ ಈ ಬೆಳವಣಿಗೆ ನಡೆದಿದೆ. ಎಸಿಸಿ ದಾಖಲೆಗಳ ಪ್ರಕಾರ, ರೂಪ್ಪರ್ ಪರಮಾಣು ವಿದ್ಯುತ್ ಸ್ಥಾವರ ಯೋಜನೆಯಲ್ಲಿನ ಭ್ರಷ್ಟಾಚಾರದ ಆರೋಪಗಳನ್ನು ನ್ಯಾಷನಲ್ ಡೆಮಾಕ್ರಟಿಕ್ ಮೂವ್‌ಮೆಂಟ್ (ಎನ್‌ಡಿಎಂ) ಅಧ್ಯಕ್ಷ ಬಾಬಿ ಹಜ್ಜಾಜ್ ಅವರು ಬೆಳಕಿಗೆ ತಂದಿದ್ದಾರೆ.

## ವಂದೇ ಭಾರತ್ ಸ್ಲೀಪರ್ ಕೋಚ್ ಸೇವೆ ಆರಂಭ



**ಗ್ವಾಲಿಯರ್:** ಬಹುನಿರೀಕ್ಷಿತ ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಸಂಚಾರ ಆರಂಭಗೊಂಡಿದೆ. ಪ್ರಯಾಣಿಕರ ಬಹುನಿರೀಕ್ಷಿತ ರೈಲು ಮಧ್ಯಪ್ರದೇಶದ ಖಜುರಾಹೊ ರೈಲು ವಿಭಾಗ ಮತ್ತು ಉತ್ತರ ಪ್ರದೇಶದ ಮಹೋಬಾ ರೈಲು ವಿಭಾಗಗಳ ನಡುವೆ ಶನಿವಾರ -ಭಾನುವಾರ ಎರಡು ದಿನಗಳ ಕಾಲ ಪರೀಕ್ಷಾರ್ಥವಾಗಿ ಯಶಸ್ವಿ ಸಂಚಾರ ನಡೆಸಿತು. ದೇಶದ ಮೊದಲ ವಂದೇ ಭಾರತ್ ಸ್ಲೀಪರ್ ಕೋಚ್ ರೈಲು ಪ್ರಯಾಣವನ್ನು ಎಸ್‌ಆರ್‌ಡಿಒ ಫೀಲ್ಡ್‌ನ ಟ್ರಯಲ್ ರನ್ ಆಗಿ ಪೂರ್ಣಗೊಳಿಸಿದೆ.


**ಕಾರ್ಯಕ್ಷಮತೆ ಟೆಸ್ಟ್:** ಶುಕ್ರವಾರ ಸ್ಲೀಪರ್ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಮೊದಲ ರೇಖ್ಮಹೋಬಾವನ್ನು ತಲುಪಿತು. ಶನಿವಾರ ಮೊದಲ ಬಾರಿಗೆ ಟ್ರಯಲ್ ರನ್ ನಡೆಸಿ, ಕಾರ್ಯಕ್ಷಮತೆಯ ಪರೀಕ್ಷೆ ನಡೆಸಲಾಯಿತು. ಮಹೋಬಾ ಮತ್ತು ಖಜುರಾಹೊ ರೈಲು ವಿಭಾಗದ ನಡುವೆ ಈ ಪರೀಕ್ಷಾರ್ಥ ಸಂಚಾರ ಕೈಗೊಳ್ಳಲಾಗಿತ್ತು. ಸ್ಲೀಪರ್ ಕೋಚ್ ರೈಲಿನ ಯಶಸ್ವಿ ಪ್ರಯೋಗವನ್ನು ಭಾನುವಾರ ಮತ್ತೊಮೆ ನಡೆಸಲಾಯಿತು.

**ಗಂಟೆಗೆ 160-200 ಕಿಮೀ ವೇಗ:** ಟ್ರಯಲ್ ರನ್ ಸಮಯದಲ್ಲಿ ಎಸ್‌ಆರ್ಡಿಒ ಜೊತೆಗೆ, ರೈಲ್ವೇಸ್, ಐಸಿಎಫ್ ಚೆನ್ನೈನ ತಾಂತ್ರಿಕ ತಂಡವೂ ಉಪಸ್ಥಿತವಿತ್ತು. ಸ್ಲೀಪರ್ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ತಾಂತ್ರಿಕ ಅಂಶಗಳ ಜತೆ ಜತೆಗೆ, ಅದರ ವೇಗ, ಉಪಕರಣಗಳ ತಾಂತ್ರಿಕ ಕಾರ್ಯಕ್ಷಮತೆಗಳ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ನಡೆಸಲಾಯಿತು.

ಇದೇ ವೇಳೆ, ರಕ್ಷಾಕವಚ ರಕ್ಷಣಾ ವ್ಯವಸ್ಥೆಯ ಪ್ರಾತ್ಯಕ್ಷಿಕೆಯೂ ನಡೆಯಿತು. ಶನಿವಾರದ ಟ್ರಯಲ್ ರನ್ ವೇಳೆ ವಂದೇ ಭಾರತ ಸ್ಲೀಪರ್ ಕೋಚ್ ಗಂಟೆಗೆ 115 ಕಿಲೋಮೀಟರ್ ವೇಗದಲ್ಲಿ ಹಳಿ ಮೇಲೆ ಓಡಿದರೆ, ಭಾನುವಾರದ ಪ್ರಯೋಗದ ವೇಳೆ, ಗಂಟೆಗೆ 130 ಕಿಲೋಮೀಟರ್ ವೇಗದಲ್ಲಿ ಪರೀಕ್ಷೆ ಕೈಗೊಳ್ಳಲಾಗಿದೆ. ಸಾಮಾನ್ಯವಾಗಿ ಸ್ಲೀಪರ್ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಗಂಟೆಗೆ 160 ರಿಂದ 200 ಕಿಮೀ ವೇಗದಲ್ಲಿ ಸಂಚರಿಸಲಿದೆ ಎಂದು ನಂಬಲಾಗಿದೆ. ಪ್ರಸ್ತುತ ರೈಲ್ವೆಯಿಂದ 10 ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ.

ರೈಲ್ವೆ ಇಲಾಖೆ ಮುಂಬರುವ ಸಮಯದಲ್ಲಿ ಭಾರತದಲ್ಲಿ 200 ವಂದೇ ಭಾರತ್ ಸ್ಲೀಪರ್ ರೈಲುಗಳನ್ನು ಪ್ರಾರಂಭಿಸಲು ಯೋಜಿಸಿದೆ. ಈ ರೈಲುಗಳು ದೀರ್ಘ ಮತ್ತು ಮಧ್ಯಮ ದೂರದ ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಇದು ಪ್ರಯಾಣಿಕರಿಗೆ ಆರಾಮದಾಯಕ ಪ್ರಯಾಣದ ಅನುಭವ ನೀಡುತ್ತದೆ.

## ಬಾಸ್ ಜೊತೆ ಲೈಂಗಿಕ ಸಂಪರ್ಕಕ್ಕೆ ಒಪ್ಪದ ಪತ್ನಿಗೆ ತಲಾಕ್ ನೀಡಿದ ಪತಿರಾಯ..!



**ಪುಣೆ:** ತನ್ನ ಕಂಪನಿಯ ಬಾಸ್ ಜೊತೆ ಲೈಂಗಿಕ ಕ್ರಿಯೆ ನಡೆಸಲು ಒಪ್ಪಲಿಲ್ಲ ಎಂಬ ಕಾರಣಕ್ಕಾಗಿ ಪತಿ ತನ್ನ ಹೆಂಡತಿಗೆ ತಲಾಕ್ ನೀಡಿರುವ ಪ್ರಕರಣ ಪುಣೆಯಲ್ಲಿ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸಾಫ್ಟ್‌ವೇರ್ ಇಂಜಿನಿಯರ್ ಸೋಹೆಲ್ ಶೇಖ್ ಎಂಬಾತನ ವಿರುದ್ಧ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಿದ್ದಾರೆ.

ಖಾಸಗಿ ಕಂಪನಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪತ್ನಿಗೆ ತನ್ನ ಕಂಪನಿಯ ಬಾಸ್ ಜೊತೆ ಲೈಂಗಿಕ ಕ್ರಿಯೆ ನಡೆಸಿದರೆ ಪ್ರತಿ ತಿಂಗಳು 15 ಸಾವಿರ ರೂ. ಹಣ ನೀಡುತ್ತಾರೆಂದು ಪುಸಲಾಯಿಸಿದ್ದ. ಆದರೆ ಈ ಬಗ್ಗೆ ಹೆಂಡತಿ ಒಪ್ಪದಿದ್ದಾಗ ಹಿಂದೆಮುಂದೆ ನೋಡದೆ ಪತಿರಾಯ ತಲಾಕ್ ತಲಾಕ್ ಎಂದು ಕೂಗಿದ. ಇದರಿಂದ ರೊಚ್ಚುಗೆದ್ದ ಹೆಂಡತಿ ಆತನ ವಿರುದ್ಧ ದೂರು ನೀಡಿದ್ದಾಳೆ. ಅಂದಹಾಗೆ ಈ ಪತಿರಾಯನಿಗೆ ಇಬ್ಬರು ಹೆಂಡತಿಯರು.

ವಿವಾಹ ಸಂದರ್ಭದಲ್ಲಿ ತನಗೆ ಪ್ರತಿ ತಿಂಗಳು 15 ಲಕ್ಷ ಸಂಬಳ ಬರುತ್ತದೆ ಎಂದು ಪುಸಲಾಯಿಸಿದ್ದ ಈತ ನಿಜಬಣ್ಣವೂ ಅಷ್ಟೇ ಬೇಗನೆ ಕಳಚಿಬಿದ್ದಿತ್ತು. ಅಷ್ಟೇ ಅಲ್ಲದೆ ಎರಡನೇ ಪತ್ನಿ ಬಳಿ ಆಕೆಯ ಪೋಷಕರ ಮನೆಯಿಂದ 15 ಲಕ್ಷ ರೂ. ತರುವಂತೆ ಒತ್ತಡ ಹಾಕಿದ್ದ. ಆಕೆಗೂ ಆತ ತಲಾಖ್ ನೀಡಿದ್ದಾನೆ. ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 115(2), 351(2), 351(3) ಮತ್ತು 352 ಮತ್ತು ಮುಸ್ಲಿಂ ಮಹಿಳೆಯರ (ಮದುವೆಯ ಹಕ್ಕುಗಳ ರಕ್ಷಣೆ) ಕಾಯ್ದೆ, 2019ರ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಂತ್ರಸ್ತೆ ಈ ವರ್ಷದ ಜನವರಿಯಲ್ಲಿ ಮದುವೆಯಾಗಿದ್ದರು. ಪತಿ ಹಣಕ್ಕಾಗಿ ಕಿರುಕುಳ ನೀಡಲು ಪ್ರಾರಂಭಿಸುವ ಮೊದಲು ಹೆಂಡತಿ ಮೊದಲ ಕೆಲವು ತಿಂಗಳು ಸಂತೋಷದ ಜೀವನ ಸಾಗಿಸುತ್ತಿದ್ದರು.

ಮೊದಲ ಪತ್ನಿಗೆ ವಿಚ್ಛೇದನ ನೀಡಲು 15 ಲಕ್ಷ ರೂ. ಬೇಕು ಎಂದು ಪತಿ ಹೇಳಿದ್ದು, ಆ ಮೊತ್ತವನ್ನು ಪೋಷಕರಿಂದ ಪಡೆಯಲು ಎರಡನೇ ಪತ್ನಿಗೆ ಪೀಡಿಸಿದ್ದಾನೆ. ತನ್ನ ಬಾಸ್ ಜೊತೆ ಮಲಗಲು ನಿರಾಕರಿಸಿದ ನಂತರ ಪತಿ ತನ್ನ ಎರಡನೇ ಹೆಂಡತಿಗೆ ದೈಹಿಕವಾಗಿ ಕಿರುಕುಳ ನೀಡಿದ್ದಾನೆ. ತಕ್ಷಣ ತಲಾಖ್ ನೀಡಿದ ಬಳಿಕ ಪತ್ನಿಯನ್ನು ಮನೆಯಿಂದ ಹೊರ ಹಾಕಿದ್ದಾನೆ.

## ದೀದಿ ಸರ್ಕಾರದ ವಿರುದ್ಧ ತಸ್ಲೀಮಾ ನಸ್ರಿನ್ ಆಕ್ರೋಶ



**ಕೋಲ್ಕತ್ತಾ:** ತನ್ನ ಕಾದಂಬರಿಯಿಂದ ರೂಪಾಂತರಗೊಂಡ ಲಜ್ಜಾ (ನಾಚಿಕೆ) ನಾಟಕವನ್ನು ಎರಡು ಚಿತ್ರಮಂದಿರಗಳಲ್ಲಿ ಬಲವಂತವಾಗಿ ರದ್ದುಗೊಳಿಸುವ ಮೂಲಕ ಪಶ್ಚಿಮ ಬಂಗಾಳ ಸರ್ಕಾರ ಕಲಾವಿದರು ಮತ್ತು ಬರಹಗಾರರ ಧ್ವನಿಯನ್ನು ಹತ್ತಿಕ್ಕುತ್ತಿದೆ ಎಂದು ಬಾಂಗ್ಲಾದೇಶದಿಂದ ಗಡಿಪಾರಾಗಿರುವ ಲೇಖಕಿ ತಸ್ಲೀಮಾ ನಸ್ರಿನ್ ಆರೋಪಿಸಿದ್ದಾರೆ.

ಉತ್ತರ 24 ಪರಗಣದ ಗೋಬರ್ಡಂಗ ನಾಟ್ಯೋತ್ಸವ್, ಹೂಗ್ಲಿಯ ಪಾಂಡುವಾ ನಾಟ್ಯೋತ್ಸವದಲ್ಲಿ ಪ್ರದರ್ಶಿಸಲಾಗುತ್ತಿದ್ದ ಲಜ್ಜಾ ನಾಟಕವನ್ನು ಪೊಲೀಸರು ಕೋಮುಗಲಭೆಗಳನ್ನು ಪ್ರಚೋದಿಸಬಹುದು ಎಂಬ ಕಳವಳದಿಂದ ರದ್ದು ಪಡಿಸಲು ಒತ್ತಾಯಿಸಿದ್ದಾರೆ ಎಂದು ನಸ್ರಿನ್ ಆರೋಪಿಸಿದ್ದಾರೆ.

ಎರಡು ತಿಂಗಳ ಹಿಂದೆ ನಾಟಕದ ವೇಳಾಪಟ್ಟಿಯನ್ನು ಪ್ರಕಟಿಸಿದಾಗ, ಇದ್ದಕ್ಕಿದ್ದಂತೆ ಪೊಲೀಸರು ಲಜ್ಜ ನಾಟಕವನ್ನು ಪಟ್ಟಿಯಿಂದ ಕೈಬಿಡುವಂತೆ ಸಂಘಟಕರ ಮೇಲೆ ಒತ್ತಡ ತಂದಿದ್ದಾರೆ. ನಾನು ನಿಮಗೆ ನೆನಪಿಸುತ್ತೇನೆ, ದೆಹಲಿಯಲ್ಲಿ ನಾಟಕ ತಂಡವು ಮೂರು ಬಾರಿ ಅದೇ ನಾಟಕವನ್ನು ಪ್ರದರ್ಶಿಸಿತು. ತುಂಬಿದ ಸಭಾಂಗಣದ ಮುಂದೆ ಎಂದು ಅವರು ಎಕ್ಸ್ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ನಾಟಕವು ಹಿಂಸಾಚಾರಕ್ಕೆ ಕಾರಣವಾಗಬಹುದು ಎಂಬ ಕಾರಣಕ್ಕಾಗಿ ತಡೆ ಹಿಡಿದಿರುವುದನ್ನು ಪಶ್ಚಿಮ ಬಂಗಾಳದ ಆಡಳಿತವನ್ನು ನಸ್ರಿನ್ ಟೀಕಿಸಿದರು. ಅವರ ನೀತಿಗಳನ್ನು ವಿರೋಧಿಸುವ ಬುದ್ಧಿಜೀವಿಗಳನ್ನು ಮೌನವಾಗಿಸುವ ಸಂದರ್ಭದಲ್ಲಿ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದಲ್ಲಿ ಹಿಂದೂ ಪೂಜಾ ಸ್ಥಳಗಳ ಮೇಲಿನ ದಾಳಿ ಮತ್ತು ವಿಗ್ರಹಗಳನ್ನು ಅಪವಿತ್ರಗೊಳಿಸುವುದನ್ನು ನಿರ್ಲಕ್ಷಿಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

### ಕ್ರಮ ತೆಗೆದುಕೊಳ್ಳುತ್ತಿಲ್ಲ

**ನನ್ನ ಉಪಸ್ಥಿತಿಯು ಮೂಲಭೂತವಾದಿಗಳ ಗಲಭೆಗಳಿಗೆ ಪ್ರಚೋದಿಸುತ್ತದೆ ಎಂಬ ಆತಂಕದಿಂದ ನಾನು ಪಶ್ಚಿಮ ಬಂಗಾಳವನ್ನು ತೊರೆಯಬೇಕಾಯಿತು. ಗಲಭೆಕೋರರ ವಿರುದ್ಧ ಏಕೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಮತ್ತು ಬರಹಗಾರರ ಮುಕ್ತ ಅಭಿವ್ಯಕ್ತಿಯ ಧ್ವನಿಯನ್ನು ಏಕೆ ನಾಶಪಡಿಸಲಾಗುತ್ತಿದೆ ಎಂದು ನನಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ವಿಷಾದಿಸಿದರು.**

**ನಸ್ರಿನ್ ಅವರ ಹೇಳಿಕೆಗಳನ್ನು ಬಿಜೆಪಿ ಬೆಂಬಲಿಸಿತು, ಕೇಂದ್ರ ಸಚಿವ ಸುಕಾಂತ ಮಜುಂದಾರ್ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬೂಟಾಟಿಕೆ ಎಂದು ಆರೋಪಿಸಿದರು. ಬಾಂಗ್ಲಾದೇಶದ ಮೂಲಭೂತವಾದಿಗಳು ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳ ನಡುವಿನ ಸ್ವಲ್ಪ ವ್ಯತ್ಯಾಸವು ಅಸ್ತಿತ್ವದಲ್ಲಿಲ್ಲ, ಏಕೆಂದರೆ ಅವರು ಮೂಲಭೂತವಾದದ ವಿರುದ್ಧ ಪ್ರತಿಭಟನೆಯ ಜನಪ್ರಿಯ ವೇದಿಕೆಯ ನಾಟಕವನ್ನು ಅನುಮತಿಸುವುದಿಲ್ಲ, ಇದು ಗಲಭೆಗೆ ಕಾರಣವಾಗುತ್ತದೆ**

**-ಸುಕಾಂತ ಮಜುಂದಾರ್**
**ಕೇಂದ್ರ ಸಚಿವ**

# ಟೋಟಲ್ ಕಂಟ್ರೋಲ್ ಬಯಸಿದ ಟ್ರಂಪ್‌ಗೆ ಗ್ರೀನ್‌ಲ್ಯಾಂಡ್ ಖಡಕ್ ಜವಾಬು

## ಪನಾಮ ಕಾಲುವೆ ಮರುಸ್ವಾಧೀನ ಬಯಸಿದ ಅಮೆರಿಕದ ಚುನಾಯಿತ ಅಧ್ಯಕ್ಷ, ಗ್ರೀನ್‌ಲ್ಯಾಂಡ್ ಎಂದಿಗೂ ಮಾರಾಟಕ್ಕಿಲ್ಲ



**ಕೋಪನ್‌ಹೇಗನ್:** ಅಧಿಕಾರಕ್ಕೇರುವ ಮೊದಲೇ ವಿಶ್ವದ ವಿವಿಧ ಭಾಗಗಳ ಮೇಲೆ ಅಮೆರಿಕದ ಸಾರ್ವಭೌಮತ್ವಕ್ಕೆ ಬೇಡಿಕೆ ಇಡುತ್ತಿರುವ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಆರ್ಕ್ಟಿಕ್ ದ್ವೀಪ ರಾಷ್ಟ್ರ ಗ್ರೀನ್‌ಲ್ಯಾಂಡ್ ಮೇಲೆ ಸಂಪೂರ್ಣ ಹತೋಟಿ ಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಗ್ರೀನ್‌ಲ್ಯಾಂಡ್ ಪ್ರಧಾನಮಂತ್ರಿ ಮ್ಯೂಟ್ ಎಗೆಡೆ ಅವರು, ಟ್ರಂಪ್ ಆಗ್ರಹಕ್ಕೆ ಸೂಕ್ತ ಪ್ರತ್ಯುತ್ತರ ನೀಡಿದ್ದಾರೆ.

ಸ್ವೀಡನ್‌ನ ಮಾಜಿ ರಾಯಭಾರಿಯಾಗಿದ್ದ ಕೆನ್ ಹೌರಿ ಅವರನ್ನು, ಕೋಪನ್‌ಹೇಗನ್‌ಗೆ ತನ್ನ ರಾಯಭಾರಿಯಾಗಿ ಆಯ್ಕೆ ಮಾಡಿರುವುದಾಗಿ ಟ್ರಂಪ್ ಘೋಷಿಸಿದ್ದರು. ಡೆನ್ಮಾರ್ಕ್‌ನ ಅರೆ ಸ್ವಾಯತ್ತ ಭಾಗವಾದ, ಅಮೆರಿಕದ ದೊಡ್ಡ ವಾಯುಪಡೆಯ ನೆಲೆಗೆ ಆತಿಥ್ಯ ವಹಿಸಿರುವ ಗ್ರೀನ್‌ಲ್ಯಾಂಡ್‌ನ ಸ್ಥಿತಿಯ ಕುರಿತು ಇದೇ ವೇಳೆ ಟ್ರಂಪ್ ಪ್ರತಿಕ್ರಿಯಿಸಿದ್ದರು. ಪ್ರಪಂಚದಾದ್ಯಂತ ರಾಷ್ಟ್ರೀಯ ಭದ್ರತೆ ಮತ್ತು ಸ್ವಾತಂತ್ರ್ಯದ ಉದ್ದೇಶಗಳಿಗಾಗಿ, ಗ್ರೀನ್‌ಲ್ಯಾಂಡ್‌ನ ಮಾಲೀಕತ್ವ ಮತ್ತು ನಿಯಂತ್ರಣವು ಅಮೆರಿಕದ ಪ್ರಮುಖ ಆದ್ಯತೆಯಾಗಿದೆ.. ಎಂದು ಟ್ರಂಪ್ ತಮ್ಮ ಟ್ರೂಥ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದರು. ಟ್ರಂಪ್ ಅವರ ಈ ಹೇಳಿಕೆಗೆ ಡೆನ್ಮಾರ್ಕ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲವಾದರೂ, ಗ್ರೀನ್‌ಲ್ಯಾಂಡ್ ಪ್ರಧಾನಿ ಮಾತ್ರ ಇದು ಸಾಧ್ಯವಿಲ್ಲದ ಮಾತು ಎಂದು ಖಚಿತವಾಗಿ ಹೇಳಿದ್ದಾರೆ.

ಡ್ಯಾನಿಶ್ ರಾಜಧಾನಿ ಕೋಪನ್‌ಹೇಗನ್‌ಗಿಂತ ನ್ಯೂಯಾರ್ಕ್‌ಗೆ ಸಮೀಪದಲ್ಲಿರುವ ಗ್ರೀನ್‌ಲ್ಯಾಂಡ್ ರಾಜಧಾನಿ ನ್ಯೂಕ್, ಹೇರಳವಾಗಿ ಖನಿಜ, ತೈಲ ಮತ್ತು ನೈಸರ್ಗಿಕ ಅನಿಲ ಸಂಪತ್ತನ್ನು ಹೊಂದಿದೆ. ಇದೀಗ ಟ್ರಂಪ್ ಗ್ರೀನ್‌ಲ್ಯಾಂಡ್ ಮೇಲೆ ಹಿಡಿತ ಸಾಧಿಸಲು ಮುಂದಾಗಿರುವುದಕ್ಕೆ ಇಲ್ಲಿನ ನೈಸರ್ಗಿಕ ಸಂಪತ್ತೇ ಕಾರಣ ಎಂಬ ಮಾತುಗಳು ಕೇಳಿಬರುತ್ತಿವೆ.

2009ರಲ್ಲಿ ಡೆನ್ಮಾರ್ಕ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡ ಗ್ರೀನ್‌ಲ್ಯಾಂಡ್‌ನ್ನು ಖರೀದಿಸಲು, 2019ರ ತಮ್ಮ ಮೊದಲ ಆಡಳಿತಾವಧಿಯಲ್ಲಿ ಟ್ರಂಪ್ ಪ್ರಯತ್ನಪಟ್ಟಿದ್ದರು. ಆದರೆ ಟ್ರಂಪ್ ಅವರ ಪ್ರಸ್ತಾವನೆಯನ್ನು ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ಎರಡೂ ತಳ್ಳಿ ಹಾಕಿದ್ದವು.

**ಪನಾಮ ಕಾಲುವೆ ಮೇಲೂ ಟ್ರಂಪ್ ಕಣ್ಣು:** ಜಗತ್ತಿನ ಜನಪ್ರಿಯ ಪನಾಮ ಕಾಲುವೆ ಮೇಲೆ ಕಣ್ಣು ಹಾಕಿರುವ ಟ್ರಂಪ್, ಅದರ ಮರುಸ್ವಾಧೀನಕ್ಕೆ ಪ್ರಯತ್ನ ಆರಂಭಿಸುವುದಾಗಿ ಹೇಳಿದ್ದಾರೆ. ಪನಾಮ ಕಾಲುವೆಯಲ್ಲಿ ಚೀನಾದ ಪ್ರಭಾವ ಹೆಚ್ಚಾಗುತ್ತಿದ್ದು, ಇದನ್ನು ತಪ್ಪಿಸಲು ಕಾಲುವೆಯನ್ನು ಮರುಸ್ವಾಧೀನಪಡಿಸಿಕೊಳ್ಳುವುದಾಗಿ ಟ್ರಂಪ್ ಹೇಳಿದ್ದಾರೆ. ಮಧ್ಯ ಅಮೆರಿಕದ ಜಲಮಾರ್ಗವನ್ನು ಬಳಸಲು ಪನಾಮ ಹೆಚ್ಚಿನ ಸುಂಕವನ್ನು ವಿಧಿಸುತ್ತಿದೆ. ಅಲ್ಲದೇ ಚೀನಾ ಪನಾಮ ಕಾಲುವೆ ಮೇಲೆ ಹಿಡಿತ ಸಾಧಿಸಲು ಹವಣಿಸುತ್ತಿದೆ. ಹೀಗಾಗಿ ಪನಾಮ ಕಾಲುವೆಯನ್ನು ಅಮೆರಿಕ ಮರುಸ್ವಾಧೀನಪಡಿಸಿಕೊಳ್ಳುವುದು ಇಂದಿನ ತುರ್ತು ಅವಶ್ಯವಾಗಿದೆ ಎಂದು ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ.

### ಕೆನಡಾ ಮೇಲೆ ಟ್ರಂಪ್‌ಗೆ ಆಸೆ

**ಅದೇ ರೀತಿ ಕೆನಡಾ ಮೇಲಕೂ ಕಣ್ಣು ಹಾಕಿರುವ ಡೊನಾಲ್ಡ್ ಟ್ರಂಪ್, ಕೆನಡಾ ಅಮೆರಿಕದ 51ನೇ ರಾಜ್ಯವಾಗಬೇಕು ಎಂಬುದು ತಮ್ಮ ಬಯಕೆ ಎಂದು ಹೇಳಿದ್ದಾರೆ. ಆದರೆ ಈ ಕುರಿತು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಅಲ್ಲದೇ ಕೆನಡಾವನ್ನು ಅಮೆರಿಕಕ್ಕೆ ಸೇರಿಸುವ ಟ್ರಂಪ್ ಹೇಳಿಕೆ ಬಗ್ಗೆ ಅಮೆರಿಕನ್ನರಲ್ಲೇ ನಿರಾಸಕ್ತಿ ಎದ್ದು ಕಾಣುತ್ತಿದೆ. ಒಟ್ಟಿನಲ್ಲಿ ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನವೇ, ಗ್ರೀನ್‌ಲ್ಯಾಂಡ್, ಪನಾಮ ಕಾಲುವೆ ಮತ್ತು ಕೆನಡಾ ಮೇಲೆ ಹಕ್ಕು ಸಾಧಿಸಲು ಮುಂದಾಗಿರುವುದು ಜಾಗತಿಕವಾಗಿ ಚರ್ಚೆಗೆ ಒಳಪಟ್ಟಿದೆ.**

**ಗ್ರೀನ್‌ಲ್ಯಾಂಡ್ ಮೇಲೆ ಹಕ್ಕು ಸಾಧಿಸಲು ಮುಂದಾಗಿರುವ ಡೊನಾಲ್ಡ್ ಟ್ರಂಪ್ ಅವರಿಗೆ ಲಿಖಿತ ಪ್ರತ್ಯುತ್ತರ ನೀಡಿರುವ ಮ್ಯೂಟ್ ಎಗೆಡೆ, ಗ್ರೀನ್‌ಲ್ಯಾಂಡ್ ಮಾರಾಟಕ್ಕಿಲ್ಲ, ನಾವು ಮಾರಾಟಕ್ಕಿಲ್ಲ, ನಾವು ಎಂದಿಗೂ ಮಾರಾಟಕ್ಕಿಲ್ಲ. ಯಾವುದೇ ಬಾಹ್ಯ ಒತ್ತಡಕ್ಕೆ ಒಳಗಾಗಿ ನಾವು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಸಿದ್ಧರಿಲ್ಲ. ಎಂದು ಖಡಕ್ ಆಗಿ ಹೇಳಿದ್ದಾರೆ.**

## ಮಿನಿ ನ್ಯೂಸ್

### ಕ್ಯಾಲಿಫೋರ್ನಿಯಾದಲ್ಲಿ ಡ್ರಗ್ಸ್ ಸ್ಮಗ್ಲರ್ ಸುನೀಲ್ ಯಾದವ್ ಹತ್ಯೆ

**ಕ್ಯಾಲಿಫೋರ್ನಿಯಾ:** ರಾಜಸ್ಥಾನದಲ್ಲಿ ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಡ್ರಗ್ಸ್ ಸ್ಮಗ್ಲರ್ ಸುನೀಲ್ ಯಾದವ್ ಅಮೆರಿಕದ ಕ್ಯಾಲಿಫೋರ್ನಿಯಾದ ಸ್ಟಾಕ್‌ಟನ್ ನಗರದಲ್ಲಿ ನಡೆದ ಶೂಟೌಟ್‌ನಲ್ಲಿ ಹತರಾಗಿದ್ದಾರೆ. ಸುನಿಲ್ ಯಾದವ್ ಒಬ್ಬ ಕುಖ್ಯಾತ ಕಳ್ಳಸಾಗಣೆದಾರನಾಗಿದ್ದು, ಪಾಕಿಸ್ತಾನದ ಮಾರ್ಗದ ಮೂಲಕ ಭಾರತಕ್ಕೆ ಡ್ರಗ್ಸ್ ತಲುಪಿಸುತ್ತಿದ್ದ. ಕೆಲವು ವರ್ಷಗಳ ಹಿಂದೆ, 300 ಕೋಟಿ ರೂಪಾಯಿ ಮೌಲ್ಯದ ಮಾದಕವಸ್ತು ರವಾನೆಗೆ ಸಂಬಂಧಿಸಿದಂತೆ ಅವರ ಹೆಸರು ಹೊರಹೊಮ್ಮಿತ್ತು.

ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಭಾಗವಾಗಿದ್ದ ದರೋಡೆಕೋರ ರೋಹಿತ್ ಗೋಡಾರಾ ಸುನೀಲ್ ಯಾದವ್ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿದ್ದಾನೆ. ನಮ ಸಹೋದರ ಅಂಕಿತ್ ಭಾಡು ಅವರನ್ನು ಎನ್‌ಕೌಂಟರ್‌ನಲ್ಲಿ ಕೊಲ್ಲಲು ಪಂಜಾಬ್ ಪೊಲೀಸರೊಂದಿಗೆ ಕೆಲಸ ಮಾಡಿದ್ದ ಹೀಗಾಗಿ ನಾವು ಅವನ ಪ್ರತೀಕಾರ ತೀರಿಸಿಕೊಂಡಿದ್ದೇವೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಂಕಿತ್ ಭಾದು ಅವರ ಎನ್‌ಕೌಂಟರ್ ಸಾವಿನಲ್ಲಿ ಯಾದವ್ ಭಾಗಿಯಾಗಿದ್ದಾರೆ ಎಂಬ ಸುದ್ದಿ ಬಂದಾಗ ಯಾದವ್ ದೇಶದಿಂದ ಓಡಿಹೋಗಿದ್ದ ಎಂದು ಗೋದಾರಾ ಹೇಳಿದರು. ಭದ್ರತಾ ಸಂಸ್ಥೆಯ ಮೂಲಗಳ ಪ್ರಕಾರ, ಸುನಿಲ್ ಯಾದವ್ ಎರಡು ವರ್ಷಗಳ ಹಿಂದೆ ರಾಹುಲ್ ಎಂಬ ಹೆಸರಿನಲ್ಲಿ ನಕಲಿ ಪಾಸ್‌ಪೋರ್ಟ್ ಬಳಸಿ ಅಮೆರಿಕಕ್ಕೆ ಪಲಾಯನ ಮಾಡಿದ್ದರು. ಮೂಲತಃ ಪಂಜಾಬ್‌ನ ಫಾಜಿಲ್ಕಾ ಜಿಲ್ಲೆಯ ಅಬೋಹರ್‌ನವರಾದ ಸುನೀಲ್ ಯಾದವ್ ಒಂದು ಕಾಲದಲ್ಲಿ ಲಾರೆನ್ಸ್ ಬಿಷ್ಣೋಯ್ ಮತ್ತು ರೋಹಿತ್ ಗೋದಾರಾ ಅವರಿಗೆ ನಿಕಟರಾಗಿದ್ದರು. ಆದರೆ ಅಂಕಿತ್ ಭಾದು ಅವರ ಹತ್ಯೆಯು ಅವರನ್ನು ಅವನ ವಿರುದ್ಧ ತಿರುಗಿಸಿತು ಎಂದು ಮೂಲಗಳು ತಿಳಿಸಿವೆ.

### ರಾಜಸ್ತಾನದಲ್ಲಿ ತೆರೆದ ಬಾವಿಗೆ ಬಿದ್ದ ಮತ್ತೊಬ್ಬ ಬಾಲಕಿ

**ಜೈಪುರ:** ಮತ್ತೊಂದು ಬಾಲಕಿ ತೆರೆದ ಬೋರ್‌ವೆಲ್‌ಗೆ ಬಿದ್ದಿರುವ ಘಟನೆ ರಾಜಸ್ತಾನದಲ್ಲಿ ನಡೆದಿದೆ.ರಾಜಸ್ಥಾನದ ಕೊಟ್‌ಪುಟ್ಲಿ-ಬೆಹ್ರೋರ್ ಜಿಲ್ಲೆಯಲ್ಲಿ ಮೂರು ವರ್ಷದ ಬಾಲಕಿ ಬೋರ್‌ವೆಲ್‌ಗೆ ಬಿದ್ದಿದ್ದು, 150 ಅಡಿ ಆಳದ ಬೋರ್‌ವೆಲ್‌ನಿಂದ ರಕ್ಷಿಸಲು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ನಿಯೋಜಿಸಲಾಗಿದೆ. ಬಾಲಕಿ ಚೇತನಾ, ಸರುಂಡ್ ಪ್ರದೇಶದ ತನ್ನ ತಂದೆಯ ಜಮೀನಿನಲ್ಲಿ ಆಟವಾಡುತ್ತಿದ್ದಾಗ ಆಕಸಿಕವಾಗಿ ಬೋರ್‌ವೆಲ್‌ಗೆ ಬಿದ್ದಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ತಲುಪಿದ್ದು ರಾಡ್‌ಗೆ ಜೋಡಿಸಲಾದ ಕೊಕ್ಕೆಯ ಸಹಾಯದಿಂದ ಬಾಲಕಿಯನ್ನು ಹೊರತೆಗೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಸರಂಡ್ ಎಸ್‌ಎಚ್‌ಒ ಮೊಹಮದ್ ಇಮ್ರಾನ್ ಹೇಳಿದ್ದಾರೆ.

ಬಾಲಕಿಯ ಚಲನವಲನಗಳನ್ನು ಕ್ಯಾಮರಾ ಮೂಲಕ ಸೆರೆಹಿಡಿಯಲಾಗಿದ್ದು, ಆಮ್ಲಜನಕದ ಪೈಪ್ ಅನ್ನು ಬೋರ್‌ವೆಲ್‌ಗೆ ಇಳಿಸಿ ಆಮ್ಲಜನಕ ಪೂರೈಕೆ ಮಾಡಲಾಗುತ್ತಿದೆ.ಮೊದಲು ಬಾಲಕಿ ಸುಮಾರು 150 ಅಡಿ ಆಳದಲ್ಲಿ ಸಿಲುಕಿಕೊಂಡಿದ್ದಳು ನಂತರ ಮತ್ತಷ್ಟು ಆಳಕ್ಕೆ ಜಾರಿದ್ದು ಆಕೆಯ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ. ಇದಕ್ಕೂ ಮುನ್ನ ಕೈಗಾರಿಕಾ ಸಚಿವ ರಾಜ್ಯವರ್ಧನ್ ಸಿಂಗ್ ರಾಥೋಡ್ ಅವರು ಅಧಿಕಾರಿಗಳೊಂದಿಗೆ ಮಾತನಾಡಿ ಬಾಲಕಿಯನ್ನು ಶೀಘ್ರ ರಕ್ಷಿಸುವಂತೆ ಸೂಚನೆ ನೀಡಿದರು. ಎರಡು ವಾರಗಳ ಹಿಂದೆ ದೌಸಾ ಜಿಲ್ಲೆಯಲ್ಲಿ ಐದು ವರ್ಷದ ಬಾಲಕನೊಬ್ಬ ಬೋರ್‌ವೆಲ್‌ಗೆ ಬಿದ್ದಿದ್ದ. ರಕ್ಷಣಾ ಕಾರ್ಯಾಚರಣೆ 55 ಗಂಟೆಗಳ ಕಾಲ ನಡೆಯಿತು ಆದರೆ ಬಾಲಕನನ್ನು ಉಳಿಸಲು ಸಾಧ್ಯವಾಗಿರಲಿಲ್ಲ.


### ಅತ್ಯಾಚಾರಕ್ಕೊಳಗಾದ 10 ವರ್ಷದ ಬಾಲಕಿ ಸಾವು

**ಅಹಮದಾಬಾದ್:** ಗುಜರಾತ್‌ನ ಭರೂಚ್ ಜಿಲ್ಲೆಯ ಜಗಡಿಯಾದಲ್ಲಿ 36 ವರ್ಷದ ಕೂಲಿ ಕಾರ್ಮಿಕನ ಕಾಮಕ್ಕೆ ಬಲಿಯಾದ 10 ವರ್ಷದ ಮುಗ್ಧ ಬಾಲಕಿ ನಿರ್ಭಯಾಳಂತೆ ಸೋಮವಾರ ವಡೋದರಾದ ಎಸ್‌ಎಸ್‌ಜಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾಳೆ. ಎಂಟು ದಿನಗಳ ಕಾಲ ಜೀವನ್ಮರಣ ಹೋರಾಟ ನಡೆಸಿದ ಬಾಲಕಿ ಇಹಲೋಕ ತ್ಯಜಿಸಿದ್ದಾಳೆ. ಈ ಘಟನೆಯ ನಂತರ ಹುಡುಗಿ ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿದ್ದಾಳೆ.ಆಂತರಿಕ ಗಾಯಗಳಿಂದ ಬಾಲಕಿಗೆ ಎರಡು ಬಾರಿ ಹೃದಯಾಘಾತವಾಗಿದೆ ಎಂದು ವಡೋದರಾ ಆಸ್ಪತ್ರೆ ತಿಳಿಸಿದೆ. ಮುಗ್ಧ ಬಾಲಕಿಯ ಮೇಲೆ ನೆರೆಮನೆಯಾತ ಅತ್ಯಾಚಾರವೆಸಗಿದ್ದಾನೆ. ಬಾಲಕಿ ಖಾಸಗಿ ಭಾಗಗಳಿಗೆ ತೀವ್ರ ಹಾನಿ ಉಂಟಾಗಿದೆ. ತೀವ್ರ ಗಾಯಗಳು ಮತ್ತು ಹೃದಯಾಘಾತದ ನಂತರ ಬಹು ಅಂಗಾಂಗ ವೈಫಲ್ಯದಿಂದ ಬಾಲಕಿ ನಿಧನ ಹೊಂದಿದ್ದಾಳೆ. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಬಾಲಕಿಯ ಚಿಕಿತ್ಸೆಗೆ ಎಲ್ಲಾ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದರು.ಗುಜರಾತ್ ಸರ್ಕಾರ ಉತ್ತಮ ಚಿಕಿತ್ಸೆ ನೀಡುವುದಾಗಿ ಭರವಸೆ ನೀಡಿದ್ದರೂ ಬಾಲಕಿಯ ಜೀವ ಉಳಿಸಲಾಗಲಿಲ್ಲ. ಭರೂಚ್‌ನಲ್ಲಿ ಬಾಲಕಿಗೆ ಚಿಕಿತ್ಸೆ ನೀಡಿದ ಡಾ.ಜೀಲ್ ಸೇಠ್ ಬಾಲಕಿಯ ಸ್ಥಿತಿ ನೋಡಿ ಆಘಾತವಾಗಿದೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಾಲಕಿಯನ್ನು ಕ್ರೂರವಾಗಿ ನಡೆಸಿ ಕೊಳ್ಳಲಾಗಿದೆ. ಬಾಲಕಿ ಗಂಭೀರ ಗಾಯಗಳನ್ನು ನೋಡಿದಾಗ ನನಗೆ ನಿರ್ಭಯಾ ಪ್ರಕರಣ ನೆನಪಾಯಿತು ಎಂದಿದ್ದಾರೆ ಈ ಮಾತನ್ನು ಗಮನಿಸಿದರೆ ಬಾಲಕಿಯ ಜೊತೆ ಕಾಮುಕ ಮೃಗದಂತೆ ನಡೆದುಕೊಂಡಿದ್ದಾನೆ ಎಂಬುದು ಸ್ಪಷ್ಟವಾಗುತ್ತಿದೆ.ಏಳು ವರ್ಷಗಳ ತಮ್ಮ ವೃತ್ತಿ ಜೀವನದಲ್ಲಿ ಇಂತಹ ಗಂಭೀರ ಪ್ರಕರಣವನ್ನು ನೋಡಿರಲಿಲ್ಲ ಎಂದು ಹೇಳಿದ್ದಾರೆ. ಆರೋಪಿಯು ಬಾಲಕಿಯ ಮನೆಯ ಹಿಂಭಾಗದ ಕೊಠಡಿಯಲ್ಲಿ ವಾಸಿಸುತ್ತಿದ್ದ. ಆತ ಮೂಲತಃ ಜಾರ್ಖಂಡ್ ವಾಸಿ. ಪತ್ನಿ ಮತ್ತು ಪುತ್ರಿಯರು ಜಾರ್ಖಂಡ್‌ನಲ್ಲಿ ವಾಸಿಸುತ್ತಿದ್ದಾರೆ. ಇದೀಗ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

### ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭಾರತದಿಂದ 230 ಕೋಟಿ ನೆರವು

**ಕೊಲಂಬೊ:** ಶ್ರೀಲಂಕಾದ ಪೂರ್ವ ಭಾಗದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭಾರತ 230.71 ಕೋಟಿ ನೆರವು ನೀಡುತ್ತಿದೆ. ಮಂಗಳವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಶ್ರೀಲಂಕಾ ಆರೋಗ್ಯ ಸಚಿವ ಹಾಗೂ ವಕ್ತಾರ ನಳಂದಾ ಜಯಥಿಸ್ಸಾ ಅವರು ಈ ವಿಷಯ ತಿಳಿಸಿದರು. ನಮ್ಮ ಕೋರಿಕೆಯ ಮೇರೆಗಿನ ಭಾರತ್ ಸರ್ಕಾರದ ಪ್ರಸ್ತಾವಗಳಿಗೆ ಸಚಿವ ಸಂಪುಟ ಒಪ್ಪಿಗೆ ಸೂಚಿಸಿ ಸಹಿ ಹಾಕಿದೆ. ಇದು ಉಭಯ ರಾಷ್ಟ್ರಗಳ ರಾಜಕೀಯ-ಆರ್ಥಿಕ ಸಹಕಾರ ಬಲ ವೃದ್ಧಿಗೆ ಅನುಕೂಲ ಆಗಲಿದೆ ಎಂದು ಅವರು ವಿವರಿಸಿದರು. 230.71 ಕೋಟಿಯಲ್ಲಿ 30.15 ಕೋಟಿ ಶಿಕ್ಷಣಕ್ಕೆ 70.80 ಕೋಟಿ ಆರೋಗ್ಯಕ್ಕೆ ಮತ್ತು 60.20 ಕೋಟಿಯನ್ನು ಕೃಷಿ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ. ಇದರಿಂದ ಸ್ಥಳೀಯರ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗಲಿ. ಇದಕ್ಕಾಗಿ ನಾವು ಭಾರತ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುತ್ತೇವೆ ಎಂದು ಹೇಳಿದರು.

# ಐಸಿಸಿ ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ ಪ್ರಕಟ



ಬಹು ನಿರೀಕ್ಷಿತ ಐಸಿಸಿ ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ ಮಂಗಳವಾರ ಪ್ರಕಟಿಸಲಾಗಿದೆ. ಫೆ.19ರಿಂದ ಪಂದ್ಯಗಳು ಆರಂಭವಾಗಲಿದ್ದು, ಫೆ.23 ಸಾಂಪ್ರದಾಯಿಕ ಎದುರಾಳಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ಹೈವೋಲ್ಟೇಜ್ ಪಂದ್ಯ ನಡೆಯಲಿದೆ. ಪಾಕ್ ಆತಿಥ್ಯದಲ್ಲಿ ನಡೆಯಲಿರುವ ಈ ಟೂರ್ನಿ ಕರಾಚಿಯಲ್ಲಿ ಮೊದಲ ಪಂದ್ಯ ನಡೆಯಲಿದ್ದು, ಮಾ.9 ಫೈನಲ್ ಪಂದ್ಯ ನಡೆಯಲಿದೆ. ಭಾರತ ಆಡುವ ಎಲ್ಲಾ ಪಂದ್ಯಗಳು ದುಬೈನಲ್ಲಿ ನಡೆಯಲಿವೆ. ಹೈ ಬ್ರಿಡ್ ಮಾದರಿಯಲ್ಲಿ ನಡೆಯಲಿರುವ ಈ ಟೂರ್ನಿಯಲ್ಲಿ ಎಂಟು ತಂಡಗಳು ಸೆಣಸಲಿವೆ. ಹೀಗಾಗಿ ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

**ಫೆ.23 ಭಾರತ-ಪಾಕ್ ಸೆಣಸು**

**ಲಾಹೋರ್ ನಲ್ಲಿ ಫೈನಲ್:** ಚಾಂಪಿಯನ್ ಟ್ರೋಫಿ ಟೂರ್ನಿಯ ಫೈನಲ್ ಪಂದ್ಯ ಲಾಹೋರ್‌ನಲ್ಲಿ ನಡೆಯಲಿದೆ. ಭಾರತ ಫೈನಲ್‌ಗೆ ಅರ್ಹತೆ ಪಡೆದರೆ ಆ ಪಂದ್ಯ ದುಬೈನಲ್ಲಿ ನಡೆಯಲಿದೆ. ಸೆಮಿಫೈನಲ್ ಮತ್ತು ಫೈನಲ್ ಎರಡಕ್ಕೂ ಮೀಸಲು ದಿನವನ್ನು ಇರಿಸಲಾಗಿದೆ. ಮಾರ್ಚ್ 10 ಫೈನಲ್ ಪಂದ್ಯಕ್ಕೆ ಮೀಸಲು ದಿನವಾಗಿದೆ. ರಾವಲ್ಪಿಂಡಿ, ಲಾಹೋರ್ ಮತ್ತು ಕರಾಚಿ ನಗರಗಳಲ್ಲಿ ಪಾಕಿಸ್ತಾನ ಚಾಂಪಿಯನ್ ಟ್ರೋಫಿ ಪಂದ್ಯಗಳನ್ನು ಆಯೋಜಿಸಲಿದೆ.

## ಚಾಂಪಿಯನ್ಸ್ ಟ್ರೋಫಿ-2025 ಸಂಪೂರ್ಣ ವೇಳಾಪಟ್ಟಿ

- ಫೆಬ್ರವರಿ-19 : ಪಾಕಿಸ್ತಾನ vs ನ್ಯೂಜಿಲೆಂಡ್, ಕರಾಚಿ, ಪಾಕಿಸ್ತಾನ
- ಫೆಬ್ರವರಿ-20 : ಬಾಂಗ್ಲಾದೇಶ vs ಭಾರತ, ದುಬೈ
- ಫೆಬ್ರವರಿ-21 : ಅಫ್ಘಾನಿಸ್ತಾನ vs ದಕ್ಷಿಣ ಆಫ್ರಿಕಾ- ಕರಾಚಿ, ಪಾಕಿಸ್ತಾನ
- ಫೆಬ್ರವರಿ-22: ಆಸ್ಟ್ರೇಲಿಯಾ vs ಇಂಗ್ಲೆಂಡ್- ಲಾಹೋರ್, ಪಾಕಿಸ್ತಾನ
- ಫೆಬ್ರವರಿ-23: ಪಾಕಿಸ್ತಾನ vs ಭಾರತ- ದುಬೈ
- ಫೆಬ್ರವರಿ-24: ಬಾಂಗ್ಲಾದೇಶ vs ನ್ಯೂಜಿಲೆಂಡ್- ರಾವಲ್ಪಿಂಡಿ, ಪಾಕಿಸ್ತಾನ
- ಫೆಬ್ರವರಿ-25: ಆಸ್ಟ್ರೇಲಿಯಾ vs ದಕ್ಷಿಣ ಆಫ್ರಿಕ- ರಾವಲ್ಪಿಂಡಿ, ಪಾಕಿಸ್ತಾನ
- ಫೆಬ್ರವರಿ-26: ಅಫ್ಘಾನಿಸ್ತಾನ vs ಇಂಗ್ಲೆಂಡ್- ಲಾಹೋರ್, ಪಾಕಿಸ್ತಾನ
- ಫೆಬ್ರವರಿ-27: ಪಾಕಿಸ್ತಾನ vs ಬಾಂಗ್ಲಾದೇ- ರಾವಲ್ಪಿಂಡಿ, ಪಾಕಿಸ್ತಾನ
- ಫೆಬ್ರವರಿ-28: ಅಫ್ಘಾನಿಸ್ತಾನ vs ಆಸ್ಟ್ರೇಲಿಯಾ- ಲಾಹೋರ್, ಪಾಕಿಸ್ತಾನ
- ಮಾರ್ಚ್-1: ದಕ್ಷಿಣ ಆಫ್ರಿಕಾ vs ಇಂಗ್ಲೆಂಡ್- ಕರಾಚಿ, ಪಾಕಿಸ್ತಾನ
- ಮಾರ್ಚ್-2: ನ್ಯೂಜಿಲೆಂಡ್ vs ಭಾರತ- ದುಬೈ
- ಮಾರ್ಚ್-4: ಸೆಮಿಫೈನಲ್ ಪಂದ್ಯ 1- ದುಬೈ
- ಮಾರ್ಚ್-5: ಸೆಮಿಫೈನಲ್ ಪಂದ್ಯ 2- ಲಾಹೋರ್, ಪಾಕಿಸ್ತಾನ
- ಮಾರ್ಚ್- 9: ಫೈನಲ್ ಪಂದ್ಯ- ಲಾಹೋರ್

# ಟಿ20 ವಿಶ್ವಕಪ್‌ಗೆ ಟೀಂ ಇಂಡಿಯಾ ಪ್ರಕಟ; ಕನ್ನಡತಿ ನಿಕ್ಕಿ ಪ್ರಸಾದ್‌ಗೆ ನಾಯಕತ್ವ



ಮಲೇಷ್ಯಾದಲ್ಲಿ ನಡೆಯಲಿರುವ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್‌ಗೆ ಭಾರತ ಮಹಿಳಾ ತಂಡವನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕದ ನಿಕ್ಕಿ ಪ್ರಸಾದ್ ತಂಡದ ನಾಯಕಿಯಾಗಿದ್ದಾರೆ. ಏಷ್ಯಾಕಪ್‌ನಲ್ಲಿ ಚಾಂಪಿಯನ್ ಆಗಿದ್ದ ಭಾರತ ತಂಡವು ಈ ಬಾರಿಯ ಟೂರ್ನಿಯಲ್ಲೂ ಅದ್ಭುತ ಪ್ರದರ್ಶನ ನೀಡುವ ನಿರೀಕ್ಷೆಯಿದೆ. ಜನವರಿ 18 ರಿಂದ ಫೆಬ್ರವರಿ 2 ರವರೆಗೆ ನಡೆಯುವ ಈ ಟೂರ್ನಿಯಲ್ಲಿ 16 ತಂಡಗಳು ಪಾಲ್ಗೊಳ್ಳಲಿವೆ. ಮುಂದಿನ ವರ್ಷ ಮಲೇಷ್ಯಾದಲ್ಲಿ ನಡೆಯಲಿರುವ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್‌ಗೆ 15 ಸದಸ್ಯರ ಭಾರತ ಮಹಿಳಾ ತಂಡವನ್ನು ಪ್ರಕಟಿಸಲಾಗಿದೆ. ಇತ್ತೀಚೆಗಷ್ಟೇ ನಡೆದಿದ್ದ 19 ವರ್ಷದೊಳಗಿನವರ ಮಹಿಳಾ ಏಷ್ಯಾಕಪ್‌ನಲ್ಲಿ ಟೀಂ ಇಂಡಿಯಾವನ್ನು ಚಾಂಪಿಯನ್ ಮಾಡಿದ್ದ ಕನ್ನಡತಿ ನಿಕ್ಕಿ ಪ್ರಸಾದ್ ಟಿ20 ವಿಶ್ವಕಪ್‌ನಲ್ಲೂ ತಂಡವನ್ನು ಮುನ್ನಡೆಸಲಿದ್ದಾರೆ. ಉಳಿದಂತೆ 19 ವರ್ಷದೊಳಗಿನವರ ಏಷ್ಯಾಕಪ್ ತಂಡದಲ್ಲಿದ್ದ ಭಾಗಶಃ ಆಟಗಾರರೇ ಟಿ20 ವಿಶ್ವಕಪ್‌ಗೂ ತಂಡದಲ್ಲಿ ಆಯ್ಕೆಯಾಗಿದ್ದಾರೆ. ಈ ಟೂರ್ನಿಯಲ್ಲಿ ಭಾರತ ಸೇರಿದಂತೆ 16 ತಂಡಗಳು ಭಾಗವಹಿಸಲಿವೆ. ಮುಂದಿ ನ ವರ್ಷ ನಡೆಯಲ್ಲಿರುವ ಈ ಟೂರ್ನಿ ಜನವರಿ 18 ರಿಂದ ಆರಂಭವಾಗಿ ಫೆಬ್ರವರಿ 2 ರಂದು ಕೊನೆಗೊಳ್ಳಲಿದೆ.

**ಕನ್ನಡತಿ ನಿಕ್ಕಿ ಪ್ರಸಾದ್ ನಾಯಕಿ:** ಮೇಲೆ ಹೇಳಿದಂತೆ ಮುಂದಿನ ವರ್ಷ ನಡೆಯಲಿರುವ 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಕರ್ನಾಟಕದ ನಿಕ್ಕಿ ಪ್ರಸಾದ್ ತಂಡದ ಸಾರಥ್ಯ ವಹಿಸಲಿ ದ್ದಾರೆ. ದಕ್ಷಿಣ ಆಫ್ರಿಕಾ ಮತ್ತು ಭಾರತ ಎ ವಿರುದ್ಧ ನಡೆದ ಅಂಡರ್-19 ಮಹಿಳಾ ಪಂದ್ಯದಲ್ಲಿ ನಿಕ್ಕಿ ಭಾರತ ಬಿ ತಂಡದ ನಾಯಕತ್ವ ವಹಿಸಿದ್ದರು. ಇದಲ್ಲದೆ 19 ವರ್ಷದೊಳಗಿನವರ ಮಹಿಳಾ ಏಷ್ಯಾಕಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದ ನಿಕ್ಕಿ ಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು 41 ರನ್‌ಗಳಿಂದ ಮಣಿಸಿ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದರು.

**ಭಾರತ ಹಾಲಿ ಚಾಂಪಿಯನ್:** ಭಾರತ ತಂಡ ಟೂರ್ನಿಯ ಹಾಲಿ ಚಾಂಪಿಯನ್ ಆಗಿದೆ. ಕಳೆದ ಬಾರಿ ಅಂದರೆ 2023 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ 19 ವರ್ಷದೊಳಗಿನವರ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿ ಭಾರತ ವನಿತಾ ಪಡೆ ವಿಶ್ವಕಪ್ ಗೆದ್ದುಕೊಂಡಿತ್ತು. ಇನ್ನು ಕಳೆದ ಬಾರಿ ತಂಡವನ್ನು ಚಾಂಪಿಯನ್ ಮಾಡಿದ್ದ ಆಟಗಾರ್ತಿಯರ ಪೈಕಿ ಕೆಲವರು ಈ ಬಾರಿಯ ವಿಶ್ವಕಪ್?ಗೂ ತಂಡದಲ್ಲಿ ಆಯ್ಕೆಯಾಗಿದ್ದಾರೆ. ಅವರುಗಳಲ್ಲಿ ಜಿ. ತ್ರಿಷಾ, ಎಂಡಿ ಶಬ್ನಮ್ ಮತ್ತು ಸೋನಮ್ ಯಾದವ್ ಸೇರಿದ್ದಾರೆ.

**ಭಾರತದ ಮೊದಲ ಎದುರಾಳಿ ಯಾರು?:** 19 ವರ್ಷದೊಳಗಿನವರ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಒಟ್ಟು 16 ತಂಡಗಳು ಭಾಗವಹಿಸುತ್ತಿದ್ದು, ತಲಾ 4 ತಂಡಗಳನ್ನು 4 ಗುಂಪುಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ಭಾರತ ಎ ಗುಂಪಿನಲ್ಲಿದ್ದು ಈ ಗುಂಪಿನಲ್ಲಿ ಭಾರತವನ್ನು ಹೊರತುಪಡಿಸಿ, ಆತಿಥೇಯ ಮಲೇಷ್ಯಾ, ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾ ತಂಡಗಳಿವೆ. ಭಾರತ ತಂಡ ಜನವರಿ 19 ರಂದು ವೆಸ್ಟ್ ಇಂಡೀಸ್ ವಿರುದ್ಧ ಕಣಕ್ಕಿಳಿಯುವ ಮೂಲಕ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಪ್ರಾರಂಭಿಸಲಿದೆ. ಎಲ್ಲಾ ಗುಂಪು ಹಂತದ ಪಂದ್ಯಗಳು ಕೌಲಾಲಂಪುರದಲ್ಲಿ ನಡೆಯಲಿದ್ದು ಭಾರತ ಇರುವ ಗುಂಪನ್ನು ನೋಡಿದರೆ ಅದು ಮುಂದಿನ ಸುತ್ತಿಗೆ ಹೋಗುವುದು ಖಚಿತ ಎನಿಸುತ್ತಿದೆ.

# ಮಹಿಳಾ ಕ್ರಿಕೆಟ್: ಸರಣಿ ಕೈವಶದ ಛಲದಲ್ಲಿ ಭಾರತ



ಹರ್ಮನ್‌ಪ್ರೀತ್ ಕೌರ್ ಸಾರಥ್ಯದ ಭಾರತ ಮಹಿಳಾ ಕ್ರಿಕೆಟ್ ತಂಡವು ಮಂಗಳವಾರ ಇಲ್ಲಿ ನಡೆಯುವ ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಏಕದಿನ ಪಂದ್ಯವನ್ನು ಗೆದ್ದು, ಸರಣಿಯನ್ನು ವಶಪಡಿಸಿಕೊಳ್ಳುವ ಛಲದಲ್ಲಿದೆ. ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯವನ್ನು ಭಾರತದ ವನಿತೆಯರು ಸಾಂಘಿಕ ಪ್ರದರ್ಶನ ನೀಡಿ ಭಾನುವಾರ 211 ರನ್‌ಗಳಿಂದ ಸುಲಭವಾಗಿ ಜಯಿಸಿದ್ದರು.

ವಿಂಡೀಸ್ ವಿರುದ್ಧ ಟಿ20 ಸರಣಿಯನ್ನು 2-1ರಿಂದ ಗೆದ್ದಿರುವ ಆತಿಥೇಯ ತಂಡವು, ಏಕದಿನ ಸರಣಿಯನ್ನೂ ಒಂದು ಪಂದ್ಯ ಬಾಕಿ ಇರುವಂತೆ ಕೈವಶ ಮಾಡಿಕೊಳ್ಳುವತ್ತ ಚಿತ್ತ ಹರಿಸಿದೆ. ಆದರೆ, ಪ್ರವಾಸಿ ತಂಡವು ಸರಣಿಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ. ಮುಂದಿನ ವರ್ಷ ಭಾರತದ ಆತಿಥ್ಯದಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದ್ದು, ಹೀಗಾಗಿ ಹರ್ಮನ್ ಪ್ರೀತ್ ಬಳಗಕ್ಕೆ ಮುಂದೆ ನಡೆ ಯುವ ಪ್ರತಿಯೊಂದು ಪಂದ್ಯವು ಮಹತ್ವದ್ದಾಗಿದೆ. ಮಹಿಳಾ ವಿಶ್ವಕಪ್ ಅನ್ನು ಈವರೆಗೆ ಜಯಿಸದ ಭಾರತ ತಂಡವು, ತಮ್ಮ ಐಸಿಸಿ ಪ್ರಶಸ್ತಿಯ ಬರವನ್ನು ತವರಿನಲ್ಲಿ ನೀಗಿಸಲು ಎದುರು ನೋಡುತ್ತಿದೆ.

**ಅನುಭವಿ ಆಟಗಾರ್ತಿಯರೇ ವಿಂಡೀಸ್ ತಂಡಕ್ಕೆ ಶಕ್ತಿ**

ಆಸ್ಟ್ರೇಲಿಯಾದಲ್ಲಿ 0-3 ವೈಟ್‌ವಾಷ್‌ಗೆ ಒಳಗಾದ ನಂತರ ಭಾರತ ತಂಡವು ಕೆರೀಬಿಯನ್ನರ ಮೇಲೆ ಶುಭಾರಂಭ ಮಾಡಿದೆ. ಹಲವು ಪಂದ್ಯಗಳ ಬಳಿಕ ಕಳೆದ ಪಂದ್ಯದಲ್ಲಿ ಭಾರತ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಉಪ ನಾಯಕಿ ಸ್ಮೃತಿ ಮಂದಾನ (91; 102ಎ) ಮತ್ತು ಚೊಚ್ಚಲ ಅಂತರರಾಷ್ಟ್ರೀಯ ಪಂದ್ಯ ಆಡಿದ ಪ್ರತೀಕಾ ರಾವಲ್ (40; 69ಎ) ಅವರು ಮೊದಲ ವಿಕೆಟ್‌ಗೆ ಶತಕದ ಜೊತೆಯಾಟ ನೀಡಿ ಭಾರತಕ್ಕೆ ಉತ್ತಮ ಆರಂಭ ಒದಗಿಸಿದ್ದರು. ಉತ್ತಮಲಯದಲ್ಲಿರುವ ಮಂದಾನದೇ ವೇಳೆ ಮಹಿಳಾ ಅಂತರ ರಾಷ್ಟ್ರೀಯ ಕ್ರಿಕೆಟ್‌ನ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ಸ್ಕೋರ್ (1602 ರನ್) ಗಳಿಸಿದ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬ್ಯಾಟಿಂಗ್ ಮಾತ್ರವಲ್ಲದೆ ಭಾರತದ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ. ಕಳೆದ ಪಂದ್ಯದಲ್ಲಿ ಐದು ವಿಕೆಟ್ ಪಡೆದು ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರವಾದ ರೇಣುಕಾ ಸಿಂಗ್ ಕೂಡ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದ್ದಾರೆ. ಹೆಯಾಲಿ ಮ್ಯಾಥ್ಯೂಸ್, ದಿಯಾಂಡ್ರಾ ಡಾಟಿನ್, ಶೆಮೈನ್ ಕ್ಯಾಂಪ್‌ಬೆಲ್ ಮತ್ತು ಆಫಿ ಫ್ರೆಚರ್ ಸೇರಿದಂತೆ ಅನುಭವಿ ಆಟಗಾರ್ತಿಯರೇ ವಿಂಡೀಸ್ ತಂಡಕ್ಕೆ ಶಕ್ತಿಯಾಗಿದ್ದಾರೆ.

# ನನ್ನಿಂದಲೇ ತಪ್ಪಾಗಿರಬಹುದು ಮನು ಭಾಕರ್



ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಗೆ ಶಿಫಾರಸುಗೊಂಡ ಪಟ್ಟಿಯಲ್ಲಿ ಖ್ಯಾತ ಶೂಟರ್ ಮನು ಭಾಕರ್ ಹೆಸರಿಲ್ಲ ಎಂಬ ವಿವಾದ ಇನ್ನಷ್ಟು ತೀವ್ರ ಗೊಂಡಿದೆ. ಕೇಂದ್ರ ಕ್ರೀಡಾ ಸಚಿವಾಲಯ ಇನ್ನೂ ಪ್ರಶಸ್ತಿಪಟ್ಟಿ ಅಂತಿಮಗೊಂಡಿಲ್ಲ ಎಂದಿದ್ದರೂ, ಆಕ್ಷೇಪಗಳು ಮುಂದುವರಿದಿವೆ. ಈ ಬಗ್ಗೆ ಸ್ವತಃ ಮನು ಭಾಕರ್ ಪ್ರತಿಕ್ರಿಯಿಸಿ, ಅರ್ಜಿ ಹಾಕುವುದರಲ್ಲಿ ನನ್ನಿಂದಲೇ ಏನೋ ತಪ್ಪಾಗಿರಬಹುದು. ಊಹಾಪೋಹ ಬೇಡ, ಇಲ್ಲಿಗೆ ನಿಲ್ಲಿಸಿ' ಎಂದು ಮನವಿ ಮಾಡಿದ್ದಾರೆ ಮತ್ತೊಂದು ಕಡೆ ಸಂದರ್ಶನವೊಂದರಲ್ಲಿ ಮಾತನಾಡಿರುವ ತಂದೆ ರಾಮಕಿಶನ್, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಮೇಲೂ ಮನುವನ್ನು ಪ್ರಶ ಸ್ತಿಗೆ ಆಯ್ಕೆ ಮಾಡಿಲ್ಲ. ಇದಕ್ಕೂ ಮೀರಿ ಇನ್ನೇನು ಮಾಡ ಬೇಕು? ಅವಳನ್ನು ಶೂಟರ್ ಬದಲು ಕ್ರಿಕೆಟರ್ ಮಾಡಬೇಕಿತ್ತು' ಎಂದಿದ್ದಾರೆ. ಮನು ಕೋಚ್ ಜಸ್ಪಾಲ್ ರಾಣಾ ಕೂ ಡ ಶಿಫಾರಸು ಪಟ್ಟಿಯಲ್ಲಿ ಹೆಸರಿಲ್ಲದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

# ಸ್ಮರಣ್ ಶತಕ: ಕರ್ನಾಟಕಕ್ಕೆ ಗೆಲುವು



ಸ್ಮರಣ್ ಆರ್. ಅವರ ಭರ್ಜರಿ ಶತಕ, ವಿದ್ಯಾಧರ ಪಾಟೀಲ (27ಕ್ಕೆ 4) ಅವರ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 3 ವಿಕೆಟ್‌ಗಳಿಂದ ಪುದುಚೇರಿ ತಂಡವನ್ನು ಮಣಿಸಿತು. 'ಸಿ' ಗುಂಪಿನ ಪಂದ್ಯದಲ್ಲಿ ಮಯಂಕ್ ಅಗರವಾಲ್ ಪಡೆಗೆ ಇದು ಎರಡನೇ ಗೆಲುವು. ಮೊದಲ ಪಂದ್ಯದಲ್ಲಿ ಬಲಿಷ್ಠ ಮುಂಬೈ ತಂಡಕ್ಕೆ ಆಘಾತ ನೀಡಿತ್ತು. 42 ರನ್ ಗಳಿಸುವಷ್ಟರಲ್ಲಿ ನಿಕಿನ್ ಜೋಸ್ (10) ಮತ್ತು ಮಯಂಕ್ (18) ಅವರನ್ನು ಕಳೆದುಕೊಂಡಿತು. ನಂತರ ಬಂದ ಕೆ.ವಿ. ಅನೀಶ್ (15) ಹೆಚ್ಚುಹೊತ್ತು ನಿಲ್ಲಲಿಲ್ಲ. ಹಿಂದಿನ ಪಂದ್ಯದಲ್ಲಿ ಶತಕ ಗಳಿಸಿ ಅಬ್ಬರಿಸಿದ್ದ ವಿಕೆಟ್ ಕೀಪರ್ ಕೆ.ಎಲ್. ಶ್ರೀಜಿತ್ (1) ನಿರಾಸೆ ಮೂಡಿಸಿದರು. ಈ ಹಂತದಲ್ಲಿ ಸ್ಮರಣ್ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಅವರಿಗೆ ಶ್ರೇಯಸ್ ಗೋಪಾಲ್ (40:59ಎ) ಸಾಥ್ ನೀಡಿದರು. ಅವರಿಬ್ಬರು ಐದನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿ ತಂಡವನ್ನು ಜಯದತ್ತ ಕೊಂಡೊಯ್ದರು. ಕೊನೆಯಲ್ಲಿ 12 ರನ್ ಅಂತರದಲ್ಲಿ ಮತ್ತೆ ಮೂರು ವಿಕೆಟ್‌ಗಳು ಪತನಗೊಂಡು ಮತ್ತೆ ಆತಂಕ ಸೃಷ್ಟಿಯಾಯಿತು. ಆದರೆ, ಮತ್ತೊಂದೆಡೆ ಸ್ಮರಣ್ ಗಟ್ಟಿಯಾಗಿ ನಿಂತು ತಂಡವನ್ನು ದಡ ಸೇರಿಸುವುದರೊಂದಿಗೆ ಅಜೇಯ ಶತಕ ಪೂರೈಸಿದರು. ಅವರ ಇನಿಂಗ್ಸ್ 10 ಬೌಂಡರಿ ಮತ್ತು ಮೂರು ಸಿಕ್ಸರ್ ಒಳಗೊಂಡಿತ್ತು. ಕರ್ನಾಟಕ 40.5 ಓವರ್‌ಗಳಲ್ಲಿ 7 ವಿಕೆಟ್‌ಗೆ 214 ರನ್ ಗಳಿಸಿತು. ಪುದುಚೇರಿಯ ವಿಜಯ್ ರಾಜಾರಾಮ್ ಮತ್ತು ಅಮನ್ ಹಕೀಮ್ ಖಾನ್ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು. ಕರ್ನಾಟಕ ತಂಡವು ಗುರುವಾರ ಪಂಜಾಬ್ ಮತ್ತು ಶನಿವಾರ ಅರುಣಾಚಲ ಪ್ರದೇಶ ತಂಡವನ್ನು ಎದುರಿಸಲಿದೆ.

# ಬಾಲಿವುಡ್ ಸಿನಿಮಾ ರಿಲೀಸ್‌ಗೂ ಮುನ್ನ ಕೀರ್ತಿ ಸುರೇಶ್ ಟೆಂಪಲ್ ರನ್

ಬಾಲಿವುಡ್ ಬೆಡಗಿ ಕೀರ್ತಿ ಸುರೇಶ್ ನಟಿಸಿರುವ ಬಾಲಿವುಡ್ ಸಿನಿಮಾ 'ಬೇಬಿ ಜಾನ್' ರಿಲೀಸ್‌ಗೆ ಸಜ್ಜಾಗಿದೆ. ಈ ಹಿನ್ನೆಲೆ ಚಿತ್ರತಂಡದ ಜೊತೆ ಮಹಾಕಾಳೇಶ್ವರ ಟೆಂಪಲ್‌ಗೆ ನಟಿ ಭೇಟಿ ನೀಡಿದ್ದಾರೆ. ಬಾಲಿವುಡ್ ನಟ ವರುಣ್ ಧವನ್ ಜೊತೆಗಿನ ಸಿನಿಮಾ ಡಿ.25ರಂದು ರಿಲೀಸ್ ಆಗುತ್ತಿದೆ. ಈ ಹಿನ್ನೆಲೆ ಉಜ್ಜಯಿನಿಯ ಮಹಾಕಾಳೇಶ್ವರ ಜ್ಯೋತಿರ್ಲಿಂಗ ದೇವಸ್ಥಾನಕ್ಕೆ ಕೀರ್ತಿ ಸುರೇಶ್ ಆ?ಯಂಡ್ ಟೀಮ್ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ನಟಿಸಿರುವ ಮೊದಲ ಬಾಲಿವುಡ್ ಸಿನಿಮಾಗೆ ಸಕ್ಸಸ್ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ಅಂದಹಾಗೆ, 'ಬೇಬಿ ಜಾನ್' ಚಿತ್ರವು ತಮಿಳಿನ ರಿಮೇಕ್ ತೇರಿ ಚಿತ್ರದಾಗಿದೆ. ಈ ಸಿನಿಮಾದಲ್ಲಿ ದಳಪತಿ ವಿಜಯ್ ಮತ್ತು ಸಮಂತಾ ನಟಿಸಿದರು. ಈ ಚಿತ್ರದ ಸೂಪರ್ ಸಕ್ಸಸ್ ಕಂಡಿತ್ತು. ಇದೇ ಚಿತ್ರವನ್ನು 'ಜವಾನ್' ಡೈರೆಕ್ಟರ್ ಅಟ್ಲಿ ಹಿಂದಿ ವರ್ಷನ್‌ನಲ್ಲಿ ಹೊಸ ಜೋಡಿಯ ಮೂಲಕ ಹೇಳಲು ಹೊರಟಿದ್ದಾರೆ. ಇದೇ ಡಿ.25ಕ್ಕೆ ಸಿನಿಮಾ ರಿಲೀಸ್ ಆಗುತ್ತಿದೆ. 'ಮಹಾನಟಿ' ಕೀರ್ತಿಗೆ ಈ ಚಿತ್ರದ ಮೂಲಕ ಬ್ರೇಕ್ ಸಿಗುತ್ತಾ? ಎಂದು ಕಾದುನೋಡಬೇಕಿದೆ.





# ನನ್ನನ್ನು ಮಾತ್ರ ಯಾಕೆ ಅರೆಸ್ಟ್ ಮಾಡಿದ್ದಾರೆ?



ತಮಗಿಂತ ಮೊದಲು ಇದೇ ಪ್ರಯೋಗವನ್ನು ಮಾಡಿದ ಅನೇಕರನ್ನು ಯಾಕೆ ಅರೆಸ್ಟ್ ಮಾಡಿಲ್ಲ ಎಂದು ಡ್ರೋನ್ ಪ್ರತಾಪ್ ಅವರು ಪ್ರಶ್ನಿಸಿದ್ದಾರೆ. ಜೈಲಿನಿಂದ ಬಿಡುಗಡೆಯಾಗಿ ಬಂದ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಕೃಷಿಹೊಂಡದಲ್ಲಿ ಸೋಡಿಯಂ ಬಳಸಿ ಸ್ಫೋಟ ಮಾಡಿದ್ದಕ್ಕಾಗಿ ಡ್ರೋನ್ ಪ್ರತಾಪ್ ಅವರನ್ನು ಬಂಧಿಸಲಾಗಿತ್ತು. ಇಷ್ಟು ದಿನ ಅವರು ನ್ಯಾಯಾಂಗ ಬಂಧನದಲ್ಲಿದ್ದರು. ಮಾಜಿ ಬಿಗ್ ಬಾಸ್ ಸ್ಪರ್ಧಿ ಡ್ರೋನ್ ಪ್ರತಾಪ್ ಅವರು ಮಂಗಳವಾರ ಜೈಲಿನಿಂದ ಬಿಡುಗಡೆ ಆಗಿದ್ದಾರೆ. ಸೋಡಿಯಂ ಮೆಟಲ್ ಬಳಸಿ ಕೃಷಿ ಹೊಂಡದಲ್ಲಿ ಬ್ಲಾಸ್ಟ್ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು. ಜಾಮೀನು ಪಡೆದು ಅವರೀಗ ಜೈಲಿನಿಂದ ಹೊರಗೆ ಬಂದಿದ್ದಾರೆ. ಜೈಲಿನ ಎದುರು ಮಾಧ್ಯಮಗಳ ಜೊತೆ ಮಾತನಾಡಿದ ಡ್ರೋನ್ ಪ್ರತಾಪ್ ಅವರು, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೇರೆ ಎಲ್ಲರನ್ನೂ ಬಿಟ್ಟು ತಮ್ಮನ್ನು ಮಾತ್ರ ಅರೆಸ್ಟ್ ಮಾಡಿದ್ದು ಯಾಕೆ ಎಂದು ಅವರು ಪ್ರಶ್ನಿಸಿದ್ದಾರೆ. 'ನನ್ನದು ಒಂದೇ ಪ್ರಶ್ನೆ. ದೇಶಾದ್ಯಂತ ಇದೇ ಸೋಡಿಯಂ ಬಳಸಿ ವಿಜ್ಞಾನದ ನೂರಾರು ಪ್ರಯೋಗ ಮಾಡಿದ್ದಾರೆ. ವಿಡಿಯೋ ಪೋಸ್ಟ್ ಮಾಡಿದ್ದಾರೆ. ಮೊಬೈಲ್ ಕೊಟ್ಟರೆ ತೋರಿಸುತ್ತೇನೆ. ಹಾಗಾದರೆ ಅವರನ್ನೆಲ್ಲ ಯಾಕೆ ಅರೆಸ್ಟ್ ಮಾಡಿಲ್ಲ ನನ್ನ ಒಬ್ಬನನ್ನು ಮಾತ್ರ ಯಾಕೆ ಅರೆಸ್ಟ್ ಮಾಡಿದ್ದಾರೆ' ಎಂದು ಡ್ರೋನ್ ಪ್ರತಾಪ್ ಅವರು ಪ್ರಶ್ನೆ ಮಾಡಿದ್ದಾರೆ. 'ನಮ್ಮ ದೇಶದಲ್ಲಿ ಆಗಿರಬಹುದು ಅಥವಾ ವಿದೇಶದಲ್ಲಿ ಆಗಿರಬಹುದು, ತುಂಬ ಜನ ಯೂಟ್ಯೂಬರ್?ಗಳು ಇದನ್ನು ಮಾಡಿದ್ದಾರೆ. ಐಪಿಸಿ ಎಂಬುದು ದೇಶದಲ್ಲಿ ಎಲ್ಲರಿಗೂ ಒಂದೇ. ಕಾನೂನು ಎಲ್ಲರಿಗೂ ಒಂದೇ. ಒಬ್ಬೊಬ್ಬರಿಗೆ ಒಂದೊಂದು ಥರ ಅಲ್ಲ. ಬೇರೆಯವರೆಲ್ಲ ಕೆಜಿಗಟ್ಟಲೆ ಸೋಡಿಯಂ ಬಳಸಿ ಪ್ರಯೋಗ ಮಾಡಿದ್ದಾರೆ. ಆದರೆ ನನ್ನನ್ನು ಮಾತ್ರ ಅರೆಸ್ಟ್ ಮಾಡಿದ್ದು ಯಾಕೆ' ಎಂದು ಡ್ರೋನ್ ಪ್ರತಾಪ್ ಕೇಳಿದ್ದಾರೆ. 'ಕ್ರೇಜಿ ಎಕ್ಸ್ ವೈಜಡ್, ಮಿಸ್ಟರ್ ಹ್ಯಾಕರ್ ಹಾಗೂ ಸಾಕಷ್ಟು ಜನ ಯೂಟ್ಯೂಬರ್‌ಗಳು ಇಂಥ ಪ್ರಯೋಗ ಮಾಡಿದ್ದಾರೆ. ಇಂಥ ಯಾರ ಮೇಲೂ ಕೇಸ್ ಮಾಡಿಲ್ಲ. ನನ್ನ ಮೇಲೆ ಮಾತ್ರ ಕ್ರಮ ಕೈಗೊಂಡಿದ್ದಕ್ಕೆ ಉದ್ದೇಶ ಏನು ಎಂಬುದು ನೀವೇ ಹುಡುಕಬೇಕು. ನಾನು ಆ ಪ್ರಯೋಗ ಮಾಡಿದ್ದು ವಿಜ್ಞಾನ ಮತ್ತು ಶಿಕ್ಷಣದ ಉದ್ದೇಶಕ್ಕೆ ಅಂತ ಸೂಚನೆ ನೀಡಿಯೇ ಆ ವಿಡಿಯೋ ಹಾಕಿದ್ದೇನೆ' ಎಂದಿದ್ದಾರೆ ಡ್ರೋನ್ ಪ್ರತಾಪ್. 'ಅದು ಸರಳವಾದ ವಿಜ್ಞಾನದ ಪ್ರಯೋಗ. ಹೈಸ್ಕೂಲ್ ಪಠ್ಯ ಪುಸ್ತಕದಲ್ಲಿ ಆ ಪ್ರಯೋಗ ಇದೆ. ಶಾಲೆ, ಕಾಲೇಜಿನಲ್ಲಿ ಸೋಡಿಯಂ ತುಂಬ ಸುಲಭವಾಗಿ ಲಭ್ಯವಿದೆ. ಅದನ್ನು ಸ್ಫೋಟಕ ಅಂತ ತೋರಿಸಿ ದೊಡ್ಡದು ಮಾಡುವಂಥದ್ದು ಏನೂ ಇರಲಿಲ್ಲ' ಎಂದು ಡ್ರೋನ್ ಪ್ರತಾಪ್ ಹೇಳಿದ್ದಾರೆ.

**ನ್ಯಾಯ ಕೇಳಿದ ಡ್ರೋನ್ ಪ್ರತಾಪ್**

# ಸೌತ್‌ನಲ್ಲಿ ಶ್ರೀಲೀಲಾಗೆ ಭಾರೀ ಬೇಡಿಕೆ

ಬೆಂಗಳೂರಿನ ಬೆಡಗಿ ಶ್ರೀ ಲೀಲಾ 'ಪುಷ್ಪ2' ಚಿತ್ರದಲ್ಲಿ ಕಿಸ್ಸಿಕ್ ಬೆಡಗಿಯಾಗಿ ಮಿಂಚಿದ್ಮೇಲೆ ಬೇಡಿಕೆ ಇನ್ನೂ ಹೆಚ್ಚಾಗಿದೆ. ನಟಿಯ ಬಳಿ ಕೈತುಂಬಾ ಸಿನಿಮಾಗಳಿವೆ. 2025ರಲ್ಲಿ ಸಾಲು ಸಾಲು ಸಿನಿಮಾ ಮನರಂಜನೆ ಕೊಡೋದು ಗ್ಯಾರಂಟಿ. ಪ್ರತಿಭೆ, ಡ್ಯಾನ್ಸ್ ಸ್ಕಿಲ್, ಬ್ಯೂಟಿಯೊಂದಿಗೆ ಸದ್ಯ ಸೌತ್‌ನಲ್ಲಿ ಸದ್ದು ಮಾಡುತ್ತಿರುವ ಕನ್ನಡತಿ ಶ್ರೀಲೀಲಾ ಲಿಸ್ಟ್‌ನಲ್ಲಿ 5ಕ್ಕೂ ಹೆಚ್ಚು ಸಿನಿಮಾಗಳಿವೆ. ನಿತಿನ್ ಜೊತೆಗಿನ ರಾಬಿನ್‌ಹುಡ್ ಚಿತ್ರ, ಪವನ್ ಕಲ್ಯಾಣ್ ಜೊತೆ ಉಸ್ತಾದ್ ಭಗತ್ ಸಿಂಗ್, ಧಮಾಕ ಬಳಿಕ ರವಿತೇಜ ಜೊತೆ 2ನೇ ಬಾರಿ ಹೊಸ ಚಿತ್ರಕ್ಕೆ ನಟಿ ಓಕೆ ಎಂದಿದ್ದಾರೆ. 'ಮಾಸ್ ಜಾತ್ರ' ಎಂದು ಟೈಟಲ್ ಇಡಲಾಗಿದೆ. ಶಿವಕಾರ್ತಿಕೇಯನ್ ನಟನೆಯ 25ನೇ ಚಿತ್ರಕ್ಕೆ ಶ್ರೀಲೀಲಾ ನಾಯಕಿಯಾಗಿದ್ದಾರೆ. ಈ ಮೂಲಕ ತಮಿಳಿಗೆ ನಟಿ ಪಾದಾರ್ಪಣೆ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ ಸುಧಾ ಕೊಂಗರ ನಿರ್ದೇಶನ ಮಾಡುತ್ತಿದ್ದಾರೆ. ಇದರೊಂದಿಗೆ ಜನಾರ್ದನ್ ರೆಡ್ಡಿ ಪುತ್ರನ ಜೊತೆ ಕನ್ನಡದ ಸಿನಿಮಾ ಮಾಡುತ್ತಿದ್ದಾರೆ. ಇನ್ನೂ ಶ್ರೀಲೀಲಾ ನಟನೆಯ ಮೊದಲ ಬಾಲಿವುಡ್ ಚಿತ್ರವನ್ನು ಸೈಫ್ ಪುತ್ರ, ಇಬ್ರಾಹಿಂ ಅಲಿ ಖಾನ್ ಜೊತೆ ನಟಿಸಲು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಎನ್ನಲಾಗಿದೆ. ಇದಕ್ಕೆ 'ದಿಲ್ಲರ್' ಎಂದು ಟೈಟಲ್ ಇಡಲಾಗಿದೆಯಂತೆ. ಸದ್ಯ, ನಟಿಯ ಸಿನಿಮಾ ಲಿಸ್ಟ್ ಕೇಳಿ ಫ್ಯಾನ್ಸ್ ಖುಷಿಪಡುತ್ತಿದ್ದಾರೆ.

# ಶೂಟಿಂಗ್‌ಗೆ ಡೆವಿಲ್ ರೆಡಿ; ಸತತ ಚಿತ್ರೀಕರಣಕ್ಕೆ ತಂಡ ನಿರ್ಧಾರ?



ದರ್ಶನ್‌ಗೆ ಬೇಲ್ ಸಿಕ್ಕಿ, ಸದ್ಯ ಮೈಸೂರಿನ ಫಾರ್ಮ್ ಹೌಸ್ ನಲ್ಲಿ ವಿಶ್ರಾಂತಿಯಲ್ಲಿದ್ದಾರೆ. ಈ ನಡುವೆಯೇ ಅವರ ಅಭಿಮಾನಿಗಳು ಕೇಳುತ್ತಿರುವ ಪ್ರಶ್ನೆ ಶೂಟಿಂಗ್ ಅಖಾಡಕ್ಕೆ ಯಾವಾಗ' ಎಂದು. ಈಗ ಗಾಂಧಿನಗರದಿಂದ ಸುದ್ದಿಯೊಂದು ಕೇಳಿಬಂದಿದೆ. ಅದು ಡೆವಿಲ್' ಸಿನಿಮಾದ ಚಿತ್ರೀಕರಣ ಕುರಿತಾದ್ದು. ಮೂಲಗಳ ಪ್ರಕಾರ, ಜನವರಿ 20ರ ನಂತರ ಡೆವಿಲ್ ಸಿನಿಮಾದ ಶೂಟಿಂಗ್ ಅಖಾಡಕ್ಕೆ ಇಳಿಯಲಿದೆ. ಹಾಗಂತ ಈ ಶೆಡ್ಯೂಲ್‌ನಲ್ಲಿ ದರ್ಶನ್ ಇರಲ್ಲ ಎಂಬ ಮಾತೂ ಕೇಳಿಬರುತ್ತಿದೆ.

ದರ್ಶನ್ ಇಲ್ಲದ ದೃಶ್ಯಗಳ ಚಿತ್ರೀಕರಣ ಮಾಡಲು ಚಿತ್ರತಂಡ ಮುಂದಾಗಿದ್ದು, ಈಗಾಗಲೇ ಚಿತ್ರಕ್ಕೆ ಸಂಬಂಧ ಪಟ್ಟವರಿಗೆ ಈ ಕುರಿತು ಮಾಹಿತಿ ರವಾನಿಸಲಾಗಿದೆಯಂತೆ. ಸದ್ಯ ದರ್ಶನ್ ಬೆನ್ನು ನೋವಿನಿಂದ ಬಳಲುತ್ತಿರುವ ಜೊತೆಗೆ ಸಾಕಷ್ಟು ತೂಕ ಕೂಡಾ ಕಳೆದುಕೊಂಡಿದ್ದಾರೆ. ಹಾಗಾಗಿ, ಅವರು ಚಿತ್ರೀಕರಣಕ್ಕೆ ಅಣಿಯಾಗಲು ಸ್ವಲ್ಪ ಸಮಯಬೇಕಾಗಿದ್ದು, ಅಷ್ಟರಲ್ಲಿ ಬೇರೆ ದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳಲು ತಂಡ ರೆಡಿಯಾಗಿದೆ. ಡೆವಿಲ್ ಚಿತ್ರದ ಫಸ್ಟ್‌ಲುಕ್, ಟೀಸರ್ ಕೂಡಾ ಹಿಟ್ ಆಗುವ ಮೂಲಕ ನಿರೀಕ್ಷೆ ಹೆಚ್ಚಿಸಿತ್ತು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಚಿತ್ರ ಡಿಸೆಂ ಬರ್‌ನಲ್ಲಿ ತೆರೆಕಾಣಬೇಕಿತ್ತು. ಒಮ್ಮೆ ದರ್ಶನ್ ಡೆವಿಲ್ ತಂಡಕ್ಕೆ ಎಂಟ್ರಿಕೊಟ್ಟ ನಂತರ ಸತತವಾಗಿ ಚಿತ್ರೀಕರಣ ಮಾಡಲು ತಂಡ ಯೋಜನೆ ಹಾಕಿಕೊಂಡಿದೆಯಂತೆ. ಹೊಸ ವರ್ಷ ಅಕ್ಟೋಬರ್ ವೇಳೆಗೆ ಡೆವಿಲ್‌ನನ್ನು ತೆರೆಮೇಲೆ ತರುವ ಯೋಜನೆ ಚಿತ್ರತಂಡಕ್ಕಿದೆ ಎನ್ನುವುದು ಗಾಂಧಿನಗರದ ಮಾತು.

# ಸೂಪರ್ ಹಿಟ್ 'ಭೈರತಿ ರಣಗಲ್' ಓಟಿಟಿ ರಿಲೀಸ್‌ಗೆ ಡೇಟ್ ಫಿಕ್ಸ್



ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರ ಇತ್ತೀಚೆಗಿನ ಬ್ಲಾಕ್ ಬಸ್ಟರ್ 'ಭೈರತಿ ರಣಗಲ್' ಓಟಿಟಿ ರಿಲೀಸ್‌ಗೆ ದಿನ ನಿಗದಿಯಾಗಿದೆ. ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' 2 ಬಸ್ಟರ್ ಹಿಟ್ ಆಗಿತ್ತು. ಆ ಮೂಲಕ 'ಮಸ್ತಿ' ಪ್ರೀಕ್ವೆಲ್‌ಗೂ ಪ್ರೇಕ್ಷಕರು ಜೈಕಾರ ಹಾಕಿದ್ದರು. ನರ್ತನ್ ನಿರ್ದೇಶನದ 'ಭೈರತಿ ರಣಗಲ್ ನ.15 ರಂದು ರಿಲೀಸ್ ಆಗಿತ್ತು. ಕಪ್ಪು ಕೋಟ್ ತೊಟ್ಟು ವಕೀಲನಾಗಿ ಮತ್ತು ಮಾಸ್ ಹೀರೋ ಆಗಿ ಅಬ್ಬರಿಸಿದ ಎರಡು ಶೇಡ್ ನಲ್ಲಿ ಸೆಂಚುರಿ ಸ್ಟಾರ್ ಮಿಂಚಿದ್ದರು. ಸಿನಿಮಾ ಥಿಯೇಟರ್‌ನಲ್ಲಿ ಹಿಟ್ ಆಗುವುದರ ಜತೆಗೆ ಬಾಕ್ಸಾಫೀಸ್‌ನಲ್ಲೂ ಸಮಾಧಾನ ತರುವ ಬ್ಯುಸಿನೆಸ್ ಮಾಡಿತ್ತು. ಅಂದಾಜಿನ ಪ್ರಕಾರ ಚಿತ್ರ 20 ಕೋಟಿ ಕಲೆಕ್ಷನ್ ಮಾಡಿದೆ ಎನ್ನಲಾಗಿದೆ. ಶಿವರಾಜ್ ಕುಮಾರ್ ಅವರ ಮಾಸ್ ಲುಕ್ ನೋಡಿ ಫ್ಯಾನ್ಸ್‌ಗಳು ಫಿದಾ ಆಗಿದ್ದರು. ಕನ್ನಡ ಚಿತ್ರರಂಗಕ್ಕೆ 'ಭೈರತಿ ರಣಗಲ್' ಬ್ಲಾಕ್ ಬಸ್ಟರ್ ಹಿಟ್ ತಂದುಕೊಟ್ಟಿತ್ತು. ಇದೀಗ ಸಿನಿಮಾ ರಿಲೀಸ್ ಆಗಿ 40 ದಿನಕ್ಕೆ 'ಭೈರತಿ ರಣಗಲ್ ಓಟಿಟಿ ಅಖಾಡಕ್ಕೆ ಕಾಲಿಡಲಿದೆ. ಮಾಸ್ ಲೀಡರ್ ಈಗ ಪ್ರೈಮ್ ಲೀಡರ್ ಆಗಲು ಸಿದ್ಧರಾಗಿದ್ದಾರೆ ಎಂದು ಓಟಿಟಿ ರಿಲೀಸ್ ಡೇಟ್ ಅನೌನ್ಸ್ ಮಾಡಲಾಗಿದೆ. ಇಂದಿನಿಂದಲೆ 'ಭೈರತಿ ರಣಗಲ್ ಅಮೇಜಾನ್ ಪ್ರೈಮ್‌ನಲ್ಲಿ ಸ್ಟ್ರೀಮಿಂಗ್ ಆಗಲಿದೆ. ಆ ಮೂಲಕ ಕ್ರಿಸ್ಮಸ್ ಹಾಲಿಡೇಗೆ ಸಿನಿಮಂದಿಗೆ ಭರ್ಜರಿ ಮನರಂಜನೆ ಸಿಗಲಿದೆ. ಸಿನಿಮಾದಲ್ಲಿ ದೇವರಾಜ್, ಅವಿನಾಶ್, ರಾಹುಲ್ ಭೋಸ್, ರುಕ್ಮಿಣಿ ವಸಂತ್ ಮುಂತಾದವರು ನಟಿಸಿದ್ದು, ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜಕುಮಾರ್ ಅವರು ಈ ಸಿನಿಮಾವನ್ನು ನಿರ್ಮಿಸಿದ್ದಾರೆ.

# ಅಲ್ಲು ಅರ್ಜುನ್‌ಗೆ ಖಾಕಿ ಫುಲ್ ಡ್ರಿಲ್



ಪುಷ್ಪ 2 ಪ್ರೀಮಿಯರ್ ಶೋ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದ ಸಂಬಂಧ ಮಂಗಳವಾರ ಹೈದರಾಬಾದ್‌ನ ಚಿಕ್ಕಡಪಲ್ಲಿ ಪೊಲೀಸರು ನಟ ಅಲ್ಲು ಅರ್ಜುನ್ ಅವರನ್ನು ಸತತ 4 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ. ಚಿಕ್ಕಡಪಲ್ಲಿ ಪೊಲೀಸ್ ಠಾಣೆಯಲ್ಲಿ ಎಸಿಪಿ ರಮೇಶ್ ಕುಮಾರ್ ನೇತೃತ್ವದಲ್ಲಿ ಇನ್‌ಸ್ಪೆಕ್ಟರ್ ನಾಯಕ್ ಅವರಿಂದ ಅಲ್ಲು ಅರ್ಜುನ್ ಅವರ ವಿಚಾರಣೆ ನಡೆಸಲಾಗಿದೆ. ಡಿ.4ರಂದು ಸಂಭವಿಸಿದ ಕಾಲ್ತುಳಿತ ದುರಂತದ ಬಗ್ಗೆ ಪ್ರಶ್ನೆ ಮಾಡಲಾಗಿದೆ.

## ಏನೇನು ಪ್ರಶ್ನೆ ಕೇಳಲಾಗಿದೆ?

- ಥಿಯೇಟರ್‌ಗೆ ಬರಬೇಡಿ ಎಂದು ಥಿಯೇಟರ್ ಮ್ಯಾನೇಜ್‌ಮೆಂಟ್ ಮೊದಲೇ ಹೇಳಿದ್ದಾರಾ?
- ಥಿಯೇಟರ್‌ಗೆ ಬರಲು ಪೊಲೀಸ್ ಅನುಮತಿ ಕೇಳಿದ್ದೀರಾ, ಅದರ ಪ್ರತಿ ಇದೆಯೇ?
- ಥಿಯೇಟರ್‌ನಲ್ಲಿರುವ ಪರಿಸ್ಥಿತಿ ಬಗ್ಗೆ ನಿಮ್ಮ ತಂಡ ನಿಮಗೆ ಮಾಹಿತಿ ನೀಡಿತ್ತೇ?
- ನಿಮ್ಮ ಆಗಮನದ ಹಿನ್ನೆಲೆ ಭದ್ರತೆ ಹೆಚ್ಚಿಸಲಾಗಿತ್ತೆ, ಎಷ್ಟು ಜನ ಬೌನ್ಸರ್ ನೇಮಕ ಮಾಡಲಾಗಿತ್ತು
- ನಿಮ್ಮ ಆಗಮನಕ್ಕೆ ಅನುಮತಿ ನೀಡಲು ಪೊಲೀಸರು ನಿರಾಕರಿಸಿದ್ದರು. ಇದರ ಮಾಹಿತಿ ನಿಮ್ಮಗಿತ್ತಾ
- ಕಾಲ್ತುಳಿತ ಸಂಭವಿಸಿದ್ದು ಗೊತ್ತಾದರೂ, ಥಿಯೇಟರ್‌ನಿಂದ ಯಾಕೆ ನೀವು ಹೊರಗೆ ಹೋಗಲಿಲ್ಲ

ಅಂದಹಾಗೆ, ಡಿ.13ರಂದು ಕಾಲ್ತುಳಿತ ಪ್ರಕರಣ ಸಂಬಂಧ ಅಲ್ಲು ಅರ್ಜುನ್‌ರನ್ನು ಚಿಕ್ಕಡಪಲ್ಲಿ ಪೊಲೀಸರು ಬಂಧಿಸಿದ್ದರು. ಬೇಲ್ ಸಿಕ್ಕ ಹಿನ್ನೆಲೆ ನಟ ರಿಲೀಸ್ ಆಗಿದ್ದರು.

ಈಗಾಗಲೇ ಮೃತ ರೇವತಿ ಕುಟುಂಬಕ್ಕೆ ಅಲ್ಲು ಅರ್ಜುನ್ 25 ಲಕ್ಷ ರೂ. ಪರಿಹಾರ ಘೋಷಿಸಿದ್ದರು. ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ತಮ್ಮ ಇಡೀ ತಂಡ ನೋಡಿಕೊಳ್ಳಲಿದೆ ಎಂದು ತಿಳಿಸಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966